ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 30
ಜುಲೈ 28, 2013

ಪುಟ 16 ರೂ. 10/-





ಶತಾಯುಷಿ ಸಂಗಾತಿ ಸಮರ್ ಮುಖರ್ಜಿ ಇನ್ನಿಲ್ಲ

ಬೆಂಗಳೂರಿನತ್ತ ಕಾರ್ಮಿಕರ ದಂಡು



'ವಿದ್ಯಾರ್ಥಿ ವೇತನ ಕಿತ್ತುಕೊಳ್ಳಲು ಬಿಡೆವು' -ಬೀಡಿ ಕಾರ್ಮಿಕರ ಘೋಷಣೆ



ಹಮಾಲಿ ಕಾರ್ಮಿಕರಿಗೆ ಪಿಂಚಣಿ ಸೌಲಭ್ಯ ಕೊಡಿ



ತಾಳ್ಮೆಯ ಪರೀಕ್ಷೆ ಮಾಡದಿರಿ -ಸೇವೆ ಖಾಯಂ ಮಾಡಿರಿ' - ಪೌರ ಕಾರ್ಮಿಕರ ಎಚ್ಚರಿಕೆ

ಬೆಲೆ ಏರಿಕೆ ತೀವ್ರಗೊಳಿಸುವ ಬಜೆಟ್

ಸಿದ್ದರಾಮಯ್ಯ ನೇತೃತದ ಕಾಂಗ್ರೆಸ್ ಸರಕಾರ ಎಲ್ಲಾ ವಸ್ತುಗಳ ಬೆಲೆ ಏರಿಕೆ ತೀವ್ರ ಗೊಳಿಸುವ – ಅಭಿವೃದ್ದಿ ಶೂನ್ಯ ಬಜೆಟ್ ಮಂಡಿಸಿರುವುದು ಇದನ್ನು ಅವರೇ ಕೊಟ್ಟಿರುವ ಅಂಕಿ–ಅಂಶಗಳು ಸಾರಿ ಹೇಳುತ್ತವೆ.

– ಎಸ್. ಪ್ರಸನ್ನಕುಮಾರ್

ಕರ್ನಾಟಕದಲ್ಲಿ ನೂತನವಾಗಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ದಿನಾಂಕ 12 ಜೂಲೈ 2013 ರಂದು ಮಂಡಿಸಿರುವ ಬಜೆಟ್ ಪ್ರಸ್ತಾವನೆಗಳು ಒಟ್ಟಾರೆಯಾಗಿ ಎಲ್ಲಾ ವಸ್ತುಗಳ ಬೆಲೆಗಳು ಮತ್ತಷ್ಟು ತೀವ್ರಗತಿಯಲ್ಲಿ ಏರಿಕೆ ಯಾಗುವಂತೆ ಪರಿಣಾಮ ಬೀರುತ್ತದೆ ಹಾಗೂ ಮೂಲಭೂತ ಸೌಕರ್ಯಗಳಿಗೆ ಮತ್ತು ಸಾಮಾಜಿಕ ಭದ್ರತೆ, ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡದೆ ಅಭಿವೃದ್ಧಿ ಶೂನ್ಯತೆಯನ್ನು ರಾಜ್ಯದಲ್ಲಿ ನಿರ್ಮಾಣ ಮಾಡಲಿದ್ದು ಇಂತಹ ಮುನ್ನೋಟ ರಹಿತ ಬಜೆಟ್ ಅನ್ನು ಸಿಐಟಿಯು ಖಂಡಿಸುತ್ತದೆ.

ಬಜೆಟ್‌ನಲ್ಲಿ ಒಟ್ಟು ಖರ್ಚುಗಳ ಪ್ರಸ್ತಾಪಗಳು ರೂ. 1,15,017 ಕೋಟಿ 51 ಲಕ್ಷಗಳಾಗಿದೆ. ಆದಾಯ ಸಂಗ್ರಹದ ಪ್ರಸ್ತಾಪಗಳು ಒಟ್ಟು ರೂ. 98,186 ಕೋಟಿ 37 ಲಕ್ಷಗಳಾಗಿದೆ. ಅಂದರೆ ಬಜೆಟ್ ಕೊರತೆಯು ರೂ. 16,831 ಕೋಟಿ 14 ಲಕ್ಷಗಳಾಗಿದೆ. ಸದರಿ ಕೊರತೆ–ಯ ಅರ್ಥವು ನಿರ್ಧಿಷ್ಟಗೊಳಿಸದ ತೆರಿಗೆಗಳು ಎಂದು ಪರಿಗಣಿಸಲಾಗುವುದು. ಬಜೆಟ್ ಭಾಷಣದಲ್ಲಿ ಮಂಡಿಸಿದ ತೆರಿಗೆಯೇತರ ಆದಾಯ ಹೆಚ್ಚಳದ ಪ್ರತಿಪಾದನೆಯು ಕೇವಲ ಜನರನ್ನು ಮರಳುಗೊಳಿಸುವ ಅಂಶವಾಗಿದೆ. ಬಜೆಟ್ ಪ್ರಸ್ತಾವನೆಗಳಲ್ಲಿ ಅದರ ಲವಲೇಶವೂ ಪ್ರತಿಬಿಂಬಿತವಾಗಿಲ್ಲ.

ರಾಜ್ಯ ಅಬ್ಕಾರಿ ತೆರಿಗೆ ಮತ್ತು ಮಾರಾಟ ತೆರಿಗೆ ಹಾಗೂ ಸೇವಾ ತೆರಿಗೆ, ವಿದ್ಯುತ್ ಮೇಲಿನ ತೆರಿಗೆಗಳನ್ನು ತೀವ್ರಗತಿಯಲ್ಲಿ ಹೆಚ್ಚಿಸಲಾಗಿದೆ. ಮಾರಾಟ ತೆರಿಗೆಯ ಮೊತ್ತವು ರೂ. 28,425 ಕೋಟಿಗಳಿಂದ ರೂ. 33,590 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಅಬ್ಕಾರಿ ಸುಂಕವು ರೂ. 11,300 ಕೊಟಿಗಳಿಂದ ರೂ. 12600 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಸೇವಾ ತೆರಿಗೆಯನ್ನು ರೂ. 1492 ಕೋಟಿಗಳಿಂದ ರೂ 1797 ಕೋಟಿಗಳಿಗೆ ಹೆಚ್ಚಿಸಲಾಗಿದೆ. ವಿದ್ಯುತ್ ಮೇಲಿನ ತೆರಿಗೆಯನ್ನು ರೂ. 760 ಕೋಟಿಗಳಿಂದ ರೂ. 825 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಈ ಎಲ್ಲಾ ತೆರಿಗೆಗಳ ಪರಿಣಾಮವು ನೇರವಾಗಿ ತೀವ್ರ ಬೆಲೆ ಏರಿ–ಕೆಗೆ ಕಾರಣವಾಗಲಿವೆ.

ಗ್ರಾಮೀಣ ಅಭಿವೃದ್ದಿಗೆ ಕಳೆದ ವರ್ಷ ಮಾಡಲಾಗಿರುವ ವಾಸ್ತವಿಕ ವೆಚ್ಚ ರೂ. 5134 ಕೋಟಿ. ಚಾಲ್ತಿ ಹಣಕಾಸು ವರ್ಷಕ್ಕೆ ಹಂಚಿಕೆ ಮಾಡಿರುವ ಹಣ ರೂ. 4672 ಕೋಟಿ. ಕುಡಿಯುವ ನೀರಿಗಾಗಿ ಕಳೆದ ವರ್ಷ ಮಾಡಿದ ಖರ್ಚು ರೂ. 385 ಕೋಟಿ ಈ ಬಾರಿ ರೂ. 376 ಕೋಟಿ ಹಂಚಿಕೆ ಮಾಡಲಾಗಿದೆ. ನೈಸರ್ಗಿಕ ವಿಕೋಪಗಳಿಗಾಗಿ ಕಳೆದ ವರ್ಷ ಮಾಡಲಾಗಿರುವ ವೆಚ್ಚವು ರೂ. 857 ಕೋಟಿ ಈ ಬಾರಿ ಮಾಡಿರುವ ಹಂಚಿಕೆಯು ರೂ. 417 ಕೋಟಿ. ಗುಡಿಸಲು ಮುಕ್ತ ರಾಜ್ಯ ನಿರ್ಮಾಣ ಮಾಡುವುದಾಗಿ ಭಾಷಣ ಮಾಡಿದ ಕಾಂಗ್ರೆಸ್ ಸರಕಾರವು ಕಳೆದ ವರ್ಷ ಮನೆಗಳ ನಿರ್ಮಾಣಗಳಿಗೆ ಮಾಡಿದ ವೆಚ್ಚವು ರೂ. 1814 ಕೋಟಿ ಇರುವಾಗ ಈ ಬಾರಿ ಮಾಡಿರುವ ಹಂಚಿಕೆಯು ರೂ.1378 ಕೋಟಿಗಳಾಗಿದೆ. ಕಾರ್ಮಿಕ ಕಲ್ಯಾಣಕ್ಕಾಗಿ ಕಳೆದ ವರ್ಷ ಮಾಡಿದ್ದ ವೆಚ್ಚವು ರೂ. 456 ಕೋಟಿ. ಈ ಬಾರಿ ಹಂಚಿಕೆ ಮಾಡಿರುವ ಮೊತ್ತವು ರೂ. 392 ಕೋಟಿ. ವಿದ್ಯುತ್ ರಂಗಕ್ಕೆ ಹಿಂದಿನ ವರ್ಷ ಮಾಡಿದ ವೆಚ್ಚವು ರೂ. 6354 ಕೋಟಿ. ಈ ಬಾರಿ ಮಾಡಿರುವ ಹಂಚಿಕೆಯು ರೂ. 5273 ಕೋಟಿ. ಈ ಬಾರಿಯ ಬಜೆಟ್ ನಿರ್ವಹಣೆಯ ದಿಶೆಯಲ್ಲಿ ವಿಶ್ವ ಬ್ಯಾಂಕು, ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕು ಮುಂತಾದ ಕಡೆಗಳಿಂದ ಬಾರಿ ಪ್ರಮಾಣದಲ್ಲಿ ಸಾಲ ಮಾಡಲು ಯೋಜಿಸಲಾಗಿದ್ದೂ ಬಡ್ಡಿ ಪಾವತಿಗಳು ಕಳೆದ ವರ್ಷ ರೂ. 6852 ಕೋಟಿಗಳಾದ್ದದ್ದು ಈ ಬಾರಿ ರೂ. 8500 ಕೋಟಿಗಳಾಗಲಿದೆ. ಇಂತಹ ಹಂಚಿಕೆಗಳಿಂದ ಎಂತಹ ಅಭಿವೃದ್ಧಿ ಸಾಧಿಸಲು ಸಾಧ್ಯವೆಂಬುದು ಪ್ರಶ್ನಾರ್ಹವಾಗಿದೆ.


ರಸ್ತೆಗಳ ಅಭಿವೃದ್ಧಿಗೆ ಸರಕಾರವು ಸೂಚಿಸಿರುವ ಮಾರ್ಗ ಪಿಪಿಪಿ (ಪಬ್ಲಿಕ್ ಇನವೆಸ್ಟ್‌ಮೆಂಟ್ ಪ್ರವೈಟ್ ಪ್ರಾಫಿಟ್) ಆಗಿದೆ. ಎಲ್ಲಾ ರಸ್ತೆಗಳನ್ನು ಬಳಕೆದಾರರ ಶುಲ್ಕಗಳ ಮೂಲಕ ನಿರ್ಮಾಣ ಮಾಡುವ ಸೂಚನೆ ಮಾಡಲಾಗಿದೆ. ವೆಚ್ಚ ಸು ಧಾರಣಾ ಆಯೋಗದ ಸಿಫಾರಸ್ಸುಗಳನ್ನು ಜಾರಿಗೊಳಿಸಲು ಕ್ರಮವಹಿಸುವುದಾಗಿ ಪ್ರಕಟಿಸಲಾಗಿದೆ. ಅಂ–ದರೆ ಜನ ಕಲ್ಯಾಣ ಕಾರ್ಯಕ್ರಮಗಳಿಗೆ ನೀಡುವ ವೆಚ್ಚಗಳನ್ನು ಕ್ರಮೇಣ ಕಡಿಮೆ ಮಾಡುವುದಾಗಿದೆ. ಪೌರ ಕಾರ್ಮಿಕ ·ಗುತ್ತಿಗೆ ಆಧಾರದಲ್ಲಿ ದಶಕಗಳಿಂದ ಕಡಿ ಕೂಲಿಯಲ್ಲಿ ದುಡಿಯುತ್ತಿದ್ದಾರೆ ಶೋಷಣೆ ಒಳಗಾಗಿದ್ದಾರೆ. ಈ ಕೆಲಸಗಳಲ್ಲಿ ಮುಖ್ಯವಾ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿ ಶೋಷಿತ ಜನತೆ ದುಡಿಯುತ್ತಿದ್ದಾರೆ. ಧಮನ ಒಳಗಾಗಿರುವ ಈ ಕಾರ್ಮಿಕ ವಿಭಾಗ ಕುರಿತು ಕೇವಲ ಅನುಕಂಪದ ಮಾತುಗ ಹೊರಬಿದ್ದಿವೆ ಹೊರತು ಅಗತ್ಯವಾಗಿರು ಹಣಕಾಸು ಸಂಪನ್ಮೂಲವನ್ನು ಒದಗಿಸಿ ವಿದೇಶಿ ನೇರ ಬಂಡವಾಳವನ್ನು ಆಕರ್ಷ ಮಾಡಲು ಬಾರಿ ಕಸರತ್ತನ್ನು ಮಾಡಲಾಗುತ್ತಿ ಆದರೆ ವಿದೇಶ ಬಂಡವಾಳವು ನಮ್ಮ ಜನ ಹಿತಕ್ಕಾಗಿ ಇಲ್ಲಿಗೆ ಬರುವುದಿಲ್ಲ. ಬದಲಾ ವಿದೇಶಿ ಬಂಡವಾಳಗಾರರ ಅತಿ ಲಾ ಕೋರತನಕ್ಕಾಗಿ ಮಾತ್ರ ಬರುತ್ತಾರೆಂ ಸತ್ಯವನ್ನು ಮರೆ ಮಾಚಲಾಗುತ್ತಿದೆ.

ಕಾಂಗ್ರೆಸ್ ರಾಜ್ಯ ಸರಕಾರದ ಮುಖ್ಯಮ ಸಿದ್ದರಾಮಯ್ಯ ಮಂಡಿಸಿರುವ ಬಜೆ ಒಳಗೊಂಡಿರುವ ಎಲ್ಲಾ ಜನ ವಿರೋಧಿ ತೆರಿ ಪ್ರಸ್ತಾವನೆಗಳನ್ನು ಹಿಂದಕ್ಕೆ ಪಡೆಯಲು ವ ರಾಜ್ಯದ ಅಭಿವೃದ್ಧಿಗೆ ಪೂರಕವಾಗುವ ಬಜೆಟ್ ಪ್ರಸ್ತಾಪಗಳನ್ನು ಬದಲಾಯಿಸಲ ಸಿಐಟಿಯು ಒತ್ತಾಯಿಸುತದೆ.

ಸಾರಿಗೆ ನಿಗಮಗಳ ನೌಕರರ ವಿಧಾನ ಸೌಧ ಚಲೋ. ದಿನಾಂಕ 25 ಜೂಲೈ 2013

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲುಕೆಎಸ್‌ಆರ್‌ಟಿಸಿ ಮತ್ತು ಎನ್‌ಇಕೆಆರ್‌ಟಿಸಿ ನಿಗಮಗಳಲ್ಲಿ 120000 ನೌಕರರು ದುಡಿಯುತ್ತಿದ್ದೂ, ದಿನನಿತ್ಯ ಕಿರುಕುಳ, ಅವೈಜ್ಞಾನಿಕ ಆಡಳಿತ ವಿಧಾನ– ಎನ್.ಐ.ಎನ್.ಸಿ, ಅಕ್ರಮ ದಂಡಗಳು, ಕಿರುಕುಳದ ವರ್ಗಾವಣೆ ನೀತಿ, ಇಪಿಕೆಎಂ, ಕೆಎಂಪಿಎಲ್ ಮುಂದಾದ ಒತ್ತಡಗಳು ಹಾಗೂ ಡಬಲ್ ಡ್ಯೂಟಿ ತ್ರಿಬಲ್ ಡ್ಯೂಟಿಗಳ ಒತ್ತಡ, ಅಗತ್ಯಕ್ಕಿಂತ ಸಾಕಷ್ಟು ಕೊರತೆಯ ಸಿಬ್ಬಂದಿ, ಟರ್ಮಿನಲ್ ಸ್ಥಳಗಳಲ್ಲಿ ಯಾವುದೇ ಕನಿಷ್ಟ ನಾಗರೀಕ ಸೌಲಭ್ಯಗಳು ಇಲ್ಲದೆ ಪರದಾಡುತ್ತಿದ್ದಾರೆ. ಕುಡಿಯುವ ನೀರು, ಶೌಚಾಲಯದ ಲಭ್ಯತೆಯೂ ಇಲ್ಲದೇ ಸಂಕಷ್ಟದಲ್ಲಿದ್ದಾರೆ. ನೌಕರ ಸ್ನೇಹಿ ವರ್ಗಾವಣೆ ನೀತಿಯನ್ನು ರೂಪಿಸಲು ಘನ ರಾಜ್ಯ ಉಚ್ಚ ನ್ಯಾಯಾಲಯ ನಿರ್ದೇಶನವಿದ್ದರೂ ಕ್ರಮ ಕೈಗೊಳ್ಳಲಾಗುತ್ತಿಲ್ಲ. ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಸಿಐಟಿಯುನ ನೇತೃತ್ವದ ಕೆಎಸ್‌ಆರ್‌ಟಿಸಿ ನೌಕರರ ಫೆಡರೇಷನ್ ವಿಧಾನ ಸೌಧ ಚಲೋ ಚಳುವಳಿಯನ್ನು ದಿನಾಂಕ 25 ಜುಲೈ 2013 ರಂದು ನಡೆಸಲಾಗುತ್ತಿದೆ.

ಬೈಂದೂರು: ಅಂಗವಿಕಲರಿಗೆ ವೀಲ್ ಚೆಯರ್, ತ್ರಿಚಕ್ರ ಸೈಕಲ್ ವಿತರಣೆ



ಉಡುಪಿ ಜಿಲ್ಲಾ ಅಂಗವಿಕಲ ಸಬಲೀಕರಣ ಅಧಿಕಾರಿ ಕಚೇರಿಯಿಂದ ಅಂಗವಿಕಲರಿಗೆ ಮಂಜೂರಾದ ತ್ರಿಚಕ್ರ ಸೈಕಲ್ ಹಾಗೂ ವೀಲ್ ಚೆಯರ್ ವಾಹನ ವಿತರಣಾ ಸಮಾರಂಭವನ್ನು 14 ಜುಲೈ 2013ರಂದು ಬೈಂದೂರಿನಲ್ಲಿ ಏರ್ಪಡಿಸಲಾತ್ತು. ಕುಂದಾಪುರ ತಾಲೂಕು ಅಂಗವಿಕಲರ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತ ಮಂಜುನಾಥ ಹೆಬ್ಬಾರ್ ಕಾಲ್ತೋಡು ರವರು ಸಮಾರಂಭದಲ್ಲಿ ಮಾತನಾಡುತ್ತಾ ಅಂಗವಿಕಲರಿಗಾಗಿ ಇರುವ ಸರಕಾರದ ವಿವಿಧ ಸೌಲಭ್ಯವನ್ನು ಪಡೆದುಕೊಳ್ಳುವುದರ ಜೊತೆಗೆ ಅಂಗವಿಕಲರಿಗೆ ಸರಕಾರಿ ಹಾಗೂ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗಾವಕಾಶದಲ್ಲಿ ಶೇ. 5% ರಷ್ಟು ಮೀಸಲಾತಿ ನಿಯಮ ಜಾರಿ ಮಾಡುವುದಕ್ಕೆ ಸಂಘಟಿ–ತ ಹೋರಾಟ ಮಾಡಬೇಕೆಂದು ಅಭಿಪ್ರಾಯಪಟ್ಟರು.

'ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ (ರಿ)' ಉಡುಪಿ ಜಿಲ್ಲಾ ಸಮಿತಿ ಗೌರವ ಅಧ್ಯಕ್ಷ ವೆಂಕಟೇಶ ಕೋಣಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಎಲ್ಲಾ ರೀತಿಯ ಅಂಗವಿಕಲರಿಗೆ ರಾಜ್ಯಾದ್ಯಂತ ಬಸ್ಸು ಪಾಸು ರಿಯಾಯಿತಿ ಸೌಲಭ್ಯ ನೀಡಬೇಕು. ಅಂಗವಿಕಲರ ತಾಲೂಕು ಗ್ರಾಮೀಣ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರ (VRW & MRW) ಗೌರವಧನ ಹೆಚ್ಚಳ ಹಾಗ ಹುದ್ದೆ ಖಾಯಂ ಮಾಡಬೇಕು ಎಂದ ಸರಕಾರವನ್ನು ಒತ್ತಾಯಿಸಿದರು.

ಅಂಗವಿಕಲ ಫಲಾನುಭವಿ ವೆಂಕಟಯ ದೇವಾಡಿಗ ಪಡುವರಿ, ಮಹಮ್ಮದ್ ಅಬ್ದುಲ ಗಫೂರ್ ಹಾಗೂ ಲಕ್ಷ್ಮೀ ಇವರಿಗೆ ವೀಲ್ ಚೆ–ಯರ್, ತ್ರಿಚಕ್ರ ಸೈಕಲ್ ಹಸ್ತಾಂತರಿಸಲಾಯಿತು ಅಂಗವಿಕಲರ ಪುನರ್ವಸತಿ ಕಾರ್ಯಕರ್ತ ಕೋಟೇಶ್ವರ, ಕೆ. ಕೃಷ್ಣ, ಪಡುವರಿ, ಅನಿತಾ ಉಪ್ಪುಂದ, ಬಾಬು ಕೆ. ದೇವಾಡಿಗ ಬೈಂದೂರು, ರಾಧಾಕೃಷ್ಣ ಡಿ. ಇನ್ನಿತರರು ಉಪಸ್ಥಿತರಿದ್ದರು. ಕೆ. ಕೃಷ್ಣ ಕೋಟೇ ವಂದಿಸಿದರು.

ವರದಿ: ವೆಂಕಟೇಶ ಕೋಣಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಶೆಟ್ಟರ್ ಸರ್ಕಾರದಂತೆಯೇ ಸಿದ್ದು ಸರ್ಕಾರವೂ ಕಾರ್ಮಿಕರನ್ನು ಕಡೆಗಣಿಸುತ್ತಿದೆ

ಇತ್ತೀಚೆಗೆ ಉನ್ನತ ಶಿಕ್ಷಣ ಖಾತೆ ಸಚಿವ ಆರ್.ವಿ.ದೇಶಪಾಂಡೆ ಅವರಿಗೆ ಮನವಿ ಸಲ್ಲಿಸಲು ಬಂದಿದ್ದ ದಿನಗೂಲಿ ನೌಕರನೊಬ್ಬನು ಸಚಿವರ ಕಛೇರಿಯಲ್ಲೇ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಪಟ್ಟ ಪ್ರಕರಣ ಅಷ್ಟೇನು ದೊಡ್ಡ ಸುದ್ದಿಯಾಗಲಿಲ್ಲ. ಈತನಿಗೆ ಕಳೆದ ಕೆಲವು ತಿಂಗಳುಗಳಿಂದ ಸಂಬಳ ಕೊಟ್ಟಿರಲಿಲ್ಲ. ಸಂಬಳಕ್ಕಾಗಿ ವಿನಂತಿ ಮಾಡಿದಾಗ ಅಧಿಕಾರಿಗಳು ಹೀನಾಯವಾಗಿ ಬೈದು ಅವಮಾನಿಸಿದ್ದರು. ತೀವ್ರ ಜಿಗುಪ್ಸೆಗೆ ಒಳಗಾದ ಆತ ಸಿದ್ದರಾಮಯ್ಯ ಸರ್ಕಾರದ ಗಮನ ಸೆಳೆಯಲು ಆತ್ಮಹತ್ಯೆಗೆ ಮುಂದಾಗಿದ್ದ.

ಕಳೆದ ಡಿಸೆಂಬರ್ ತಿಂಗಳಲ್ಲಿ ಚಿಕ್ಕಬಳ್ಳಾಪುರದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯದ ದಿನಗೂಲಿ ಅಡುಗೆ ನೌಕರನೊಬ್ಬ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದ. ಹಲವು ತಿಂಗಳುಗಳಿಂದ ಆತನಿಗೆ ವೇತನ ನೀಡಿರಲಿಲ್ಲ. ಇಬ್ಬರು ಮಕ್ಕಳನ್ನು ಒಳಗೊಂಡ ಕುಟುಂಬದ ನಿರ್ವಹಣೆ ದುಸ್ತರವಾಗಿ, ಬೇಸತ್ತು ಆತ ಆತ್ಮಹತ್ಯೆ ಮಾಡಿಕೊಂಡಿದ್ದ. ಆಗ ರಾಜ್ಯದಲ್ಲಿ ಜಗದೀಶ್ ಶೆಟ್ಟರ್ ನೇತೃತ್ವದ ಬಿಜೆಪಿ ಸರ್ಕಾರವಿತ್ತು.

ಕಾರ್ಮಿಕರ ವಿಷಯದಲ್ಲಿ ಬಿಜೆಪಿ ಪಕ್ಷದ ಸರ್ಕಾರಕ್ಕಾಗಲಿ ಕಾಂಗ್ರೆಸ್ ಪಕ್ಷದ ಸರ್ಕಾರಕ್ಕಾಗಲಿ ಧೋರಣಾತ್ಮಕ ವೆತ್ಯಾಸ ಏನೂ ಇಲ್ಲ ಎಂಬುದಕ್ಕೆ ಇವೆರಡು ತಾಜಾ ಉದಾಹರಣೆಗಳಾಗಿವೆ. ಎಲ್ಲಾ ಇಲಾಖೆಗಳ ಅಡಿಯಲ್ಲಿ ಇಂತಹ ಸಾವಿರಾರು ನೌಕರರು/ಕಾರ್ಮಿಕರು ದಿನಗೂಲಿ ಅಥವ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದಾರೆ. ಇವರಿಗೆ ಸರ್ಕಾರ ನಿಗದಿ ಪಡಿಸಿರುವ ವೇತನವೇ ಅತ್ಯಂತ ಕಮ್ಮಿ, ಅದನ್ನೂ ಸಹ ಗುತ್ತಿಗೆದಾರರು ತಿಂಗಳು ಗಟ್ಟಲೆ ಬಾಕಿಇಟ್ಟು ಕಾರ್ಮಿಕರನ್ನು ಸತಾಯಿಸುತ್ತಿರುತ್ತಾರೆ. ಇಲಾಖೆಯ ಅಧಿಕಾರಿಗಳಿಗೆ ವಿಷಯ ತಿಳಿದಿದ್ದರೂ ಅವರೂ ಸಹ ಗುತ್ತಿಗೆದಾರರೊಂದಿಗೆ ಕೈಜೋಡಿಸಿ ಬಡ ಗುತ್ತಿಗೆ ಕಾರ್ಮಿಕರ ಸುಲಿಗೆ ಮಾಡುತ್ತಿರುತ್ತಾರೆ.

ಕಾಯಂ ಸ್ವರೂಪದ ಕೆಲಸಕ್ಕೆ ಇವರನ್ನು ನೇಮಿಸಲಾಗಿದ್ದರೂ ಅವರ ಸೇವೆಯನ್ನು ಕಾಯಂಗೊಳಿಸಲು ಸರ್ಕಾರಗಳು ಆಸಕ್ತಿ ತೋರುತ್ತಿಲ್ಲ. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂಬ ಕಾನೂನು ನಿರ್ದೇಶನವನ್ನೂ ಪಾಲಿಸಲಾಗುತ್ತಿಲ್ಲ. ಸುಪ್ರೀಂ ಕೋರ್ಟ್ ತೀರ್ಪನ್ನು ಸಹ ಜಾರಿಗೊಳಿಸಲು ಮುಂದಾಗುತ್ತಿಲ್ಲ.

ಕಳೆದ ಕೆಲವು ವರ್ಷಗಳಿಂದ ಬಜೆಟ್ ಪೂರ್ವದಲ್ಲಿ ರೈತ ಸಂಘಟನೆಗಳನ್ನು ಕರೆದು ಚರ್ಚೆ ಮಾಡುವ ಪರಿಪಾಠವನ್ನೇನೋ ಅನುಸರಿಸಲಾಗುತ್ತಿದೆ. ರೈತ ಸಂಘಗಳು ನೀಡುವ ಸಲಹೆ ಸೂಚನೆಗಳನ್ನು ಬಜೆಟ್‌ನಲ್ಲಿ ಎಷ್ಟರ ಮಟ್ಟಿಗೆ ಅಳವಡಿಸಲಾಗುತ್ತಿದೆ ಎನ್ನುವುದು ಬೇರೆ ಪ್ರಶ್ನೆ. ತೋರಿಕೆಗಾದರೂ ರೈತ ಮುಖಂಡರನ್ನು ಆಹ್ವಾನಿಸಿ ಚರ್ಚಿಸಲಾಗುತ್ತಿದೆ. ಆದರೆ ರಾಜ್ಯದ ಕೈಗಾರಿಕಾ ಹಾಗೂ ಸೇವಾ ಕ್ಷೇತ್ರದಿಂದ ರಾಜ್ಯಕ್ಕೆ ಅತಿ ಹೆಚ್ಚು ಆದಾಯ ತರುವ ಕಾರ್ಮಿಕ ವರ್ಗವನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಟನೆಗಳನ್ನು ಬಜೆಟ್ ಪೂರ್ವ ಚರ್ಚೆಗೆ ಕರೆಯಬೇಕೆಂಬುದು ಕಾಂಗ್ರೆಸ್ ಸರ್ಕಾರಕ್ಕಾಗಲಿ ಬಿಜೆಪಿ ಸರ್ಕಾರಕ್ಕಾಗಲಿ ಇದುವರೆಗೂ ಅಗತ್ಯವೆನಿಸಿಲ್ಲ. ಹೂಡಿಕೆದಾರರನ್ನು ಆಕರ್ಷಿಸಲು ಎಲ್ಲ ರೀತಿಯ ಸೌಕರ್ಯಗಳನ್ನು ರಿಯಾಯ್ತಿಗಳನ್ನು ನೀಡುವ ಈ ಸರ್ಕಾರಗಳು ಉತ್ಪಾದನೆಯಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳುವ ಕಾರ್ಮಿಕರಿಗೆ ಕಾನೂನು ಬದ್ಧ ಸೌಲಭ್ಯಗಳನ್ನು ನಿರಾಕರಿಸುತ್ತವೆ.


ಕಾರ್ಮಿಕರ ಕಲ್ಯಾಣಕ್ಕಾಗಿ ಬಜೆಟ್‌ನಲ್ಲಿ ಹಿಂದಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ 456 ಕೋಟಿ ರೂ. ಮೀಸಲಿಟ್ಟಿದ್ದರು. ಸಿದ್ದರಾಮಯ್ಯ ಈ ಮೊತ್ತವನ್ನು 392 ಕೋಟಿಗೆ ಇಳಿಸಿದ್ದಾರೆ. ರಾಜ್ಯದಲ್ಲಿ ಸುಮಾರು 3 ಕೋಟಿಯಷ್ಟಿರುವ ಕಾರ್ಮಿಕರ ಕಲ್ಯಾಣಕ್ಕೆ 1,000 ಕೋಟಿ ರೂ. ಒದಗಿಸಿದರೂ ಸಾಕಾಗದು. ರಾಜ್ಯದ ಪುರಸಭೆ-ನಗರಸಭೆಗಳಲ್ಲಿ ಸಾವಿರಾರು ಪೌರ ಕಾರ್ಮಿಕರು ದಶಕಗಳಿಂದ ಗುತ್ತಿಗೆ ಆಧಾರದಲ್ಲಿ ಕಡಿಮೆ ಕೂಲಿಗೆ ದುಡಿಯುತ್ತಿದ್ದು ಅವರ ಸೇವೆಯನ್ನು ಕಾಯಂಗೊಳಿಸಿ ಅವರಿಗೆ ಜೀವನಾವಶ್ಯಕ ವೇತನವನ್ನು ನೀಡಲು ಸರ್ಕಾರ ಆಸಕ್ತಿ ತೋರುತ್ತಿಲ್ಲ. ರಾಜ್ಯದ ಕೃಷಿ ಮಾರುಕಟ್ಟೆಗಳಲ್ಲಿ, ಗಿರಣಿಗಳಲ್ಲಿ, ಪೇಟೆಗಳಲ್ಲಿ ದುಡಿಯುತ್ತಿರುವ 3 ಲಕ್ಷಕ್ಕೂ ಹೆಚ್ಚು ಹಮಾಲಿ ಕಾರ್ಮಿಕರಿಗಾಗಿ ಪ್ರತ್ಯೇಕ ಕಲ್ಯಾಣ ನಿಧಿಯನ್ನು ಸ್ಥಾಪಿಸಬೇಕೆಂಬ ಅವರ ಬಹುದಿನಗಳ ಬೇಡಿಕೆಯನ್ನು ಕಡೆಗಣಿಸಲಾಗಿದೆ. ಅನೇಕ ವರ್ಷಗಳ ನಿರಂತರ ಹೋರಾಟದಿಂದ ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ನಿಗದಿಯಾಗಿದ್ದರೂ ಅದನ್ನು ಜಾರಿಮಾಡಲು ಸರ್ಕಾರ ಅಗತ್ಯ ಅನುದಾನವನ್ನು ನೀಡದೆ ಸತಾಯಿಸುತ್ತಿದೆ, ಕೇಂದ್ರ ಸರ್ಕಾರ "ಸ್ಕೀಮ್ ವರ್ಕರ್ಸ್" ಎಂದು ಹೆಸರಿಟ್ಟಿರುವ ಅಂಗನವಾಡಿ, ಬಿಸಿಯೂಟ, ಆಶಾ ಮುಂತಾದ ನೌಕರರಿಗೆ ಇಂದಿನ ಬೆಲೆ ಏರಿಕೆಗೆ ಅನುಗುಣವಾಗಿ ನ್ಯಾಯಬದ್ಧ ವೇತನ (ತಿಂಗಳಿಗೆ ಕನಿಷ್ಠ 10 ಸಾವಿರ ರೂ.) ಕೊಡುವುದಕ್ಕೆ ಹಾಗೂ ಸೇವಾವಧಿ ಮುಗಿದ ನಂತರ ನಿವೃತ್ತಿ ವೇತನ ನೀಡುವುದಕ್ಕೆ ಸರ್ಕಾರ ಮುಂದಾಗುತ್ತಿಲ್ಲ. ಗುತ್ತಿಗೆ ಹಾಗೂ ಹೊರಗುತ್ತಿಗೆ ಪದ್ಧತಿಯ ಮೂಲಕ ಕಾರ್ಮಿಕರ ಶೋಷಣೆ ಆಗುತ್ತಿರುವುದನ್ನು ತಪ್ಪಿಸಲು ಸರ್ಕಾರಕ್ಕೆ ಮನಸ್ಸಿಲ್ಲ.

ರಾಜ್ಯದಲ್ಲಿ ಸುಮಾರು ಒಂದು ಕೋಟಿಯಷ್ಟು ಕೃಷಿ ಕಾರ್ಮಿಕರಿದ್ದಾರೆ. ಹೊಟ್ಟೆಗಾಗುವಷ್ಟು ಕೂಲಿ ಸಿಗದಂತಾಗಿ ಅವರು ನಗರ ಪ್ರದೇಶಗಳಿಗೆ ವಲಸೆ ಬರುತ್ತಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕಂಗೆಟ್ಟ ಇವರು ಅತ್ಯಧಿಕ ಅಪೌಷ್ಟಿಕತೆಯಿಂದ ನರಳುತ್ತಿರುತ್ತಾರೆ. ಇವರಿಗಾಗಿ ಕೇರಳ, ತಮಿಳುನಾಡು, ಆಂಧ್ರ ಪ್ರದೇಶದಲ್ಲಿರುವಂತೆ ಸಮಗ್ರ ಕಾಯ್ದೆಯೊಂದನ್ನು ರಚಿಸಿ ಅದರ ಅಡಿಯಲ್ಲಿ ಕಲ್ಯಾಣ ನಿಧಿಯೊಂದನ್ನು ಸ್ಥಾಪಿಸಬೇಕೆಂಬ ಬೇಡಿಕೆಯನ್ನು ಸರ್ಕಾರ ಪರಿಗಣಿಸುತ್ತಿಲ್ಲ.

ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯಲ್ಲಿ ಬಹುದೊಡ್ಡ ಪಾತ್ರವನ್ನು ನಿರ್ವಹಿಸುತ್ತಿರುವ ಕಾರ್ಮಿಕ ವರ್ಗವನ್ನು ಕಡೆಗಣಿಸುವ ಕಾಂಗ್ರೆಸ್ ಸರ್ಕಾರದ ನೀತಿಯ ವಿರುದ್ಧ ರಾಜ್ಯದ ಕಾರ್ಮಿಕ ವರ್ಗ ಸಮರಶೀಲ ಹೋರಾಟಗಳಿಗೆ ಮುಂದಾಗುವುದು ಅನಿವಾರ್ಯವಾಗಿದೆ.

ಒಡಕುಚೂರುಗಳನ್ನು ಒಂದುಗೂಡಿಸುವ ಬಿಜೆಪಿಯ ದೈನೇಸಿ ಸ್ಥಿತಿ

"ನನಗೆ ತಪ್ಪು ಮಾಡಿರುವುದರ ಅರಿವಾಗಿದೆ. ಮತ್ತೇ ಅಂತಹ ತಪ್ಪನ್ನು ಮಾಡುವುದಿಲ್ಲ" ಎಂದಿರುವ ಮಾಜಿ ಮುಖ್ಯಮಂತ್ರಿ, ಕೆಜೆಪಿ ಪಕ್ಷದ ರಾಜ್ಯಾಧ್ಯಕ್ಷ ಯಡಿಯೂರಪ್ಪನವರ ಈ ಧ್ವನಿಯಲ್ಲಿ ಪಶ್ಚಾತ್ತಾಪವಿದೆಯೋ, ಹತಾಶೆಯೋ ಅಥವಾ ಸಾಂದರ್ಭಿಕ ತಂತ್ರಗಾರಿಕೆಯ ಲೆಕ್ಕಾಚಾರವೋ ತಕ್ಷಣದಲ್ಲಿ ಹೇಳುವುದು ಕಷ್ಟ. ಅಷ್ಟೇ ಅಲ್ಲ, ತಪ್ಪು ಎಂದರೆ ಯಾವುದು? ಹಿಂದೆ ಮಾಡುತ್ತಲೇ ಬಂದ ತಪ್ಪುಗಳಂತೆ ಮುಂದೆ ಇರಲಾರದೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆದರೆ ಅವರು ಆಡಿದ್ದು ಕಳೆದ ಚುನಾವಣೆಯ ಕುರಿತು. ವಿಧಾನ ಸಭೆಯಲ್ಲಿಯೇ ಇಂತಹ ಮಾತುಗಳನ್ನಾಡಿದಾಗ ಬಿಜೆಪಿಯೊಳಗೆ ಪುಳಕವನ್ನೂ, ಮೈತ್ರಿ ಸಾಧ್ಯತೆಯ ಹಸ್ತ ಚಾಚಿದ 'ಜಾತ್ಯಾತೀತ'ರಿಗೆ ಬಿಸಿ ಹುಟ್ಟಿಸಿದೆ, 'ಪರ್ಯಾಯ'ಗಳತ್ತ ಮುಖ ಮಾಡಿಸಿದೆ.



ಬಾಗಿಲು ಬಡಿಯುತ್ತಾ

ವಿಧಾನಸಭೆಯಲ್ಲಿ, ಅದರ ಮೊಗಸಾಲೆಯಲ್ಲಿ ಮತ್ತು ಹೊರಗೂ ಮುಂಬರುವ ಸಂಸದೀಯ ಚುನಾವಣೆಗಳ ಸುತ್ತ ರಾಜಕೀಯ ಚಟುವಟಿಕೆಗಳು ಕೇಂದ್ರೀಕರಣಗೊಳ್ಳುತ್ತಿವೆ. ಕಾಂಗ್ರೆಸ್ 'ಆರ್ಥಿಕ ಸುಧಾರಣೆ 'ಗಳ ಮೂಲಕ ಬಂಡವಾಳಗಾರರ ಸೇವೆಗೆ ತನ್ನ ಬದ್ಧತೆಯನ್ನು ನವೀಕರಿಸಿಕೊಳ್ಳುತ್ತಾ ಲಕ್ಷಾಂತರ ಕೋಟಿ ದೋಚಿಕೊಳ್ಳಲು ಅವಕಾಶ ಕಲ್ಪಿಸುತ್ತಿದ್ದರೆ, ಶಾಶ್ವತ ದರಿದ್ರರಾಗುವ ಬಡವರಿಗೆ ಅಕ್ಕಿ ಹಂಚುವ ಸ್ಕೀಮುಗಳಿಂದ ಸಂತೈಸಲು ಹೆಣಗುತ್ತಿದೆ. ಬಿಜೆಪಿಯು ಮೋದಿ ಮುಖವಾಡ, ಕೋಮುವಾದದ ಉನ್ಮಾದದಿಂದ ಅಧಿಕಾರ ಹಿಡಿಯಲು ಹವಣಿಸುತ್ತಿದೆ. ಆದರೆ ಅದಕ್ಕೆ ಅಷ್ಟೇ ಸಾಲದೂ ಕೂಡ. ಹೀಗಾಗಿ ಅದು ಹೊಸ ಮೈತ್ರಿಗಳ ಹುಡುಕಾಟದಲ್ಲಿ ತೊ ಡಗಿದೆ. ಕರ್ನಾಟಕದ ಮಟ್ಟಿಗೆ 'ಹಳೆ ಗಂಡನ ಪಾದವೇ ಗತಿ'ಯೆಂಬ ಮತಿಗೆಟ್ಟ ಸ್ಥಿತಿಯಲ್ಲಿ ಬಿಜೆಪಿ ದೈನೇಸಿಯಾಗಿ ಅವರಿವರ ಬಾಗಿಲು ಬಡಿಯುತ್ತಾ ನಿಂತಿದೆ. ಇಲ್ಲವಾದರೆ ಬಾಯಿಗೆ ಬಂದಂತೆ ಬೈದು, ಪಕ್ಷ ಇಂತಹ ದುಷ್ಟರಿಂದ ಬಿಡುಗಡೆಯಾಗಿ ಶುದ್ಧವಾಯಿತೆಂದೆಂದೆಲ್ಲಾ ಹೇಳಿಕೊಂಡಿದ್ದ ಬಿಜೆಪಿ ನಾಚಿಕೆ ಬಿಟ್ಟು ಯಡಿಯೂರಪ್ಪನನ್ನು ಮತ್ತೇ ತನ್ನತ್ತ ಕರೆ ತರಲು ಇಷ್ಟು ಹಪಾಹಪಿಸುತ್ತಿರಲಿಲ್ಲ.

ದಿಕ್ಕೇಡಿಗಳ ಹೊಂಚು

ಒಂದು ರಾಜಕೀಯ ಮೈತ್ರಿಯಿಲ್ಲದೇ ಯಾವ ಪಕ್ಷವೂ ದೆಹಲಿಯಲ್ಲಿ ಅಧಿಕಾರಕ್ಕೆ ಬರಲಾಗುವುದಿಲ್ಲ ಎಂಬ ಕಟು ಸತ್ಯವನ್ನು ಬಹುತೇಕ ಪಕ್ಷಗಳು ಕಂಡುಕೊಂಡಿರುವದರಿಂದಲೇ ಅದರ ಹುಡುಕಾಟದಲ್ಲಿವೆ. ರಾಜ್ಯದಲ್ಲಂತೂ ಅಧಿಕಾರ ಹಿಡಿದೇ ಬಿಡುವ, ಇಲ್ಲವೇ ತಾವಿಲ್ಲದೇ ಯಾರೂ ಸರಕಾರ ರಚಿಸಲಾರರೆಂದೇ ನಂಬಿ, ನಂಬಿಸಿದ್ದ ಯಡಿಯೂರಪ್ಪ ಮತ್ತು ಬಿ ಶ್ರೀರಾಮುಲುರವರ ಭ್ರಮೆ ಹರಿದು ಎತ್ತವೂ ಹೋಗಲಾರದೇ, ಕಂಗಾಲಾಗಿ ಕುಳಿತಿರುವುದು ನಿಜ. ಇಂತಹ ಹೊತ್ತಿನಲ್ಲಿಯೇ ಜನರಿಂದ ತಿರಸ್ಕೃತವಾಗಿ ದಿಕ್ಕೇಡಿಯಾಗಿರುವ ಬಿಜೆಪಿಗೆ ದೆಹಲಿಯಲ್ಲಿ ಗದ್ದುಗೆ ಹಿಡಿಯಲು ಹಿಂದಿನಂತೆ ಈ ಬಾರಿ ಹೆಚ್ಚಿನ ಸಂಸದರು ರಾಜ್ಯದಿಂದ ಸಿಗಲಾರದೆಂಬ ಚಿಂತೆ. ಹೀಗಾಗಿಯೇ ಮತ್ತೇ ಈ ಇಬ್ಬರನ್ನು ತಮ್ಮತ್ತ ಸೆಳೆಯಲು

ಪಿ ಮಹಮ್ಮದ್



ಪುಟ 4 ಕ್ಕೆ

ಕೃಷಿ ಕೂಲಿಕಾರರನ್ನು ಕಡೆಗಣಿಸಿದ ಸಿದ್ದರಾಮಯ್ಯ ಬಜೆಟ್



ಹಿಂದಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮಂಡಿಸಿದ ಬಜೆಟ್ ಅಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಸದನದಲ್ಲಿ ಮಂಡಿಸಿದ ಪರಿಷ್ಕೃತ ಬಜೆಟ್ ಸಹ ರಾಜ್ಯದ ಕೃಷಿ ಕೂಲಿಕಾರರನ್ನು ಕಡೆಗಣಿಸಿದೆ ಎಂದು ಕರ್ನಾಟಕ ಪ್ರಾಂತ್ರ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಟೀಕಿಸಿದ್ದಾರೆ.

ಪತ್ರಿಕೆಗಳಿಗೆ ನೀಡಿದ ಹೇಳಿಕೆಯಲ್ಲಿ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು 1 ಕೋಟಿಯಷ್ಟಿರುವ ಕೃಷಿ ಕೂಲಿಕಾರರ ಬಗ್ಗೆ ಪ್ರಸ್ತಾಪವೇ ಇಲ್ಲ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ದಲಿತ ಮತ್ತು ಹಿಂದುಳಿದ ಜಾತಿಗಳಿಗೆ ಸೇರಿದವರೇ ಅಧಿಕ ಸಂಖ್ಯೆಯಲ್ಲಿರುವ ಕೃಷಿ ಕೂಲಿಕಾರರಿಗೆ ಗ್ರಾಮೀಣ ಪ್ರದೇಶದಲ್ಲಿ ಹೊಟ್ಟೆಗಾಗುವಷ್ಟು ಆದಾಯ ಒದಗಿಸುವ ಕೆಲಸ ಸಿಗದಂತಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಹೆಚ್ಚುತ್ತಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ವರ್ಷವಿಡೀ ಕೆಲಸ ಸಿಗದೆ ಇರುವುದರಿಂದ, ಮಾಡಿದ ಕೆಲಸಕ್ಕೂ ಸರಿಯಾಗಿ ಕೂಲಿ ಹಣ ಸಂದಾಯವಾಗದಿರುವುದರಿಂದ ಕೂಲಿಕಾರರು ಯೋಜನೆಯ ಅಡಿಯಲ್ಲಿ ಕೆಲಸ ಮಾಡುವ ಆಸಕ್ತಿಯನ್ನೇ ಕಳೆದು ಕೊಂಡಿದ್ದಾರೆ. ಎಲ್ಲ ಕೂಲಿಕಾರ ಕುಟುಂಬಗಳಿಗೆ ಬಿಪಿಎಲ್ ರೇಷನ್ ಕಾರ್ಡ್ ವಿತರಣೆ ಮಾಡಲು ಸರ್ಕಾರ ಕ್ರಮಕೈಗೊಳ್ಳದೇ ಇರುವುದರಿಂದ 'ಅನ್ನಭಾಗ್ಯ' ಯೋಜನೆಯಿಂದ ಸಾವಿರಾರು ಕೂಲಿಕಾರ ಕುಟುಂಬಗಳು ವಂಚಿತರಾಗಲಿದ್ದಾರೆ.

ರಾಜ್ಯದ ಅಸಂಘಟಿತ ವಲಯದ ಕಾರ್ಮಿಕರಂತೆ ಕೃಷಿ ಕೂಲಿಕಾರರು ಸಹ ಸರ್ಕಾರದ ತೀವ್ರ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ. ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ಇರುವಂತೆ ಕರ್ನಾಟಕದಲ್ಲಿಯೂ ಕೃಷಿಕೂಲಿಕಾರರ ಕೂಲಿ ಹಾಗೂ ಸಮಾಜಿಕ ಸುರಕ್ಷಾ ಸೌಲಭ್ಯಗಳನ್ನು ಖಚಿತ ಪಡಿಸುವ ಸಮಗ್ರ ಶಾಸನವನ್ನು ರೂಪಿಸಿ ಅದರ ಅಡಿಯಲ್ಲಿ ಕೃಷಿ ಕೂಲಿಕಾರರ ಕಲ್ಯಾಣ ನಿಧಿಯನ್ನು ರಚಿಸಬೇಕೆಂಬ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಬೇಡಿಕೆಯನ್ನು ಸಿದ್ದರಾಮಯ್ಯ ಸರ್ಕಾರ ಪರಿಗಣಿಸದಿರುವ ಮೂಲಕ ಸಮಾಜದ ಕಟ್ಟಕಡೆಯ ಸಮುದಾಯಗಳಿಗೆ ಅನ್ಯಾಯಮಾಡಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ, ಅವರು ಇನ್ನಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಬಜೆಟ್‌ನಲ್ಲಿ ಕೃಷಿ ಕೂಲಿಕಾರರ ಹಿತಕಾಪಾಡಲು ಸೂಕ್ತ ಬದಲಾವಣೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಮಿತ್ರರ ಹುಡುಕಾಟದಲಿ.....

ಪುಟ 03 ರಿಂದ

ಸಾಕಷ್ಟು ಕಸರತ್ತು ನಡೆಸಿದೆ. ಈ ವಾರದ ಪ್ರತಿಕ್ರಿಯೆಗಳನ್ನು ನೋಡಿದರೆ ಬಿಜೆಪಿಯು ಹೊಂಚಿನಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಂತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿಯೇ ಬಿಎಸ್‌ವೈ ಮೇಲಿನಂತೆ ಮಾತನಾಡಿರೋದು.

ಬಿಜೆಪಿಯೊಳಗೆ ತಕ್ಷಣದಲ್ಲಿ ವಿಲೀನಗೊಳ್ಳುವ ಸಾಧ್ಯತೆಗಳನ್ನು ಇಬ್ಬರೂ ತಳ್ಳಿ ಹಾಕಿರುವಲ್ಲಿ ತಮ್ಮ ಕೇಳಿಕೆ, ಕೊಡುಕೊಳ್ಳುವಿಕೆಗಳ ಶರತ್ತುಗಳು ಇನ್ನೂ ಇತ್ಯರ್ಥವಾಗದಿರುವ ಸ್ಥಿತಿಯನ್ನು ತೋರಿಸುತ್ತವೆ. ಈಗಾಡುತ್ತಿರುವ ಎಲ್ಲಾ ಮಾತುಗಳು ಹಿತಕರ ಭಾವನೆಗಳ ಸೃಷ್ಟಿಯ ಪ್ರಯತ್ನ. ಒಂದು ವೇಳೆ ವಿಲೀನಗೊಂಡರೆ ಆಗ ಹೆಚ್ಚುವ ಶಾಸಕರ ಬಲದಿಂದಾಗಿ ಲಭಿಸಬಹುದಾದ ವಿರೋಧ ಪಕ್ಷದ ನಾಯಕನ ಸ್ಥಾನ ತಮಗೆ (ಯಡ್ಡಿಗೆ) ಕೊಡಬೇಕೆಂಬ ಶರತ್ತು ಒಂದಾಗಿದೆಯಂತೊಂದು ವೇಳೆ ಮೋದಿ ಪ್ರಧಾನಿಯಾದರೆ 'ಪುಣ್ಯಾತ್ಮರ ಸಹವಾಸ'ದಿಂದ ಹಗರಣಗಳ ಕಳಂಕ ತೊಳೆದುಕೊಳ್ಳದೇ ಇರಲು ಸಾಧ್ಯವೇ? ಆದ್ದರಿಂದ ವ್ಯಕ್ತಿ ನಿಷ್ಟ ಲಾಭದ ಕೇಳಿಕೆಗಳು ಅಷ್ಟು ಸುಲಭದಲ್ಲಿ ಬಗೆ ಹರಿಯುವಂತಹುವೇನಲ್ಲ.

ಹಾದಿ ತಪ್ಪಿಸುವ ವಾದಗಳು

ಸಂಸದೀಯ ಚುನಾವಣೆಯಲ್ಲಿ ಸ್ಥಾನ ಹೆಚ್ಚಳದ ಗುರಿಯಿರಿಸಿಕೊಂಡು ನಡೆದಿರುವ ಈ ಎಲ್ಲಾ ಕಸರತ್ತುಗಳ ಅಂತಿಮ ಫಲ ದುರ್ಬಲವಾಗಿರುವ ಬಿಜೆಪಿಯನ್ನು ಬಲಪಡಿಸುವುದೇ ಆಗಿದೆ. 'ಬಿಜೆಪಿ ಸೋತಿದ್ದು ತನ್ನಲ್ಲಾದ ವಿಭಜನೆಯಿಂದ ಅಂದರೆ ಬಿಎಸ್ ವೈ ಮತ್ತು ಬಿಎಸ್ಸಾರ್ ಹೊರ ಹೋಗಿರುವುದರಿಂದ ಹೊರತು ಜನ ಸೋಲಿಸಿದ್ದೇನಲ್ಲಾ' ಎಂಬ ಸಿದ್ಧಾಂತವನ್ನು ಅದಕ್ಕೆ ಸರಿ ಹೊಂದುವಂತೆ ಹೇಳಿ ನಂಬಿಸುತ್ತಿದ್ದಾರೆ! 'ಸೋತು ನೆಲ ಕಚ್ಚಿದರೂ ಮೀಸೆ ಮಣ್ಣಾಗಲಿಲ್ಲ' ಎಂಬ ಭಂಡತನ! ಇದು ಬಿಜೆಪಿಯ ದುರಾಡಳಿತಕ್ಕಿದ್ದ ಜನರ ತೀವ್ರ ವಿರೋಧವನ್ನು ಮರೆಮಾಚುವ ಕುತಂತ್ರದ ಬಗೆ. ಕೇವಲ ಹೊರ ನೋಟದಲ್ಲಿ ಶೇಕಡಾವಾರು ಮತಗಳನ್ನು ನೋಡಿ ಅವುಗಳನ್ನು ತುಂಡು ತುಂಡಾಗಿ ಒಂದೆಡೆ ಅಂಟಿಸಿ ಬಿಟ್ಟರೆ ಗೆಲುವಿನ ಒಂದು ಫಲಿತಾಂಶ ಕಾಣುವುದು ರಾಜಕೀಯದಲ್ಲಿ ಅವೈಜ್ಞಾನಿಕ. ಈ ಎರಡೂ ಪಕ್ಷಗಳೂ ಸ್ವತಂತ್ರವಾಗಿ ಬಿಜೆಪಿಯ ವಿರುದ್ಧವೂ ಸೆಣಸಿದ್ದರಿಂದಲೇ ಅಷ್ಟು ಮತಗಳನ್ನು ಪಡೆದಿವೆ. ಒಂದು ವೇಳೆ ಅವರು ಬಿಜೆಪಿಯಲ್ಲಿದ್ದರೂ ಅದರ ವಿರುದ್ಧ ಹೆಚ್ಚಿದ್ದ ಅತೃಪ್ತಿಯಿಂದಾಗಿ ಜನ ಅವರಿಗೇ ಮತ ನೀಡುತ್ತಿದ್ದರೆಂಬುದು ಕೇವಲ ಭ್ರಮೆ.

ಮೇಲಾಗಿ, ವಾಸ್ತವದಲ್ಲಿಯೂ ಬಿಜೆಪಿ ವಾದ ಅರ್ಥಹೀನ. ಕರಾವಳಿಯ ಜಿಲ್ಲೆಗಳಲ್ಲಿ ಬಿಎಸ್ ವೈ ಮತ್ತು ಬಿಎಸ್ಸಾರ್ ಪ್ರಭಾವ ತೀರಾ ನಗಣ್ಯ. ರಾಜ್ಯದ ಇತರ ಕಡೆಗಳಲ್ಲೂ ಇಂತಹ ಹಲವು ಕ್ಷೇತ್ರಗಳಿವೆ. ಇಲ್ಲೆಲ್ಲಾ ಜನತೆ ಬಿಜೆಪಿಯನ್ನು ಅಷ್ಟು ದೊಡ್ಡ ಪ್ರಮಾಣದಲ್ಲಿ ಸೋಲಿಸಿ ಸ್ಪಷ್ಟ ತೀರ್ಪು ನೀಡಿದ್ದಾರಲ್ಲ! ಇಂತಹ ವಾಸ್ತವಗಳ ಅರಿವು ಇರುವ ಸಂಘಪರಿವಾರ ಜನರನ್ನು ವಂಚಿಸಲೆಂದೇ ತಿರುಚಿದ ವಾದಗಳನ್ನು ಹರಿಯ ಬಿಡುತ್ತಿದೆ. ಜನರಲ್ಲಿ ಗೆಲ್ಲುವ ಪಕ್ಷವೆಂಬ ಭ್ರಮೆ ಬಿತ್ತಲು!

ಮೈತ್ರಿಗೊಂದು ನೀತಿ ಬೇಡವೆ?


ಂ'ು ಡಿ ಂ'ು ೂ ರ' ಪ್' ನ' ವ' ರ'ು ಬಿಜೆಪಿಯೊಂದಿಗೆ ಹೋಗುವ ಇಂಗಿತವನ್ನು ಸ್ಪಷ್ಟಪಡಿಸಿರುವುದರಿಂದ ಅವರೊಂದಿಗೆ ಮೈತ್ರಿ ಸಾಧ್ಯತೆಗಳು ಇಲ್ಲ ಎಂದೇನೋ ಇದೀಗ ದೇವೇಗೌಡರವರು ಹೇಳಿದ್ದಾರೆ. ಜೊತೆಗೆ ತಾವು ಎಡ ಪಕ್ಷಗಳೊಂದಿಗೆ ಸದಾ ಇದ್ದುದನ್ನು ನೆನಪಿಸಿಕೊಂಡಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಾದ ಮೂರನೆಯ ರಂಗ ಮೂಡಿ ಬರುವುದು ಅನಿವಾರ್ಯವೆಂದಿದ್ದಾರೆ. ಮತ್ತು ಅದಕ್ಕಾಗಿ ತಾವು ಪ್ರಯತ್ನ ಮುಂದುವರಿಸುವುದಾಗಿಯೂ ಹೇಳಿದ್ದಾರೆ. ದೇಶದಲ್ಲಿಯೇ ಒಬ್ಬ ಅತ್ಯಂತ ಹಿರಿಯ ರಾಜಕಾರಣಿಯಾಗಿ ಅವರ ಅನಿಸಿಕೆ ಸರಿಯಾಗಿದೆ. ಆದರೆ ಮೂರನೆಯ ರಂಗದ ಅನಿವಾರ್ಯತೆಯನ್ನು ಗುರುತಿಸುವಾಗಲೇ ಆ ರಂಗದ ರಚನೆಯಲ್ಲಿ ಬರಬಹುದಾದ ಪಕ್ಷಗಳಲ್ಲಿ ಯಾರ್ಯಾರಿರಬೇಕು? ಅದರ ನೀತಿ, ಗೊತ್ತು ಗುರಿಗಳೇನು? ಬಿ.ಎಸ್.ಪಿ, ಕೆ.ಜೆ.ಪಿ, ತೃಣಮೂಲ ಕಾಂಗ್ರೆಸ್‌ನಂತಹ ಪಕ್ಷಗಳೂ ಇರುವ ರಂಗವೂ ಆಗಬಹುದೆ? ಅಥವಾ ಗೆಲ್ಲುವವರೆಗೂ ಮೂರನೆಯ ರಂಗವೆಂದು ನಂತರ ಅಧಿಕಾರಕ್ಕೆ ಕಾಂಗ್ರೆಸ್ಸೋ-ಬಿಜೆಪಿಯೋ ಆದೀತೆಂದು ಯೋಚಿಸುವ ಅವಕಾಶವಾದಿ ರಾಜಕಾರಣವೇ ಸಾಕೇ? ಮೂರನೆಯ ಪರ್ಯಾಯವೆನ್ನುವಾಗ ಇವಕ್ಕೆಲ್ಲಾ ಸ್ಪಷ್ಟವಾದ ಕಲ್ಪನೆ ಇರಿಸಿಕೊಳ್ಳದಿದ್ದರೆ ಸಂದರ್ಭಸಾಧಕ ರಾಜಕಾರಣ ಹುಲುಸಾಗಿ ಬೆಳೆಯಲು ಗೊಬ್ಬರ ಹಾಕಿ ನೀರೆರದಂತೆ ಆಗುತ್ತದೆ. ಈ ಎಲ್ಲಾ ಅಂಶಗಳನ್ನು ಮೊದಲು ಗೌಡರು ಸ್ಪಷ್ಟಪಡಿಸಿಕೊಂಡು, ಕುಮಾರಸ್ವಾಮಿಯನ್ನೂ ಒಳಗೊಂಡು ತಮ್ಮ ಪಕ್ಷದಲ್ಲೆ ಒಮ್ಮತ ಮೂಡಿಸಬೇಕು. ಇಲ್ಲವಾದರೆ ಒಬ್ಬರು ಒಂದು ವಾದ, ಇನ್ನೊಬ್ಬರದು ಮತ್ತೊಂದು ಯಾವುದಕ್ಕೂ ಎರಡೂ ದೋಣಿಗಳು ಇರಲಿ ಎಂಬುದು ಎಂತಹ ಫಲ ಕೊಡಬಲ್ಲುದು ಎಂದು ತೀರಾ ಇತ್ತೀಚಿನ ಅನುಭವಗಳಿಂದ ಗ್ರಹಿಸಿದರೆ ಸಾಕು. 'ಬಿಜೆಪಿ ಜೊತೆಗೂಡಿ ನಾವು ಸರಕಾರ ರಚಿಸುತ್ತೇವೆಂದು ಮಾಧ್ಯಮಗಳೇ ಪ್ರಚಾರಿಸಿದ್ದರಿಂದ ಸೋತೆ'ವೆಂದು ಗುರಾಯಿಸುವುದಾದರೂ ತಪ್ಪೀತು!

ಕ್ರಿಯಾಶೀಲ ರಾಜಕೀಯ ಒಗ್ಗಟ್ಟಿನ ಅಗತ್ಯ

ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೆ ವಿರೋಧವಾದ ಶಕ್ತಿಗಳನ್ನು ಜನ ಈಗಲೂ ಪುರಸ್ಕರಿಸುತ್ತಾ ಬಂದಿದ್ದಾರೆ. ಒಂದೆಡೆ ದೇಶ ಭಕ್ಷಕ ಬಹುರಾಷ್ಟ್ರೀಯ-ಕಾರ್ಪೋರೇಟ್ ಕಂಪನಿಗಳು. ಅದರೊಂದಿಗೆ ಫ್ಯಾಶಿಸ್ಟ್ ಮಾದರಿಯ ಕೋಮುವಾದ ಅದಕ್ಕೆ ನರಹಂತಕ ಮೋದಿಯ ನಾಯಕತ್ವ ದೇಶದಲ್ಲಿ-ರಾಜ್ಯದಲ್ಲಿ ಎಂತಹ ಅನಾಹುತವನ್ನು ತರಬಲ್ಲುದು ಎಂಬುದನ್ನು ಗಂಭೀರವಾಗಿ ಯೋಚಿಸಬೇಕು. ಕಳೆದ ವರುಷಗಳ ಬಿಜೆಪಿ ದುರಾಡಳಿತದ ಧಾಳಿಗಳೇ ಸಾಕಲ್ಲವೇ? ಮತನಿರಪೇಕ್ಷತೆ , ಪ್ರಜಾಪ್ರಭುತ್ವವನ್ನು ರಕ್ಷಿಸುವುದು ಸಮಾಜದ ಮುನ್ನಡೆಗೆ ಅತೀ ಅವಶ್ಯಕ. ಹಾಗೆ ಕಾಂಗ್ರೆಸ್ ಪಕ್ಷ ವಿದೇಶಿ, ಸ್ವದೇಶಿ ಬಂಡವಾಳಗಾರರ ವಶಕ್ಕೆ ಇಡೀ ಭಾರತವನ್ನು ಒಪ್ಪಿಸುವ ಮತ್ತಷ್ಟು ಆತುರದಲ್ಲಿದೆ. ಅದು ಮತ್ತೆ ಅಧಿಕಾರಕ್ಕೆ ಮರಳುವುದೆಂದರೆ ವಿನಾಶ ಖಂಡಿತ. ಕಾಂಗ್ರೆಸ್ ಅಥವಾ ಬಿಜೆಪಿ ಯಾರೇ ಅಧಿಕಾರಕ್ಕೆ ಬಂದರೂ ಜನತೆಯ ಮೇಲೆ ಮತ್ತಷ್ಟು ಆಕ್ರಮಣಗಳು ಖಚಿತ. ದುಡಿಯುವ ಜನರ ಬದುಕು, ಅವರ ಐಕ್ಯತೆ ರಕ್ಷಿಸದಿದ್ದಲ್ಲಿ ದೇಶದ ರಕ್ಷಣೆಯಾದೀತೇಗೆ? ಮುಂದಿನ ದಿನಗಳಲ್ಲಿ ಇನ್ನಷ್ಟೂ ಹೆಚ್ಚಲಿರುವ ನವ ಉದಾರೀಕರಣದ ಧಾಳಿಗಳ ವಿರುದ್ಧ ಒಗ್ಗಟ್ಟಿನ ಪ್ರತಿರೋಧ ಹಿಂದಿಗಿಂತಲೂ ಹೆಚ್ಚು ಅಗತ್ಯವಿದೆ.

ನವ ಉದಾರೀಕರಣದ ದಾಳಿಗಳು ಹೆಚ್ಚಾದಂತೆ ಜನರ ನಡುವೆ ಅಸಮಾಧಾನ, ಆಕ್ರೋಶ ಸಹಜವಾಗಿ ತೀವ್ರಗೊಳ್ಳಲಿದೆ. ನವ ಉದಾರೀಕರಣದ ದಾಳಿಗಳ ವಿರುದ್ಧ ಜನರು ಒಂದುಗೂಡುವುದನ್ನು ತಡೆಯಲು, ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಆಯೋಧ್ಯೆಯಂತಹ ಅಜೆಂಡಾ ಮತ್ತೊಮ್ಮೆ ಬಳಕೆಯಾಗುವ ಸಾಧ್ಯತೆ ಎದ್ದು ಕಾಣುತ್ತಿದೆ. ಆದ್ದರಿಂದ ನವ ಉದಾರೀಕರಣದ ಧೋರಣೆಗಳನ್ನೂ ಮತ್ತು ಕೋಮುವಾದವನ್ನೂ ವಿರೋಧಿಸುವ ಶಕ್ತಿಗಳು ಬಲಗೊಳ್ಳುವುದು ತುರ್ತು ರಾಜಕೀಯ ಅಗತ್ಯವಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ



ಕೃಷಿ ಮತ್ತು ಕೈಗಾರಿಕೆ ಉತ್ಪಾದನೆ ಹೆಚ್ಚು ಕಡಿಮೆ ಸ್ಥಗಿತತೆಯನ್ನು ಕಂಡಿರತಕ್ಕ ಈ ಸಂದರ್ಭದಲ್ಲಿ ಇವುಗಳನ್ನು ಸ್ಥಗಿತತೆಯಿಂದ ಪಾರು ಮಾಡುವ ಯಾವುದಾದರು ಒಂದು ಕ್ರಮವನ್ನಾದರೂ ಕೈಗೊಳ್ಳಲು ತಮ್ಮ ಬಜೆಟ್‌ನಲ್ಲಿ ಸಿದ್ದರಾಮಯ್ಯ ಪ್ರಯತ್ನ ಮಾಡಿಲ್ಲ. ಜೊತೆಗೆ ಎಲ್ಲಾ ರಂಗಕ್ಕೂ ಹಿಂದಿನ ವರ್ಷಕ್ಕಿಂತ ಅನುದಾನ ಕಡಿಮೆ ಮಾಡಿದ್ದಾರೆ.

ಜೆ.ವಿ. ಶ್ರೀರಾಮರೆಡ್ಡಿ

ಅಭಿವೃದ್ಧಿಗೆ ಪೂರಕವಲ್ಲದ ಬಜೆಟ್

ಹಿಂದಿನ ಬಿಜೆಪಿ ಸರ್ಕಾರ ಕಳೆದ [illegible]ವರಿಯಲ್ಲಿ 2013–14ನೇ ಸಾಲಿನ ಪೂರ್ಣ ಪ್ರಮಾಣದ ಬಜೆಟನ್ನು ಮಂಡಿಸಿ 4 ತಿಂಗಳಿಗೆ ಲೇಖಾನುದಾನ ಪಡೆದಿತ್ತು. ಅನಂತರ ಚುಣಾವಣೆ ನಡೆದು ಹೊಸ ಸರ್ಕಾರ ಅಧಿಕಾರಕ್ಕೆ ಬಂದು ಹಿಂದಿನ ಸರ್ಕಾರ ಮಂಡಿಸಿ ಲೇಖಾನುದಾನ ಪಡೆದಿದ್ದ ಬಜೆಟ್‌ಗೆ ವರ್ಷ ಪೂರ್ತಿ ಖರ್ಚುಮಾಡಲಿಕ್ಕೆ ಶಾಸನ ಸಭೆಯ ಅನುಮತಿಯನ್ನು ಪಡೆಯಬೇಕಿತ್ತು. ಅದಕ್ಕೆ ಅಧಿವೇಶನ ಕರೆಯಬೇಕಾಗಿತ್ತು. ಚುಣಾವಣೆ ನಡೆದು ಹೊಸ ಸರ್ಕಾರ ಬಂದು ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ಮೇಲೆ ಲೋಕಸಭಾ ಚುಣಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತು ವಿಧಾನಸಭಾ ಚುಣಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ತಾನು ಕೊಟ್ಟ ಭರವಸೆಗಳನ್ನು ಈಡೇರಿಸಲು ಹಾಗೂ ತಾನು ಹಿಂದುಳಿದ ವರ್ಗಗಳ ನೇತಾರನೆಂದು ಬಿಂಬಿಸಿಕೊಳ್ಳುತ್ತಾ ಹಿಂದುಳಿದ ವರ್ಗಗಳ ಕೈಗೆ [illegible]ಕಾರ ಸಿಗದಿದ್ದರೆ ಹಿಂದುಳಿದ ವರ್ಗಗಳ ಅಭಿವೃದ್ಧಿ ಸಾಧ್ಯವಿಲ್ಲವೆಂದು ಬಲವಾಗಿ ಪ್ರತಿಪಾದಿಸುತ್ತಿದ್ದ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಆಯ್ಕೆ ಆಗಿದ್ದರಿಂದ ಅವರಿಗೆ ಬಜೆಟ್‌ನ್ನು ಮಂಡಿಸುವ ಅನಿವಾರ್ಯತೆ ಉಂಟಾಯಿತು. ಹಾಗಾಗಿ ಸಿದ್ದರಾಮಯ್ಯನವರು ಹೊಸ ಬಾಟಲ್‌ನಲ್ಲಿ ಹಳೆಯ ಮದ್ಯ ಎನ್ನುವ–ಲೋಕಸಭಾ ಚುಣಾವಣೆಗೆ ಬೇಕಾದ ರೀತಿಯಲ್ಲಿ 143 ಪುಟಗಳ ಭಾಷಣದ ಮೂಲಕ ಬಜೆಟ್‌ನ್ನು ಮಂಡಿಸಿದ್ದಾರೆ.

ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್ ರಾಜ್ಯದ ನಿಜವಾದ ಅಭಿವೃದ್ಧಿಗೆ ಪೂರಕವಾಗಿಲ್ಲ, ಹೋಗಲಿ ಸಿದ್ದರಾಮಯ್ಯನವರು ಮುಖ್ಯ ಮಂತ್ರಿಯಾದ ತಕ್ಷಣ ಲೋಕಸಭಾ ಚುಣಾವಣೆ ಮತ್ತು ಹಿಂದುಳಿದ ವರ್ಗಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳನ್ನು ಗುರಿಯಲ್ಲಿಟ್ಟು ಘೋಷಿಸಿದ ಜನಪ್ರಿಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬೇಕಾದ ಹಣ ಎಲ್ಲಿಂದ ಕ್ರೋಢೀಕರಿಸುತ್ತಾರೆಂದು ಸ್ಪಷ್ಟವಾಗಿ ಹೇಳಿಲ್ಲ. ಹಾಗಾಗಿ ಅಭಿವೃದ್ಧಿಪರವಲ್ಲದ ಮತ್ತು ಜನಪರವೂ ಅಲ್ಲದ ನಿರರ್ಥಕ ಕಸರತ್ತನ್ನು ನಡೆಸಿದ್ದಾರೆ.

ಒಂದು ರಾಜ್ಯದ ನಿಜವಾದ ಅಭಿವೃದ್ಧಿ ಎಂದರೆ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವುದು. ಅಂದರೆ ಪ್ರಕೃತಿ ಸಂಪನ್ಮೂಲಗಳು ಅದರಲ್ಲಿ ಮುಖ್ಯ ಆರ್ಥಿಕ ಸಂಪನ್ಮೂಲಗಳನ್ನು ಮತ್ತು ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವುದು. ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿಗೆ ಪ್ರಬಲವಾಗಿ ಬೇಕಾಗಿರುವುದು ಕೃಷಿ ಅಭಿವೃದ್ಧಿ ಮತ್ತು ಕೈಗಾರಿಕಾ ಅಭಿವೃದ್ಧಿ. ಇವು ಕಳೆದ 10 ವರ್ಷಗಳಿಂದ ಕುಂಠಿತವಾಗುತ್ತಾ ಬಂದು ಈಗ ಹೆಚ್ಚು ಕಡಿಮೆ ಸ್ಥಗಿತವಾಗುವ ಸ್ಥಿತಿಗೆ ಬಂದಿವೆ. ಸಿದ್ದರಾಮಯ್ಯನವರು ತನ್ನ ಬಜೆಟ್‌ನಲ್ಲಿ ಹೇಳಿರುವ ಪ್ರಕಾರ ಕೃಷಿ ಉತ್ಪಾದನೆ. 2011–12ರಲ್ಲಿ ಶೇಕಡ 2.2 ರಿಂದ 2012–13ರಲ್ಲಿ ಶೇಕಡ 1.8 ಕ್ಕೆ ಇಳಿದಿದೆ. ಕೈಗಾರಿಕಾರಂಗದಲ್ಲಿ ಬೆಳವಣಿಗೆ ಶೇ. 2.4 ರಷ್ಟು ಇದೆ. ಇನ್ನು ರಾಜ್ಯಕ್ಕೆ ಹೆಚ್ಚಿನ ಆದಾಯವನ್ನು ಕೊಡುತ್ತಿದ್ದ ಸೇವಾರಂಗದ ಆದಾಯ 9.5 ರಿಂದ 8.9 ಕ್ಕೆ ಇಳಿದಿದೆ. ಇದೇ ಸಂದರ್ಭದಲ್ಲಿ ರಾಜ್ಯದ ಸಾಲ ಪ್ರತಿ ವರ್ಷ ಹೆಚ್ಚಾಗುತ್ತಾ ಹೋಗುತ್ತಿದೆ 2007–08ರಲ್ಲಿ ನಮ್ಮ ರಾಜ್ಯದ ಒಟ್ಟು ಸಾಲ 45,413.23(2004–5ರಲ್ಲಿ 35,196.24 ಕೋಟಿ ರೂಗಳಿತ್ತು.) 2012–13ಕ್ಕೆ ಹಾಲಿ ಹೊಣೆಗಾರಿಕೆ 1,36,078 ಕೋಟಿಗೆ ಹೋಗಿದೆ. ಸಾಲ ಅಂದರೆ ಬಡ್ಡಿ ಕೊಡಲೇಬೇಕು. ಅದಕ್ಕಾಗಿ ನಮ್ಮ ರಾಜ್ಯದ ಒಟ್ಟು ಆದಾಯದಲ್ಲಿ 13% ಬಡ್ಡಿಗೆ ಹೋಗುತ್ತದೆ. ಈಗ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್‌ನಲ್ಲಿ 17,439 ಕೋಟಿ ಕೊರತೆಯನ್ನು ತೋರಿಸಿದ್ದಾರೆ. ಇದರಿಂದಾಗಿ ಬೆಲೆಯೇರಿಕೆ ಮತ್ತು ಹಣದುಬ್ಬರದ ವೇಗ ಹೆಚ್ಚಾಗುತ್ತಾ ಹೋಗುತ್ತದೆ. ಅದರ ಜೊತೆಗೆ ಈಗ ಮಂಡಿಸಿರುವ ಬಜೆಟ್‌ನಲ್ಲಿ ಹಲವಾರು ತೆರಿಗೆಗಳನ್ನು ಹೆಚ್ಚಿಸಿರುವುದರಿಂದ ಬೆಲೆ ಏರಿಕೆ ಮತ್ತು ಹಣದುಬ್ಬರದ ವೇಗ ಇನ್ನು ಹೆಚ್ಚಾಗುತ್ತದೆ. ಇದರಿಂದ ಸಾಲದ ಮೊತ್ತದ ಏರಿಕೆ ಇನ್ನೂ ಹೆಚ್ಚಾಗುತ್ತದೆ.

ಕೃಷಿ ಮತ್ತು ಕೈಗಾರಿಕೆ ಉತ್ಪಾದನೆ ಹೆಚ್ಚು ಕಡಿಮೆ ಸ್ಥಗಿತತೆಯನ್ನು ಕಂಡಿರತಕ್ಕ ಈ ಸಂದರ್ಭದಲ್ಲಿ ಇವುಗಳನ್ನು ಸ್ಥಗಿತತೆಯಿಂದ ಪಾರು ಮಾಡುವ ಯಾವುದಾದರು ಒಂದು ಕ್ರಮವನ್ನಾದರೂ ಕೈಗೊಳ್ಳಲು ತಮ್ಮ ಬಜೆಟ್‌ನಲ್ಲಿ ಸಿದ್ದರಾಮಯ್ಯ ಪ್ರಯತ್ನ ಮಾಡಿಲ್ಲ. ಜೊತೆಗೆ ಎಲ್ಲಾ ರಂಗಕ್ಕೂ ಹಿಂದಿನ ವರ್ಷಕ್ಕಿಂತ ಅನುದಾನ ಕಡಿಮೆ ಮಾಡಿದ್ದಾರೆ.

ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿ ಕುಂಠಿತವಾಗಿದೆ ಎಂದು ಹೇಳುವ ಸಿದ್ದರಾಮಯ್ಯ ಅವುಗಳ ಅಭಿವೃದ್ಧಿಗೆ ಯಾವ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಘೋಷಿಸಿಲ್ಲ. ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಅವಶ್ಯವಿರುವ ಪ್ರಮುಖ ಅಂಶ ವಿದ್ಯುತ್. ಅದಕ್ಕೆ ಹಿಂದಿನ ವರ್ಷ ಮಾಡಿರುವ ವೆಚ್ಚ 6,354 ಕೋಟಿ. ಈ ಬಾರಿ ಹಂಚಿಕೆ ಮಾಡಿರುವ ಮೊತ್ತ 5,273 ಕೋಟಿ. ಗ್ರಾಮೀಣಾಭಿವೃದ್ಧಿಗೆ ಹಿಂದಿನ ವರ್ಷದ ವೆಚ್ಚ 5,134 ಕೋಟಿ. ಈಗ ಹಂಚಿಕೆ ಮಾಡಿರುವುದು 4,672 ಕೋಟಿ. ಕುಡಿಯುವ ನೀರಿಗಾಗಿ ಕಳೆದ ವರ್ಷ ಮಾಡಿರುವ ವೆಚ್ಚ 385 ಕೋಟಿ. ಈ ವರ್ಷ ಹಂಚಿಕೆ ಮಾಡಿರುವುದು 376 ಕೋಟಿ. ನೈಸರ್ಗಿಕ ವಿಕೋಪಗಳಿಗಾಗಿ ಕಳೆದ ವರ್ಷ ಮಾಡಿರುವ ವೆಚ್ಚ 857 ಕೋಟಿ. ಈ ವರ್ಷಕ್ಕೆ 417 ಕೋಟಿ! ಗುಡಿಸಲು ಮುಕ್ತ ರಾಜ್ಯವನ್ನು ಮಾಡುತ್ತೇವೆಂದು ಬೊಬ್ಬೆ ಹಾಕುತ್ತಿರುವ ಈ ಸರ್ಕಾರ ಕಳೆದ ವರ್ಷ ಮನೆಗಳ ನಿರ್ಮಾಣಕ್ಕೆ ಮಾಡಿರುವ ವೆಚ್ಚ 1,814 ಕೋಟಿ. ಈ ಬಾರಿ ಮಾಡಿರುವ ಹಂಚಿಕೆ 1,375 ಕೋಟಿ. ಕಾರ್ಮಿಕ ಕಲ್ಯಾಣಕ್ಕಾಗಿ ಮಾಡಿರುವ ವೆಚ್ಚ 456 ಕೋಟಿ. ಈ ಬಾರಿ ಹಂಚಿಕೆ ಮಾಡಿರುವುದು 392 ಕೋಟಿ. ಇದರ ಜೊತೆಗೆ ತೆರಿಗೆಗಳನ್ನು ಹೆಚ್ಚು ಮಾಡಿದ್ದಾರೆ. ರಾಜ್ಯ ಅಬ್ಕಾರಿ ತೆರಿಗೆ ಮತ್ತು ಮಾರಾಟ ತೆರಿಗೆ ಹಾಗೂ ಸೇವಾ ತೆರಿಗೆ, ವಿದ್ಯುತ್ ಮೇಲಿನ ತೆರಿಗೆಯನ್ನು ಹೆಚ್ಚು ಮಾಡಿದ್ದಾರೆ. ಮಾರಾಟ ತೆರಿಗೆ ಮೊತ್ತವನ್ನು 28,425 ಕೋಟಿಗಳಿಂದ 33,590 ಕೋಟಿಗಳಿಗೆ ಏರಿಸಿದ್ದಾರೆ. ಅಬ್ಕಾರಿ ಸುಂಕವನ್ನು ರೂ. 11,300 ಕೋಟಿಯಿಂದ 12,600 ಕೋಟಿಗಳಿಗೆ ಏರಿಸಿದ್ದಾರೆ. ಸೇವಾ ತೆರಿಗೆಯನ್ನು 1,492 ಕೋಟಿಗಳಿಂದ 1,797 ಕೋಟಿಗಳಿಗೆ ಹೆಚ್ಚಿಸಿದ್ದಾರೆ, ವಿದ್ಯುತ್ ಮೇಲಿನ ತೆರಿಗೆಯನ್ನು 760 ಕೋಟಿಗಳಿಂದ 825 ಕೋಟಿಗಳಿಗೆ ಹೆಚ್ಚಿಸಿದ್ದಾರೆ. ಇದರೆಲ್ಲದರ ಪರಿಣಾಮ ತೀವ್ರ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಕಾರ್ಮಿಕರ ಕಲ್ಯಾಣಕ್ಕೆ ಅನುದಾನ ಕಡಿಮೆ ಮಾಡಿರುವುದರ ಜೊತೆಗೆ ಅಸಂಘಟಿತ ಕಾರ್ಮಿಕರ ಬಹಳ ದಿವಸಗಳ ಬೇಡಿಕೆಯಾದ ಕೆಲಸ ಖಾಯಂ ಮಾಡಬೇಕೆಂಬ ಬೇಡಿಕೆ ಕಡೆಗೂ ಬೇಡಿಕೆಯಾಗಿ ಉಳಿದಿದೆ. ಈ ಅಸಂಘಟಿತ ವಲಯದಲ್ಲಿ ಇರುವ 'ಅಹಿಂದ'ರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಸಿದ್ದರಾಮಯ್ಯನವರ ಕಣ್ಣಿಗೆ ಕಾಣಲಿಲ್ಲ. ಹೆಣ್ಣುಮಕ್ಕಳ ಸಬಲೀಕರಣದ ಬಗ್ಗೆ ನಿರರ್ಗಳವಾಗಿ ಮಾತನಾಡಿದ ಸಿದ್ದರಾಮಯ್ಯನವರಿಗೆ ಅಸಂಘಟಿತ ವಲಯದಲ್ಲಿ ಕಡಿಮೆ ಕೂಲಿಗೆ ದುಡಿಯುತ್ತಿರುವ ಲಕ್ಷ ಗಟ್ಟಲೆ ಹೆಣ್ಣು ಮಕ್ಕಳು ಕಾಣಲಿಲ್ಲವೆ? ನೀರಾವರಿಗೆ ಹೆಚ್ಚು ಹಣ ಕೊಟ್ಟಿದ್ದೇನೆಂದು ಜಂಭ ಕೊಚ್ಚಿಕೊಳ್ಳುವ ಸಿದ್ದರಾಮಯ್ಯ ಈ ವರ್ಷದ ನೀರಾವರಿಗಾಗಿ ತೆಗೆದುಕೊಟ್ಟಿರುವ ಹಣ 9,638 ಕೋಟಿ. ಆದರೆ ಸಿದ್ದರಾಮಯ್ಯನವರು ಹೇಳಬೇಕಾಗಿದೆ ಈ ಹಣದಲ್ಲಿ ಹಿಂದಿನ ಕಾಮಗಾರಿಗಳಿಗೆ ಕೊಡಬೇಕಾದ ಬಾಕಿ ಹಣ ಎಷ್ಟು? ಈ ಹಣ ಪಾವತಿ ಮಾಡಿದರೆ ನೀರಾವರಿ ವಿಸ್ತರಣೆಗೆ ನಿಜವಾಗಿ ಉಳಿಯುವ ಹಣವೆಷ್ಟು?

ಇನ್ನು ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಮೂಲ ಅವಶ್ಯಕತೆ ಶಿಕ್ಷಣ. ಇದಕ್ಕೆ ಹೆಚ್ಚಿನ ಹಣ ತೆಗೆದಿಟ್ಟಿದ್ದೇನೆಂದು ಹೇಳುವ ಸಿದ್ದರಾಮಯ್ಯನವರು ಪ್ರಾಥಮಿಕ ಶಿಕ್ಷಣಕ್ಕೆ ಮೂಲ ಅವಶ್ಯಕತೆ ಇರುವ ಶಿಕ್ಷಕರ ಕೊರತೆ ನಿವಾರಣೆ ಮತ್ತು ಮೂಲಭೂತ ಅವಶ್ಯಕತೆಗಳನ್ನು ಅಭಿವೃದ್ಧಿ ಪಡಿಸಲು ಎಷ್ಟು ಹಣ ತೆಗೆದಿಟ್ಟಿದ್ದಾರೆ. ? ಒಂದನೇ ತರಗತಿ ಸೇರುವ ವಿದ್ಯಾರ್ಥಿನಿಯರಿಗೆ 2 ರೂ.ಗಳನ್ನು ಕೊಡುವುದಾಗಿ ಘೋಷಿಸಿದ್ದಾರೆ. ಆ ಶಾಲೆಗೆ ಉಪಾಧ್ಯಾಯರು ಇಲ್ಲದಿದ್ದರೆ ಅವರು ಶಾಲೆಗೆ ಹೋಗಿ ಏನು ಪ್ರಯೋಜನ? ಲಕ್ಷ ಪ್ರಾಥಮಿಕ ಶಿಕ್ಷಕರ ಕೊರತೆ ಇದೆ. ಅದನ್ನು ತುಂಬಲಿಕ್ಕೆ ಯಾವುದೇ ಕ್ರಮ ಘೋಷಿಸಿಲ್ಲ. ಇನ್ನು ಹೊಸದಾಗಿ ವಸತಿ ಶಾಲೆಗಳನ್ನು ಮತ್ತು ಹಾಸ್ಟೆಲ್‌ಗಳನ್ನು ತೆಗೆಯುತ್ತೇವೆಂದು ಹೇಳಿರುವುದು ಸ್ವಾಗತಾರ್ಹ. ಆದರೆ ಈಗ ಇರುವ ವಸತಿ ಶಾಲೆಗಳ ಪರಿಸ್ಥಿತಿ ಏನಾಗಿದೆ ? ಹಾಸ್ಟೆಲ್‌ಗಳ ಪರಿಸ್ಥಿತಿ ಏನಾಗಿದೆ ? ಇದನ್ನು ಸುಧಾರಿಸಲು ಏನು ಕ್ರಮ? ಇನ್ನು ಶಿಕ್ಷಣರಂಗವನ್ನು ಪೆಡಂಭೂತವಾಗಿ ಕಾಡುತ್ತಿರುವ ಖಾಸಗೀಕರಣದ ಬಗ್ಗೆ ಸಿದ್ದರಾಮಯ್ಯನವರ ಧೋರಣೆ ಏನು? ಶಿಕ್ಷಣ ಖಾಸಗೀಕರಣದ ಹೆಸರಿನಲ್ಲಿ ವ್ಯಾಪಾರದ

ಪುಟ 15 ಕ್ಕೆ

ರಾಜ್ಯ ಬಜೆಟ್ ವಿರುದ್ಧ ಮಂಗಳೂರಿನಲ್ಲಿ ಸಿಪಿಐ(ಎಂ) ಪ್ರತಿಭಟನೆ:


ರಾಜ್ಯ ಮುಖ್ಯ ಮಂತ್ರಿಯವರು ಮಂಡಿಸಿದ ಬಜೆಟ್ಟಿನಲ್ಲಿ ಹಲವಾರು ಮುಖ್ಯ ಬಾಬತ್ತುಗಳಿಗೆ ಸಂಬಂಧಿಸಿದಂತೆ ಕಳೆದ ವರ್ಷಕ್ಕಿಂತ ಕಡಿಮೆ ಮೊಬಲಗನ್ನು ಕಾದಿರಿಸಲಾಗಿದೆ. ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ನೈಸರ್ಗಿಕ ವಿಕೋಪ ಇತ್ಯಾದಿ ಅಗತ್ಯ ಕ್ಷೇತ್ರಗಳಿಗೆ ಕಳೆದ ಸಾಲಿಗಿಂತ ಹಣ ಹಂಚಿಕೆ ಕಡಿಮೆ ಮಾಡಿರುವುದರಿಂದ, ಈ ಬಜೆಟ್ ಅಭಿವೃದ್ಧಿ ಶೂನ್ಯವಾಗಿದೆ. ಬೆಲೆಯೇರಿಕೆಯನ್ನು ತಡೆಗಟ್ಟಲು ಯಾವೊಂದೂ ಕಾರ್ಯಕ್ರಮವನ್ನು ಹಾಕಿಕೊಂಡೊಲ್ಲ. ಹೆಚ್ಚಿಗೆ ತೆ-ರಿಗೆ ಹಾಕಿಲ್ಲವೆಂದು ಮೇಲುನೋಟಕ್ಕೆ ಕಾಣಿಸಿದರೂ, ತೆರಿಗೆಯೇತರ ಆದಾಯದ ಪ್ರತಿಪಾದನೆ ಮಾಡಲಾಗಿದೆ. ಇದರ ಅರ್ಥ ವಿದ್ಯುತ್ ದರ, ಸಾರಿಗೆ ದರ, ನೀರಿನ ದರ ಹೆಚ್ಚಳ ಮಾಡಲು ಸಿದ್ಧತೆ ಎಂದೇ ಆಗಿದೆ-ಎಂಬುದಾಗಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ಹೇಳಿದರು.

ಅವರು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಜುಲಾಯಿ 13 ರಂದು ರಾಜ್ಯ ಸರ್ಕಾರದ ಬಜೆಟನ್ನು ವಿರೋಧಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ವತಿಯಿಂದ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ರಾಜ್ಯ ಬಜೆಟ್‌ನಲ್ಲಿ ಎತ್ತಿನಹೊಳೆ ಯೋಜನೆಗೆ ರೂ.1000 ಕೋಟಿ



ನಿಗದಿಗೊಳಿಸಿದ ಬಗ್ಗೆ ಹಾಗೂ ರಾಜ್ಯದ ಪೂರ್ವಭಾಗದ ಜಿಲ್ಲೆಗಳಿಗೆ ನೀರು ಒದಗಿಸುವ ಅಧ್ಯಯನಕ್ಕಾಗಿ ರೂ.50 ಕೋಟಿ ನಿಗದಿಗೊಳಿಸಿದ್ದರ ಬಗ್ಗೆ ಪ್ರಸ್ತಾಪಿಸಿ, ಪಶ್ಚಿಮಕ್ಕೆ ವ್ಯರ್ಥವಾಗಿ ಹರಿಯುವ ಮಳೆ ನೀರನ್ನು ನೀರಿನ ಕೊರತೆಯಿರುವ ಜಿಲ್ಲೆಗಳಿಗೆ ಹರಿಸುವ ಯೋಜನೆ ಸ್ವಾಗತಾರ್ಹ. ಈ ಬಗ್ಗೆ ವರದಿ ಕೊಟ್ಟ ತಜ್ಞರಾದ ಪರಮಶಿವಯ್ಯನವರು ತಮ್ಮ ವರದಿಯಲ್ಲಿ ದ.ಕ., ಕೊಡಗು, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಬೇಸಗೆಯಲ್ಲಿ



ವಾ.ಉ

ಕುಡಿಯುವ ನೀರಿಗೂ ನೀರಾವರಿಗೂ ನೀರಿನ ಕೊರತೆ ನೀಗಿಸುವ ಸರಣಿ ಕಿಂಡಿ ಅಣೆಕಟ್ಟುಗಳನ್ನು ರಚಿಸಬೇಕೆಂದೂ, ಪಶ್ಚಿಮ ವಾಹಿನಿ ಪ್ರಮುಖ ನದಿಗ[ಳ] ಅಣೆಕಟ್ಟುಗಳ ಟೈಲ್‌ರೇಸ್ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದೂ ಸೂಚಿಸಿದ್ದರು. ಅಂತಹ ಯೋಜನೆ ಜಾರಿಯ ಬಗ್ಗೆ ಪ್ರಸ್ತಾಪ ಮಾಡದೆ ಎತ್ತಿನಹೊಳೆ ಯೋಜನೆಯ ಬಗ್ಗೆ ಮಾತ್ರ ಹೇಳಿದರೆ ಕರಾವಳಿ ಜನರ ಅನುಮಾನ ಹಾಗೂ ವಿರೋಧಕ್ಕೆ ಕಾರಣವಾಗಬಹುದು. ಕರಾವಳಿ ಜಿಲ್ಲೆಗಳ ಜನರಿಗೆ ನೀರಿನ ಖಾತರಿ ನೀಡಿ, ಎತ್ತಿನಹೊಳೆ ಯೋಜನೆಯನ್ನು ಮುಂದುವರಿಸಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಮುಖಂಡರಾದ ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಜೆ.ಬಾಲಕೃಷ್ಣ ಶೆಟ್ಟಿ, ಬಾಬು ದೇವಾಡಿಗ, ವಾಸುದೇವ ಉಚ್ಚಿಲ, ಜಯಂತಿ ಬಿ.ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಅಸಂಘಟಿತ ಕಾರ್ಮಿಕರಿಗೆ ಪಿಂಚಣಿಗೆ ಆಗ್ರಹ

ಮೂಡಬಿದರೆಯಲ್ಲಿ ರಿಕ್ಷಾ ಚಾಲಕರ ಸಭೆ:

ರಿಕ್ಷಾ ಚಾಲಕರು ಸೇರಿದಂತೆ ಎಲ್ಲ ಅಸಂಘಟಿತ ಕಾರ್ಮಿಕರಿಗೆ ಖಾತರಿ ಪಿಂಚಣಿ ಯೋಜನೆಯನ್ನು ಸರ್ಕಾರ ಜಾರಿಗೊಳಿಸಬೇಕು ಎಂದು ಸಿಐಟಿಯು ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಹೇಳಿದರು.



ಮೂಡಬಿದರೆ ಸಮಾಜ ಮಂದಿರದಲ್ಲಿ ಜುಲಾಯಿ 11 ರಂದು ನಡೆದ ಫೆಡರೇಶನ್ ಆಫ್ ಕರ್ನಾಟಕ ಆಟೋ ಡ್ರೈವರ್ಸ್ ಯೂನಿಯನ್‌ನ ಮೂಡಬಿದರೆ ಘಟಕದ ವಾರ್ಷಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಘದ ಗೌರವಾಧ್ಯಕ್ಷ ಕೆ.ಯಾದವ ಶೆಟ್ಟಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಂಘದ ಅಧ್ಯಕ್ಷ ವಿಶ್ವನಾಥ ಶೆಟ್ಟಿ, ಪುರಸಭಾ ಸದಸ್ಯ ರಮಣಿ, ರಿಕ್ಷಾ ಚಾಲಕರ ಜಿಲ್ಲಾ ಸಂಘದ ಕಾರ್ಯದರ್ಶಿ ಎಲ್.ಟಿ.ಸುವರ್ಣ, ಸಿಐಟಿಯು ಕಾರ್ಯಕರ್ತರಾದ ಕೃಷ್ಣಪ್ಪ, ಶಂಕರ್, ಸುಧಾಕರ, ಸಂತೋಷ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಅಂಗನವಾಡಿ ಖಾಸಗೀಕರಣ ವಿರೋಧಿಸಿ ಮಂಗಳೂರಿನಲ್ಲಿ ಪ್ರತಿಭಟನೆ:

ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳ ಅಂಗನವಾಡಿಗಳನ್ನು ವೇದಾಂತ ಎಂಬ ಗಣಿಗಾರಿ-ಕೆ ಸಂಸ್ಥೆಗೆ ನಿರ್ವಹಣೆಗಾಗಿ ನೀಡಲು ಸರ್ಕಾರ ಸಿದ್ಧತೆ ನಡೆಸುತ್ತಿದೆ. ಖಾಸಗಿ ಸಾರ್ವಜನಿಕ ಪಾಲುದಾರಿಕೆ ಹೆಸರಲ್ಲಿ ಐಸಿಡಿಎಸ್ ಯೋಜನೆಯನ್ನು ಖಾಸಗೀಕರಣಗೊಳಿಸುವ ಕಾರ್ಯಕ್ರಮವನ್ನು ಕೈಬಿಡಬೇಕೆಂದು ಆಗ್ರಹಿಸಿ ಜುಲಾಯಿ 10 ರಂದು ದ.ಕ.ಜಿಲ್ಲಾ ಅಂಗನವಾಡಿ ನೌಕರರ ಸಂಘ (ಸಿಐಟಿಯು)ದ ವತಿಯಿಂದ ಮಂಗಳೂರು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಯಿತು.

ಹಾಸನ ಜಿಲ್ಲೆಯಲ್ಲಿ ರಾಜ್ಯ ಸರ್ಕಾರದ ಹೊಸ ಯೋಜನೆಯಾದ 'ಮಕ್ಕಳ ಮನೆ'ಯಿಂದಲಾಗಿ ಅಂಗನವಾಡಿಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಯೋಜನೆಯನ್ನು ಕೈಬಿಡಬೇಕೆಂದು ಒತ್ತಾಯಿಸಲಾಯಿತು.

ಅಂಗನವಾಡಿ ಸಹಾಯಕಿಯರು ಮಾಡುತ್ತಿದ್ದ ಆಹಾರ ತಯಾರಿ ಕಾರ್ಯಕ್ರಮವನ್ನು ಸ್ಥಳೀಯ ಸ್ತ್ರೀ ಶಕ್ತಿ ಸಂಘಗಳಿಗೆ ಹಸ್ತಾಂತರಿಸುವ ಮೂಲಕ ಕೇಂದ್ರ ಸರ್ಕಾರದ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರವು ಹಸ್ತಕ್ಷೇಪ ಮಾಡುವುದರ ಜೊತೆಗೆ ಕಾರ್ಯನಿರತ ಸಹಾಯಕಿಯ ಹುದ್ದೆಗಳಿಗೂ ಸಂಚಕಾರ ತರಲಿದೆ ಎಂದು ಆಕ್ಷೇಪಿಸಲಾಯಿತು.

ಮೇಲಿನ ಒತ್ತಾಯಗಳಲ್ಲದೆ, ನೌಕರಿಯ ಖಾಯಮಾತಿ, ಕನಿಷ್ಟ ಕೂಲಿಯೇ ಮೊದಲಾದ 18 ಬೇಡಿಕೆಗಳನ್ನು ಮುಂದಿಟ್ಟು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘವು ಕರೆಕೊಟ್ಟ ರಾಜ್ಯವ್ಯಾಪಿ ಪ್ರತಿಭಟನೆಯ ಅಂಗವಾಗಿ ಈ ಪ್ರತಿಭಟನೆ ನಡೆದಿದ್ದು, ಬಳಿಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೆ ಬೇಡಿಕೆಗಳ ಮನವಿಯನ್ನು ಸಲ್ಲಿಸಲಾಯಿತು.



ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಸಮಿತಿಯ ಸದಸ್ಯರೂ ಜಿಲ್ಲಾ ಸಂಘದ ಸಲಹೆಗಾರರೂ ಆಗಿರುವ ಬಿ.ಎಂ.ಭಟ್, ವಸಂತ ಆಚಾರಿ ಮಾತನಾಡಿದರು. ಜಿಲ್ಲಾ ಸಂಘದ ಅಧ್ಯಕ್ಷೆ ರವಿಕಲಾ, ಉಪಾಧ್ಯಕ್ಷೆ ಸುಮತಿ ಕುದ್ಯಾಡಿ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಸುಳ್ಯದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ನೂತನ ಕಟ್ಟಡ ಶಿಲಾನ್ಯಾಸ:

ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಶನ್ (ಸಿಐಟಿಯು) ಸುಳ್ಯ ತಾಲೂಕು ಸಂಘದ ನೂತನ ಕಟ್ಟಡ ಶಿಲಾನ್ಯಾಸವನ್ನು ಜುಲಾಯಿ 15 ರಂದು ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷ ವಿಜೆಕೆ ನಾಯರ್ ನೆರವೇರಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಬಿಪಿಎಲ್ ಕಾರ್ಡಿನವರಿಗೆ ಕೆಜಿಗೆ 1 ರೂಪಾಯಿಯಂತೆ 30 ಕೆ.ಜಿ. ಅಕ್ಕಿ ಕೊಡುವ ಕಾರ್ಯಕ್ರಮವನ್ನು ಎಪಿಎಲ್‌ನವರಿಗೂ ವಿಸ್ತರಿಸಬೇಕು ಎಂದು ಅವರು ಆಗ್ರಹಿಸಿದರು.

ಸುಳ್ಯ ತಾಲೂಕು ಕಟ್ಟಡ ಕಾರ್ಮಿಕರ ಸಮಾವೇಶದಲ್ಲಿ ವಿಜೆಕೆ ನಾಯರ್ ಮಾತನಾಡುತ್ತಿದ್ದರು. ಅತಿಥಿಗಳಾಗಿ ದ.ಕ. ಜಿಲ್ಲೆಯ ಹಿರಿಯ ರೈತ ಕಾರ್ಮಿಕ ಮುಖಂಡ ಕೆ.ಆರ್.ಶ್ರೀಯಾನ್, ಕಟ್ಟಡ ಕಾರ್ಮಿಕರ ಜಿಲ್ಲಾ ಸಂಘದ ಅಧ್ಯಕ್ಷ ಬಿ.ಎಂ.ಭಟ್, ತಾಲೂಕು ಸಂಘದ ಅಧ್ಯಕ್ಷ ಜಾನಿ ಕಲ್ಲುಗುಂಡಿ, ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಪಿ.ಬಿ.ದಿವಾಕರ ರೈ, ರಿಚಾರ್ಡ್ ಕ್ರಾಸ್ತಾ, ಕೆ.ಪಿ.ರಾಬರ್ಟ್ ಡಿಸೋಜ, ಹರಿದಾಸ್, ಶಿವ ಕುಮಾರ್ ಮತ್ತಿತರರು ಭಾಗವಹಿಸಿದ್ದರು. ಶಿವರಾಮ ಗೌಡ, ಚೆಂಬು ಆಗಸ್ಟಿನ್, ಕೆ.ಜೆ.ಶರತ್ ಕಾರ್ಯಕ್ರಮ ನಿರ್ವಹಿಸಿದರು.

ವಿಶ್ವಾಸಾರ್ಹತೆಯನ್ನು ಕಳಕೊಂಡ ಕೇರಳದ ಯುಡಿಎಫ್ ಸರಕಾರ ಮತ್ತು ಮುಖ್ಯಮಂತ್ರಿ



ಉಮ್ಮನ್ ಚಾಂಡಿ ಸರಕಾರ ಎಂದರೇನೇ ದುರಾಡಳಿತ ಎನ್ನುವಂತಾಗಿದೆ. ಸೌರ ಹಗರಣವಂತೂ ಈ ಸರಕಾರದ ಮತ್ತು ಈ ಮುಖ್ಯಮಂತ್ರಿಯ ವಿಶ್ವಾಸಾರ್ಹತೆಯನ್ನು ತಟ್ಟಿದೆ. ಪ್ರಜಾಪ್ರಭುತ್ವ ವಿಧಿ-ವಿಧಾನಗಳು ಮತ್ತು ನೈತಿಕತೆಯ ದೃಷ್ಟಿಯಿಂದ ಮುಖ್ಯಮಂತ್ರಿ ತಕ್ಷಣವೇ ರಾಜೀನಾಮೆ ನೀಡಬೇಕಾಗಿದೆ.

ಸೀತಾರಾಮ ಯೆಚೂರಿ

ಕೇರಳದ ಮುಖ್ಯಮಂತ್ರಿ ಮತ್ತು ಅಲ್ಲಿನ ಯುಡಿಎಫ್ ಸರಕಾರ ಸೌರ ಫಲಕ(ಸೋಲಾರ್ ಪ್ಯಾನಲ್) ಹಗರಣ ಬಯಲಾದ ನಂತರ ಕಟಕಟೆಯಲ್ಲಿ ನಿಂತಿದೆ. ಸೌರ ಸಾಧನಗಳ ಪೂರೈಕೆಯಲ್ಲಿನ ಮೋಸವನ್ನು ಎಸಗಿದವರು- ಬಿಜು ರಾಧಾಕೃಷ್ಣನ್ ಮತ್ತು ಸರಿತಾ ನಾಯರ್- ಜೈಲು ಸೇರಿದ್ದಾರೆ. ಅವರಿಂದ ಮೋಸಹೋದ ವ್ಯಾಪಾರಸ್ಥರು ಮತ್ತು ಇತರರ ದೂರಿನ ಮೇರೆಗೆ ಅವರನ್ನು ಬಂಧಿಸಲಾಗಿದೆ. ಅದಾದ ಕೂಡಲೇ, ಮುಖ್ಯಮಂತ್ರಿ ಕಚೇರಿಯ ಶಾಮೀಲು ಮತ್ತು ಉಮ್ಮನ್ ಚಾಂಡಿಯವರೊಂದಿಗೆ ಸಂಪರ್ಕ ಬಯಲಿಗೆ ಬಂತು.

ಮುಖ್ಯಮಂತ್ರಿಯವರ ಒಬ್ಬ ಪಿ.ಎ.(ವೈಯಕ್ತಿಕ ಸಹಾಯಕ) ಹಗರಣಕೋರರೊಂದಿಗೆ ಆತನ ಸಂಪರ್ಕ ದೃಢಪಟ್ಟ ನಂತರ ಈಗ ಕಸ್ಟಡಿಯಲ್ಲಿದ್ದಾನೆ. ಮುಖ್ಯಮಂತ್ರಿ ಕಚೇರಿ ಸಿಬ್ಬಂದಿವರ್ಗಕ್ಕೆ ಸೇರಿದ ಇತರ ಮೂವರನ್ನು ತೆಗೆದು ಹಾಕಲಾಗಿದೆ. ಮುಖ್ಯಮಂತ್ರಿ ವೈಯಕ್ತಿಕವಾಗಿ ಇದರಲ್ಲಿ ಇದ್ದಾರೆಂಬುದರ ಸಾಕ್ಷ್ಯ ಬೆಳಕಿಗೆ ಬಂದಾಗ ತನಗೆ ಅವರೊಂದಿಗೆ ಯಾವುದೇ ಸಂಪರ್ಕ ಇಲ್ಲ ಎಂದು ಅವರು ನಿರಾಕರಿಸಲು ಪ್ರಯತ್ನಿಸಿದರು. ಆದರೆ ಮುಖ್ಯಮಂತ್ರಿ ಬಿಜು ರಾಧಾಕೃಷ್ಣನ್ ಜತೆ ಒಂದು ಗಂಟೆಯ ಮಾತುಕತೆ ನಡೆಸಿದ್ದರು, ಮತ್ತು ದಿಲ್ಲಿಯ ವಿಜ್ಞಾನ ಭವನದಲ್ಲಿ ಮುಖ್ಯಮಂತ್ರಿ ಒಂದು ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾಗ ಅಲ್ಲಿ ಸರಿತಾ ನಾಯರ್ ಹಾಜರಿದ್ದರು ಎಂಬ ಸಂಗತಿಗಳು ಬೆಳಕಿಗೆ ಬಂದು ಅವರ ನಿರಾಕರಣೆಗಳು ಠುಸ್ಸಾದವು.

ಈ ವ್ಯವಹಾರ, ಶಂಕಿತ ಹಗರಣಕೋರರು ಗೃಹಮಂತ್ರಿ ಮತ್ತು ಇತರ ಮಂತ್ರಿಗಳಿಗೂ ಮಾಡಿದ ವಿವಿಧ ಕರೆಗಳು ಬಯಲಾಗಿ ಇನ್ನಷ್ಟು ರಾಡಿಯಾಗಿದೆ.

ಈ ವಿಷಯದ ಬಗ್ಗೆ ಸ್ಪಷ್ಟಗೊಳಿಸಿ ಎಂದು ಪ್ರತಿಪಕ್ಷಗಳು ಅವಿರತವಾಗಿ ಆಗ್ರಹಿಸಿದರೂ, ಯುಡಿಎಫ್ ಸರಕಾರ ವಿಧಾನಸಭೆಯನ್ನು ಮುಂದೂಡುತ್ತ ತಪ್ಪಿಸಿಕೊಳ್ಳಲು ಪ್ರಯತ್ನಿಸಿತು. ಕೊನೆಗೆ ಇದ್ದಕ್ಕಿದ್ದಂತೆ ಅಧಿವೇಶನವನ್ನು ಸಮಾಪ್ತಗೊಳಿಸಿತು. ನ್ಯಾಯಾಂಗ ತನಿಖೆ ಆಗಬೇಕು, ಮುಖ್ಯಮಂತ್ರಿ ಕೆಳಗಿಳಿಯಬೇಕು ಎಂದು ಎಡ ಪ್ರಜಾಪ್ರಭುತ್ವ ರಂಗ (ಎಲ್‌ಡಿಎಫ್) ಆಗ್ರಹಿಸಿದೆ. ಉಮ್ಮನ್ ಚಾಂಡಿ ಅಧಿಕಾರದಲ್ಲಿ ಇರುವ ವರೆಗೆ ಈ ವಿಷಯದಲ್ಲಿ ನಿಷ್ಪಕ್ಷಪಾತ ತನಿಖೆ ಸಾಧ್ಯವಾಗದು.

ಸೌರ ಹಗರಣ ಮತ್ತು ಅದರಲ್ಲಿ ಮುಖ್ಯಮಂತ್ರಿ ಶಾಮೀಲಿನ ವಿರುದ್ಧ ಸಾಮೂಹಿಕ ಪ್ರತಿಭಟನೆಗಳನ್ನು ಅಮಾನುಷವಾಗಿ ಹತ್ತಿಕ್ಕಲಾಗಿದೆ. ಪ್ರತಿಪಕ್ಷಗಳ ಶಾಸಕರು ಭಾಗವಹಿಸಿದ್ದ ಧರಣಿ ಕಾರ್ಯಕ್ರಮದ ಮೇಲೆ ಅಶ್ರುವಾಯು ಪ್ರಯೋಗ ಪ್ರತಿಪಕ್ಷದ ಮುಖಂಡ ವಿ.ಎಸ್. ಅಚ್ಯುತಾನಂದನ್ ಮತ್ತು ಮಾಜಿ ಮಂತ್ರಿ ಸಿ.ದಿವಾಕರನ್ ಅಸ್ವಸ್ಥರಾಗಿದ್ದಾರೆ. ರಾಜ್ಯಾದ್ಯಂತ ಪ್ರತಿಭಟನೆಗಳ ಮೇಲೆ ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗಗಳನ್ನು ನಡೆಸಲಾಗಿದೆ.

ಉಮ್ಮನ್ ಚಾಂಡಿ ಸರಕಾರ ಎಂದರೇನೇ ದುರಾಡಳಿತ ಎನ್ನುವಂತಾಗಿದೆ. ಎರಡು ವರ್ಷಗಳ ಹಿಂದೆ ಅದು ಅಧಿಕಾರಕ್ಕೆ ಬಂದ ಮೇಲೆ ರೈತರ ಆತ್ಮಹತ್ಯೆಗಳು ಮತ್ತೆ ಕಾಣಿಸಿ ಕೊಳ್ಳಲಾರಂಭಿಸಿವೆ. ಹಿಂದಿನ ಎಲ್‌ಡಿಎಫ್ ಸರಕಾರ ಕೈಗೊಂಡ ಕ್ರಮಗಳಿಂದಾಗಿ ರೈತ ಆತ್ಮಹತ್ಯೆಗಳು ಕೊನೆಗೊಂಡಿದ್ದವು. ಅಟ್ಟಪ್ಪಾಡಿಯಲ್ಲಿ ಬುಡಕಟ್ಟು ಮಕ್ಕಳು ಹಸಿವಿನಿಂದ ಸಾಯುತ್ತಿದ್ದಾರೆ. ಬರ ಮತ್ತು ನೆರೆಯ ಸನ್ನಿವೇಶಗಳಲ್ಲಿ ಸರಕಾರ ಯಾವುದೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ. ಸರಕಾರ ಜಾತಿವಾದಿ ಮತ್ತು ಕೋಮುವಾದಿ ಸಂಘಟನೆಗಳನ್ನು ಬಹಿರಂಗವಾಗಿಯೇ ಸಂತುಷ್ಟಗೊಳಿಸುವ ದಾರಿಯನ್ನು ಹಿಡಿದಿದೆ.



ಸೌರ ಸಾಧನಗಳ ಪೂರೈಕೆಯಲ್ಲಿನ ಮೋಸವನ್ನು ಎಸಗಿ ಜೈಲು ಪಾಲಾಗಿರುವ ಬಿಜು ರಾಧಾಕೃಷ್ಣನ್ ಮತ್ತು ಸರಿತಾ ನಾಯರ್



ಇಂತಹ ಹಿನ್ನೆಲೆಯಲ್ಲಿ, ಸೌರ ಹಗರಣ ಯುಡಿಎಫ್ ಸರಕಾರ ಮತ್ತು ಮುಖ್ಯಮಂತ್ರಿಗಳ ವಿಶ್ವಾಸಾರ್ಹತೆಯನ್ನು ತಟ್ಟಿದೆ. ಪ್ರಜಾಪ್ರಭುತ್ವ ವಿಧಿ-ವಿಧಾನಗಳು ಮತ್ತು ನೈತಿಕತೆಯ ದೃಷ್ಟಿಯಿಂದ ಮುಖ್ಯಮಂತ್ರಿ ತಕ್ಷಣವೇ ರಾಜೀನಾಮೆ ನೀಡಬೇಕಾಗಿದೆ. ಇದನ್ನು ಆಗಗೊಳಿಸಲು ಒಂದು ದೃಢನಿರ್ಧಾರದ ಸಾಮೂಹಿಕ ಹೋರಾಟವನ್ನು ಕೇರಳ ವೀಕ್ಷಿಸುತ್ತಿದೆ.

ವಿಶ್ವಾಸಾರ್ಹತೆಯನ್ನು ಕಳಕೊಂಡಿರುವ ಮುಖ್ಯಮಂತ್ರಿಗಳು ರಾಜೀನಾಮೆ ನೀಡುವಂತೆ ಮಾಡುವ ಒಂದು ದೃಢನಿರ್ಧಾರದ ಸಾಮೂಹಿಕ ಹೋರಾಟವನ್ನು ಕೇರಳ ಇಂದು ವೀಕ್ಷಿಸುತ್ತಿದೆ.



'ವಿದ್ಯಾರ್ಥಿ ವೇತನ ಕಿತ್ತುಕೊಳ್ಳಲು ಬಿಡೆವು'

ಬೀಡಿ ಕಾರ್ಮಿಕರ ರಾಜ್ಯ ಮಟ್ಟದ ರ್‍ಯಾಲಿಯಲ್ಲಿ ಘೋಷಣೆ

ಸೈಯದ್ ಮುಜೀಬ್

ಕರ್ನಾಟಕ ರಾಜ್ಯದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಬೀಡಿ ಕಾರ್ಮಿಕರಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಈ ಬೀಡಿ ಕಟ್ಟುವ ಉದ್ಯಮದಲ್ಲಿ ತೊಡಗಿದ್ದಾರೆ. ಪುರುಷರೂ ಇದ್ದಾರೆ. ಲಿಕ್ಕರ್ ಉದ್ದಿಮೆ ಹೇಗೋ ಹಾಗೆ ಬೀಡಿ ಉದ್ದಿಮೆ ಸಹ ಆಳುವ ಸರ್ಕಾರಗಳ ಖಜಾನೆಗೆ ಒಳ್ಳೆಯ ಆದಾಯ ತರುವ ಉದ್ಯಮವಾಗಿದೆ. ಬೀಡಿ ಕಾರ್ಮಿಕರ ಶ್ರಮದಿಂದ ತಯಾರಾಗುವ ಪ್ರತಿ ಬೀಡಿಯ ಮೇಲೆ ಅದನ್ನು ಕೊಳ್ಳುವ ಜನರು ತೆರಿಗೆ ಕೊಡುತ್ತಾರೆ. ಕಾರ್ಮಿಕರ ಕಲ್ಯಾಣದ ಉದ್ದೇಶಕ್ಕಾಗಿ ಕೂಡ ಕೊಳ್ಳುವ ಜನರು ಕರ ಇತ್ಯಾದಿ ತೆರುತ್ತಾರೆ.

ಏನೋ ಸಂಕಟ

ಬೀಡಿ ಕಾರ್ಮಿಕರು ನಿರಂತರವಾಗಿ ಹೊಗೆಸೊಪ್ಪಿನೊಂದಿಗೆ ಒಡನಾಡುತ್ತಾರೆ. ಒಂದು ಅರ್ಥದಲ್ಲಿ ಬೀಡಿ ಸೇದುವವರ ಆನಂದಕ್ಕಾಗಿ ಇವರು ತಮ್ಮ ಆರೋಗ್ಯವನ್ನೇ ಪಣವಾಗಿಟ್ಟು ಕೆಲಸ ಮಾಡುತ್ತಾರೆ. ಆದರೆ ಇಂತಹ ಜನರ ಕ್ಷೇಮದ ಹೆಸರಿನಲ್ಲಿ ಬೀಡಿ ಬಳಕೆದಾರರಾದ ಬಡವರಿಂದ ವಸೂಲಿ ಮಾಡಲಾದ ಹಣವನ್ನೂ ಈ ಕಾರ್ಮಿಕರ ಕಲ್ಯಾಣಕ್ಕೆ ಖರ್ಚು ಮಾಡಲು ಆಳುವ ಜನರಿಗೆ 'ಏನೋ ಸಂಕಟ'.

ಬೀಡಿ ಕಟ್ಟುವ ಬೀಡಿ ಕಾರ್ಮಿಕರ ಕಲ್ಯಾಣದ ಪ್ರಶ್ನೆ ಎಂದರೆ ನಮ್ಮ ಸರ್ಕಾರಗಳಿಗೆ ಎಲ್ಲಿಲ್ಲದ ತಾತ್ಸಾರ. ಬೀಡಿ ಕಾರ್ಮಿಕರೇನು ಇಡೀ ಕಾರ್ಮಿಕ ವರ್ಗದ ಕುರಿತೂ ಆಳುವವರಿಗೆ ದಿವ್ಯ ತಿರಸ್ಕಾರ.

ವಿದ್ಯಾರ್ಥಿ ವೇತನ ಬಂದಿಲ್ಲ

ರಾಜ್ಯದಲ್ಲಿ ಕಳೆದ 2–3 ವರ್ಷಗಳಿಂದ ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಸಮರ್ಪಕವಾಗಿ ಬಂದಿಲ್ಲ. ವಿದ್ಯಾರ್ಥಿ ವೇತನ ಮಂಜೂರಾದ ಬಗ್ಗೆ ಸಂಬಂಧಿಸಿದವರಿಗಾಗಲಿ ಅಥವಾ ಶಾಲಾ ಕಾಲೇಜುಗಳ ಮುಖ್ಯಸ್ಥರಿಗಾಗಲಿ ಮಾಹಿತಿ ಬಾರದ ಕಾರಣ ವಿಷಯ ಗೊಂದಲದ ಗೂಡಾಗಿದೆ. ಕೇಂದ್ರ ಕಾರ್ಮಿಕ ಇಲಾಖೆಯ ಕಾರ್ಮಿಕ ಕಲ್ಯಾಣ ಆಯುಕ್ತರು ವಿದ್ಯಾರ್ಥಿ ವೇತನವನ್ನು ನಿಯಮಿತವಾಗಿ ಒದಗಿಸುವ ಜವಾಬ್ದಾರಿ ಹೊಂದಿದ್ದಾರೆ. ಅವರಿಗೇನು 'ತೊಂದರೆ'ಯೋ ಹೊರಗಿನ ಜನಕ್ಕೆ ಅದು ತಿಳಿಯದಾಗಿದೆ. ಅವರು ದೂರದ ದೆಹಲಿಯಲ್ಲಿದ್ದಾರೆ. ಇಂತಹ ಸಮಸ್ಯೆಗಳನ್ನು 'ನೋಡಿ' ಬಗೆ ಹರಿಸಲೆಂದೇ ಕರ್ನಾಟಕ ರಾಜ್ಯದಲ್ಲಿಯೂ ಒಂದು ಹುದ್ದೇ ಇದೆ. ಅದು 'ಆಯುಕ್ತರು' ಎಂಬ ದೊಡ್ಡ ಹೆಸರಿನ ಹುದ್ದೆ. ಆದರೆ ಆ ಹುದ್ದೆಗೆ ಖಾಯಂ ಅಧಿಕಾರಿ ಇಲ್ಲವೇ ಇಲ್ಲ. ಮತ್ತೇನೇನೋ ಜವಾಬ್ದಾರಿ ಹೊಂದಿರುವ ಅಧಿಕಾರಿಯೊಬ್ಬರಿಗೆ ಹೆಚ್ಚುವರಿ ಜವಾಬ್ದಾರಿಯಾಗಿ ಈ ಹೊಣೆ ನೀಡಲಾಗಿದೆ.

ತೆರೆ ಮರೆಯ ವಾಸ್ತವ

ವಾಸ್ತವವಾಗಿ ಬೀಡಿ ಕಾರ್ಮಿಕರ ಮಕ್ಕಳಿಗೆ ನೀಡಲಾಗುವ ವಿದ್ಯಾರ್ಥಿ ವೇತನದಲ್ಲಿ 1ನೇ ತರಗತಿಯಿಂದ 8ನೇ ತರಗತಿವರೆಗಿನ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುವುದನ್ನು ನಿಲ್ಲಿಸಲು ಕೇಂದ್ರ ಸರ್ಕಾರ ಹೊರಟಿರುವ ಬಗೆಗೆ ಸಂಘಟನೆಗೆ ಖಚಿತ ಮಾಹಿತಿ ಇದೆ. ಇದಕ್ಕಾಗಿ ಕೇಂದ್ರದ ಮಟ್ಟದಲ್ಲಿ ಸಂಬಂಧಿಸಿದ ಸಮಿತಿಗಳಿಂದ ಸಿಐಟಿಯು ಸಂಘಟನೆಯ ಪ್ರತಿನಿಧಿಗಳನ್ನು ಹೊರಗಿಟ್ಟು ಬೇಕಾದ ತೀರ್ಮಾನ ಮಾಡಿಸಿಕೊಳ್ಳುವ ಸಂಚುಗಳು ನಡೆದಿವೆ.



ವಿದ್ಯಾರ್ಥಿ ವೇತನಕ್ಕೆ ಆಧಾರ್ ಕಾರ್ಡ್‌ನ ಆಧಾರವನ್ನು ಕೇಳಲಾಗುತ್ತಿದೆ. ದೇಶದ ಬಹುಸಂಖ್ಯಾತ ಜನತೆ ಆಧಾರ್ ಕಾರ್ಡ್ ಹೊಂದಿಲ್ಲ. ಹಾಗಾಗಿ ವಿದ್ಯಾರ್ಥಿ ವೇತನ ಪಡೆಯಲು ಈ ಕಾರ್ಡ್ ಅನ್ನು ಕಡ್ಡಾಯಗೊಳಿಸುವುದು ಕೂಡ ಬಹುತೇಕ ಬಡ ಬೀಡಿ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಸ್ಕಾಲರ್‌ಶಿಪ್ ರೂಪದಲ್ಲಿ ದೊರೆಯುವ ಧನ ಸಹಾಯವನ್ನು ವಂಚಿಸುವ ಕೇಂದ್ರ ಕಾಂಗ್ರೆಸ್ ಸರ್ಕಾರದ ತಂತ್ರವೇ ಆಗಿದೆ.

'ವಿದ್ಯಾರ್ಥಿ ವೇತನ ಬಿಡುಗಡೆ ಮಾಡಿ– ಕೂಡಲೇ ಪಟ್ಟಿ ನೀಡಿ'

ಬೀಡಿ ಕಾರ್ಮಿಕರ ವಿದ್ಯಾರ್ಥಿ ವೇತನ ಕಡಿತ ಮಾಡುವ ಯಾವ ಧೋರಣೆಗೂ ಅವಕಾಶ ನೀಡುವುದಿಲ್ಲ. ಎಲ್ಲ ಅರ್ಹ ಬೀಡಿ ಕಾರ್ಮಿಕರ ಮಕ್ಕಳಿಗೂ ವಿದ್ಯಾರ್ಥಿ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಶಾಲಾ–ಕಾಲೇಜುಗಳಿಗೆ ಕಡ್ಡಾಯವಾಗಿ ವಿದ್ಯಾರ್ಥಿ ವೇತನ ಮಂಜೂರಾದವರ ಪಟ್ಟಿ ನೀಡಬೇಕು ಎಂದು ಆಗ್ರಹಿಸಿ ಸಿಐಟಿಯು ನೇತೃತ್ವದ 'ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್' ಒತ್ತಾಯಿಸಿತು. ಅದು ಸುಮ್ಮ ಸುಮ್ಮನೆ ಒತ್ತಾಯವಲ್ಲ. ಜುಲೈ 9, 2013 ರಂದು ರಾಜ್ಯಮಟ್ಟದ ರ್‍ಯಾಲಿಯ ಮೂಲಕ ಈ ಮೇಲಿನ ಬೇಡಿಕೆಗಳ ಈಡೇರಿ–ಕೆಗೆ ಸಂಘ ಅಗ್ರಹಿಸಿತು. ರ್‍ಯಾಲಿಯಲ್ಲಿ ವಿದ್ಯಾರ್ಥಿ ವೇತನದ ಪ್ರಶ್ನೆ ಮಾತ್ರವಲ್ಲ ಬೀಡಿ ಕಾರ್ಮಿಕರ ಇತರ ಗಂಭೀರ ಪ್ರಶ್ನೆಗಳು ಪ್ರತಿಧ್ವನಿಸಿದವು.

ಕೂಲಿ–ತುಟ್ಟಿಭತ್ಯೆ–ಪಿಂಚಣಿ ಪ್ರಶ್ನೆ

ವಿಪರೀತ ಬೆಲೆ ಏರಿಕೆಯಿಂದಾಗಿ ಅಸಂಘಟಿತ ವಲಯದ ಇತರ ಕಾರ್ಮಿಕರಂತೆ ಬೀಡಿ ಕಾರ್ಮಿಕರು ಸಹ ಜರ್ಜರಿತರಾಗಿದ್ದಾರೆ. ಹೀಗಾಗಿ ಸಾವಿರ ಬೀಡಿಗಳಿಗೆ ಕನಿಷ್ಠ ಕೂಲಿ 200 ರೂ. ಗೆ ಹೆಚ್ಚಿಸಬೇಕು. ತುಟ್ಟಿಭತ್ಯೆ ಪಾಯಿಂಟಿಗೆ 5ಪೈಸೆ ನಿಗದಿಗೊಳಿಸಬೇಕು. ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಿ ಎಲ ಬೀಡಿ ಕಾರ್ಮಿಕರನ್ನು ಭವಿಷ್ಯ ನಿಧಿ(ಪಿ.ಎಫ್.) ಸೌಲಭ್ಯಕ್ಕೆ ಒಳ ಪಡಿಸಬೇಕು. ಗುರುತಿನ ಚೀಟಿ, ಲಾಗ್ ಪುಸ್ತಕ ನೀಡಬೇಕು. ಉತ್ಪಾದಿತ ಎಲ್ಲಾ ಬೀಡಿಗಳಿಗೆ ಯಾವುದೇ ವಿನಾಯ್ತಿ ನೀಡದೆ ಕಡ್ಡಾಯವಾಗಿ ಕ್ಷೇಮಾಭಿವೃದ್ಧಿ ಕರ ಹಾಗೂ ಅಬಕಾರಿ ಸುಂಕ ಸಂಗ್ರಹಿಸಬೇಕು. ಕ್ಷೇಮಾಭಿವೃದ್ಧಿ ಸಂಘಟನೆಯ ಆಡಳಿತ ವೆಚ್ಚವನ್ನು 10%ಕ್ಕೆ ಸೀಮಿತಗೊಳಿಸಿ ಕೇಂದ್ರ ಸರ್ಕಾರವು ಸಮಾನ ಅನುದಾನ ನೀಡಬೇಕು. ಧೂಮಪಾನ ನಿಷೇಧ ಕಾಯ್ದೆಯಿಂದಾಗಿ ಕೆಲಸ ಕಳೆದುಕೊಂಡ ಬೀಡಿ ಕಾರ್ಮಿಕರಿಗೆ ಸೂಕ್ತ ಪರಿಹಾರ ನೀಡಬೇಕು. ಎಲ್ಲಾ ಬೀಡಿ ಕಾರ್ಮಿಕರಿಗೆ ಬಿಪಿಎಲ್ ಕಾರ್ಡ್ ನೀಡಬೇಕು. ವಸತಿಹೀನ ಬೀಡಿ ಕಾರ್ಮಿಕರಿಗೆ ಸಾಮೂಹಿಕ ವಸತಿ ಯೋಜನೆ ರೂಪಿಸಿ ಸರಿಯಾಗಿ ಜಾರಿ ಮಾಡಬೇಕು. ಈಗಾಗಲೇ ವಸತಿ ಕೊಡಿಸುವ ನೆಪದಲ್ಲಿ ಸಾವಿರಾರು ಬೀಡಿ ಕಾರ್ಮಿಕರನ್ನು ವಂಚಿಸಿರುವವರ ವಿರುದ್ಧ ಸಿಓಡಿ ತನಿಖೆ ನಡೆಸಿ ವಂಚಕರನ್ನು ಶಿಕ್ಷಿಸಬೇಕು. ಇದೇ ಮೊದಲಾದ ಬೇಡಿಕೆಗಳಿಗಾಗಿ ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು.

ಬೆಂಗಳೂರಿನಲ್ಲಿ ರ್‍ಯಾಲಿ

ಜುಲೈ 09–2013 ರಂದು ರಾಜ್ಯದ ಎಲ್ಲೆಡೆಯಿಂದ ಬಂದ ಬೀಡಿ ಕಾರ್ಮಿಕರು ಬೆಂಗಳೂರಿನ ಕೇಂದ್ರ ರೈಲ್ವೆ ನಿಲ್ದಾಣದಿಂದ ಪ್ರತಿಭಟನಾ ಮೆರವಣಿಗೆಯಲ್ಲಿ ಹೊರಟು ಸ್ವಾತಂತ್ರ್ಯ ಉದ್ಯಾನವನದ ಬಳಿ ಸಮಾವೇಶಗೊಂಡರು. ಪ್ರತಿಭಟನೆಯನ್ನು ಉದ್ದೇಶಿಸಿ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್‌ನ ಅಧ್ಯಕ್ಷರಾದ ಬಿ. ಮಾಧವ, ಸಿಐಟಿಯುನ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಎಸ್. ಪ್ರಸನ್ನಕುಮಾರ್, ರಾಜ್ಯ ಖಜಾಂಚಿ ಜೆ. ಬಾಲಕೃಷ್ಣಶೆಟ್ಟಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್, ಮಂಡ್ಯದ ಕುಮಾರಿ, ಮೂಡಬಿದ್ರೆ ರಮಣಿ ಇವರುಗಳು ಮಾತನಾಡಿದರು.

ಭಾರತ ಸರ್ಕಾರದ ಕಾರ್ಮಿಕ ಇಲಾಖೆಯ ಬೀಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಆಯುಕ್ತರ ಕಛೇರಿಯಿಂದ ಮನವಿ ಸ್ವೀಕರಿಸಲು ಆಗಮಿಸಿದ ಆಡಳಿತ ಅಧಿಕಾರಿ ರಂಜಿನಿ ದಾಸ್, ಅವರಿಗೆ ಬೀಡಿ ಕಾರ್ಮಿಕರು ಪ್ರಶ್ನೆಗಳ ಸುರಿಮಳೆಗೈದರು. ಮಧ್ಯಾಹ್ನ ರಾಜ್ಯ ಪದಾಧಿಕಾರಿಗಳ ನಿಯೋಗ ಕಾರ್ಮಿಕ ಇಲಾಖೆಯ ಆಡಳಿತಾಧಿಕಾರಿಯನ್ನು ಭೇಟಿ ಮಾಡಿ ಮನವಿ ಅರ್ಪಿಸಿ ಬೇಡಿಕೆಗಳ ಕುರಿತು ವಿವರವಾಗಿ ಚರ್ಚಿಸಿತು.

ರಾಜ್ಯದ ಮಂಗಳೂರು, ಉಡುಪಿ, ರಾಮನಗರ, ಮಂಡ್ಯ, ತುಮಕೂರು, ಹರಿಹರ, ಹಾನಗಲ್, ನಿಪ್ಪಾಣಿ, ಕೋಲಾರ, ಗೌರಿಬಿದನೂರು, ಬೆಂಗಳೂರಿನಿಂದ ನೂರಾರು ಬೀಡಿ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಹಾಗೂ ರಾಜ್ಯದ ಆಡಳಿತಾಧಿಕಾರಿಗಳು ಹಾಗೂ ಭವಿಷ್ಯ ನಿಧಿ ಆಯುಕ್ತರಿಗೆ ಮನವಿ ಪತ್ರ ನೀಡಲಾಯಿತು.

ಫಲಿತಾಂಶ:

'ತಾಂತ್ರಿಕ' ತೊಂದರೆಯಿಂದ ವಿದ್ಯಾರ್ಥಿ ವೇತನ ಬಿಡುಗಡೆಯಲ್ಲಿ ವಿಳಂಬವಾಗಿರುವುದು ನಿಜ. ಅದನ್ನು ಶೀಘ್ರವೇ ಸರಿಪಡಿಸಲಾಗುವುದು. ವಿದ್ಯಾರ್ಥಿ ವೇತನ ಬಿಡುಗಡೆಯಾದ ಕೂಡಲೇ ಸಂಬಂಧಿಸಿದವರಿಗೆ ಪಟ್ಟಿ ಕಳಿಸಿ ಮಾಹಿತಿ ನೀಡಲು ಕ್ರಮ ವಹಿಸಲಾಗುವುದು ಎಂದು ಆಡಳಿತಾಧಿಕಾರಿ ಭರವಸೆ ನೀಡಿದರು. ಇಷ್ಟಲ್ಲದೇ ನಿರ್ದಿಷ್ಟ ದೂರು ಇದ್ದಲ್ಲಿ ಆ ಬಗ್ಗೆಯೂ ಕ್ರಮ ವಹಿಸುವುದಾಗಿಯೂ ಅವರು ಹೇಳಿದರು. ಹೋರಾಟದ ಇತರ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಸಹ ಅವರು ಹೇಳಿದರು.

ಶ್ರಮಜೀವಿಗಳಿಗೆ ಬಜೆಟ್‌ನಲ್ಲಿ ಅನ್ಯಾಯ.. ಹಕ್ಕು ಕೇಳೋಕೆ ಬೆಂಗಳೂರಿಗೆ ಬಂದ ಹಮಾಲಿ ಕಾರ್ಮಿಕರು

ಕೆ. ಮಹಂತೇಶ್,

ಈ ಹೊಸ ಸರ್ಕಾರದವರ್ರು ಬಡವ್ರಿಗೆ ಅಕ್ಕಿಯೇನೂ ಕೊಡಾಕೆ ಚಾಲು ಮಾಡ್ಯರ್ರೀ.. ಅದು ನಮ್ಮಂತಾ ದುಡ್ದು ತಿನ್ನೋ ಮಂದಿಗೆ ಖರೆ ಅಂದ್ರೂ ಚಲೋನೇ ಬಿಡ್ರೀ ...ಪ್ರಾ...ನಮ್ಗೆ ಬಿಪಿಎಲ್ ಕಾರ್ಡ ಅನ್ನೋದೇ ಸಿಕ್ಕಿಲ್ಲ ನೋಡ್ರೀ, ನಮ್ಮಂತ ಬಡವ್ರನ ಸ್ವಲ್ಪ ಈ ಸರ್ಕಾರದವ್ರ ಹೊಟ್ಟೆಗ್ಹಾಕನಂಗ ನೀವೇ ಏನಾದ್ರು ಮಾಡ್ರಪ್ಪೋ..ಅಂತಾ ರಾಯಚೂರಿನಿಂದ ಬೆಂಗಳೂರಿಗೆ ಬಂದಿದ್ದ ಹತ್ತಾರು ಕೂಲಿ ಮಾಡೋ ಹೆಣ್ಮಕ್ಕಳು ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಸುರಿಯೋ ಮಳೆ ಲೆಕ್ಕಿಸದೇ ತಮ್ಮ ಕಷ್ಟನಾ ಹೇಳ್ತಾನೇ ಇದ್ರು..

ಅವ್ರಿಗೆ 'ಹೋರಾಟ ಮಾಡೋಣ' ಅಂತಾ ಸಮಾಧಾನದ ನಾಕ್ ಮಾತ ಹೇಳಿ ಮುಗಸದ್ರೋಳಗೆ ಹಿರಿಯೂರಿನ ಹಮಾಲಿ ತಾಯಂದಿರು ಬಂದು ಸುತ್ತುವರೆದ್ರು, ಇಪ್ಪತ್ತು ವರ್ಷದಿಂದ ಗಾಣದ ಎತ್ತಿನ ...ದುಡಿತಾನೆ ಇದ್ದೇವೆ ಆದ್ರೂ ನಮ್ಗೊಂದು ತಲೆ ಮೇಲೆ ಸೂರು ಅನ್ನೋದೇ ಇಲ್ಲ.. ಬೆಂಗ್ಳೂರಿಗೆ ಬರೋದು ಹೋಗೋದು ಆಗಿದೆವರ್ತೂ ಮನಿ ಮಾತ್ರ ಸಿಕ್ಕಿಲ್ಲ ಅಂತಾ ಗೋಳು ತೋಡಿಕೊಂಡ್ರು..

ಹೌದು **'ಯಾವ ರಾಜ ಬಂದ್ರು ರಾಗಿ ಬೀಸೋದು ತಪ್ಪಲಿಲ್ಲ'** ಅನ್ನೋದು ದುಡಿಯೋ ವರ್ಗದ ಮಂದಿ ಆಡೋ ಸಾಮಾನ್ಯ ಮಾತು. ಈಗ್ಲೂ ಅಷ್ಟೇ. ಯಡಿಯುರಪ್ಪ ಹೋದಾ..ಸದಾನಂದಗೌಡ ಬಂದ, ಸದಾನಂದಗೌಡ ಹೋದಾ.. ಶೆಟ್ಟರ್ ಬಂದ.. ಈಗ ಶೆಟ್ಟರ್ ಹೋದ್ರು.. ಸಿದ್ದರಾಮಯ್ಯ ಬಂದ್ರು ಢುಂ..ಢುಂ ಅನೋ ರೀತಿಯ ಮಕ್ಕಳ ಕಥೆಯಾಗಿದೆ. ಇವತ್ತಿನ ...ಕೀಯ ಪರಿಸ್ಥಿತಿ. ನೇತಾರರು..ಪಕ್ಷಗಳೂ ಬದಲಾಗುತ್ತಿವೆ ಅಷ್ಟೇ ! ಆದರೆ ನೀತಿಗಳು ಬಡವರ ಪರವಾಗಿ ದುಡಿಯೋರಾ ಪರವಾಗಿ ಬದಲಾಗುತ್ತಿಲ್ಲ. ಈ ಕಾರಣದಿಂದ್ಲೇ. ಮೇಲ್ಕಂಡ ಮಹಿಳೆಯರೂ ಸೇರಿದಂತೆ ದುಡಿದು ತಿನ್ನೋ ಜನಕ್ಕೆಲ್ಲಾ ಹೊಟ್ಟೆ ತುಂಬಾ ಊಟ ಮಾಡಲಿಕ್ಕೆ ರೇಷನ್ ಬೇಕು ಅನ್ನೋ ಬೇಡಿಕೆಗಳಾಗಲಿ ಅಥವಾ ತಲೆಮೇಲೊಂದು ಎಲ್ಲಾರಿಗೂ ಸೂರು ಸಿಗಬೇಕೆಂಬ ಆಗ್ರಹಕ್ಕಾಗ್ಲೀ ಹಿಂದಿನ ಬಿಜೆಪಿ ಸರ್ಕಾರದಲ್ಲಾಗ್ಲೀ ಅಥವಾ ಇವತ್ತಿನ ಕಾಂಗ್ರೆಸ್ ಸರ್ಕಾರಕ್ಕೆ ಆದ್ಯತೆಯಾಗಿ ಉಳಿದಿಲ್ಲ. ಹೀಂಗಾಗೀಯೇ ದುಡಿಯೋ ಜನಕ್ಕೆ ಮಾತ್ರ ಬದುಕಬೇಕು ಅಂದ್ರೆ ಹೋರಾಟ ಮಾಡ್ದೆ ಬೇರೆ ದಾರಿಯೇ ಇಲ್ಲ. ದುಡಿಯೋರಿಗೆ ಮಳೆ ಬಂದೂ ನೆರೆಹಾವಳಿ ಕಾಟ. ಬರ ಬಂದ್ರೆ ಕೂಲಿಗಾಗಿ ಪರದಾಟ. ಆದ್ರಿಂದ್ಲೇ.. ...ರ ತುಂಬಾ ಮಳೆ ಬರ್ತಾಯಿದೆ. ಕೂಲಿ ಬೇರೆ ಇಲ್ಲ. ಮಾರ್ಕೆಟ್‌ಗಳೂ ನಡಿತಿಲ್ಲ. ಅಂತಾ ಬದುಕಿನಾ ಮ್ಯಾಲೆನೇ ಬೇಸ್ರ ಮಾಡ್ಕಂಡ ಜನ

ಬೆಂದೂರು..ಬೆವರೂರು

ಬಡತನದ ತವರೂರಾದ ಬೆಂಗಳೂರಿನತ್ತ.. ಅಹಿಂದಾ (ಅಲ್ಲಸಂಖ್ಯಾತರು- ಹಿಂದುಳಿದವರು- ದಲಿತರು) ಹೆಸರ್‌ನ್ಯಾಗ ಫೇಮಸ್ಸಾಗಿ ಈಗ ಮುಖ್ಯ ಮಂತ್ರಿ ಆಗಿರೋ



ಸಿದ್ದರಾಮಣ್ಣ ಬಜೆಟ್‌ನಲ್ಲಿ ಯಾಕ್ ನಮ್ಮತ್ರ ತಿರುಗಿಲ್ಲಾ ಅಂತಾ.. ಕೇಳೋಕೇ ಹಿಂದಿನ ದಿನವೇ ತಮ್ಮತಮ್ಮ ಊರುಗಳಿಂದ ರೊಟ್ಟಿ ಬುತ್ತಿ ಕಟ್ಟಿಕೊಂಡು ಜುಲೈ 18 ರಂದು ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿನತ್ತ ಮುಖ ಮಾಡಿದ್ರು...

ರಾಜ್ಯದ ಎಪಿಎಂಸಿ ಮಾರುಕಟ್ಟೆಗಳಲ್ಲಿ, ಅಕ್ಕಿ ಗಿರಣಿ, ಎಣ್ಣೆ, ಬೇಳೆ ಮಿಲ್‌ಗಳಲ್ಲಿ, ಎಫ್‌ಸಿಐ ಗೋಡಾನ್. ಸೆಂಟ್ರಲ್ ಮತ್ತು ಸ್ಟೇಟ್ ವೇರ್ ಹೌಸ್, ಆಹಾರ ನಿಗಮ ಮತ್ತು ಪಾನೀಯ ನಿಗಮ, ರೇಷ್ಮೇ ಮಾರುಕಟ್ಟೆ ಮತ್ತು ರೇಲ್ವೇ ಗೂಡ್ ಶೆಡ್ ಹಾಗೂ ಸರ್ಕಾರಿ/ಖಾಸಗಿ ಬಸ್ ನಿಲ್ದಾಣಗಳು ಮತ್ತು ನಗರ/ಗ್ರಾಮೀಣ ಮಾರುಕಟ್ಟೆ ಪ್ರದೇಶಗಳಲ್ಲಿ ಹತ್ತಾರು ವರ್ಷಗಳಿಂದ ಭಾರವಾದ ಮೂಟೆಗಳನ್ನು ಹೊರುತ್ತಾ ಯಾವೊಂದು ಸೌಲಭ್ಯಗಳಿಲ್ಲದೇ ಈ ಕಾರ್ಮಿಕರು ಬದುಕು ಸಾಗಿಸುತ್ತಿದ್ದಾರೆ. ಈ ಬಗ್ಗೆ ಹತ್ತಾರು ಬಾರಿ ಹೋರಾಟ ಮಾಡಿದ ಪರಿಣಾಮ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಅನ್ನೋದು ಅಸ್ತಿತ್ವಕ್ಕೆ ಬಂದಿದೆ. ಆದರೆ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಇದುವರೆಗೂ ಕನಿಷ್ಟ ಗುರುತಿನ ಚೀಟಿ ಕೊಡೋ ಕೆಲ್ಸನೂ ಅದು ಮಾಡಿಲ್ಲ.

ರಟ್ಟೇ ಬಿಟ್ರೇ.. ಆಸ್ತಿಯೇ ಇಲ್ಲದವರು..

ರಾಜ್ಯದಲ್ಲಿರೋ 144 ಮುಖ್ಯ ಹಾಗೂ 383 ಉಪ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಸಾವಿರಾರು ಹಮಾಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕೇವಲ ಸೀಜನ್ ವೇಳೆಯಲ್ಲಿ ಮಾತ್ರ ಸಿಗುವ ಕೂಲಿ ಮಾತ್ರವೇ ಇವರಿಗೆ ಜೀವನಾಧಾರ. ಉಳಿದಂತೆ ಆರೇಳು ತಿಂಗಳು ನಿರುದ್ಯೋಗಿಗಳಾಗಿ ಬದುಕು ಸಾಗಿಸುವ ಪರಿಸ್ಥಿತಿ. ಈ ಕುರಿತು ಕಾರ್ಮಿಕರು ಸರ್ಕಾರದ ಗಮನ ಸೆಳೆಯುವ ಹೋರಾಟ ನಡೆಸಿದ ಪರಿಣಾಮವಾಗಿ



ಎಪಿಎಂಸಿ ನಿರ್ದೇಶಕರು ಹಲವು ಸುತ್ತಿನ ಮಾತುಕತೆ ನಡೆಸಿ ಒಂದೆರಡು ಸೌಲಭ್ಯಗಳನ್ನು ಒದಗಿಸಲು ಯತ್ನಿಸಿದ್ದಾರೆ. ಉಳಿದ ಎಲ್ಲಾ ಬೇಡಿಕೆಗಳು ಕೇವಲ ಸುತ್ತೋಲೆಯಲ್ಲಿ ಮಾತ್ರವೇ ಸುತ್ತಾಡುತ್ತಿವೆ. ಅಲ್ಲಿ ಕೆಲ್ಸ ಮಾಡೋ ಕಾರ್ಮಿಕರಿಗೆ ಕೂಲಿಯೊಂದನ್ನು ಹೊರತುಪಡಿಸಿ ಯಾವುದೇ ಸಾಮಾಜಿಕ ಭದ್ರತೆ ಅನ್ನೋದು ಇನ್ನೂ ಮರೀಚಿಕೆ. 2011 ನೇ ಸಾಲಿನಲ್ಲಿ ರಾಜ್ಯದ ಎಪಿಎಂಸಿ ಮಾರುಕಟ್ಟೆಗಳು ಸುಮಾರು 26 ಸಾವಿರ ಕೋಟಿ ಕೃಷಿ ಉತ್ಪನ್ನ ವಹಿವಾಟು ನಡೆಸಿವೆ. ಅದರಲ್ಲಿ ಸುಮಾರು 4 ಸಾವಿರ ಕೋಟಿಗಿಂತ ಅಧಿಕ ಹಣ ಸೆಸ್ ರೂಪದಲ್ಲಿ ಇಲಾಖೆ ಬೊಕ್ಕಸ ತುಂಬಿದೆ. ಆದ್ರೆ ಅದರಲ್ಲಿ ಹಮಾಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಮಾತ್ರ ಯಾವುದೇ ಅನುದಾನವಿಲ್ಲ. ಹೀಗಾಗಿಯೇ ಪ್ರತಿ ಎಪಿಎಂಸಿ ವಹಿವಾಟಿನ ಶೇ 10 ರಷ್ಟು ಹಣವನ್ನು ಇವ್ರ ಕಲ್ಯಾಣಕ್ಕಾಗಿ ಮೀಸಲಿರಿಸಬೇಕು. ಇಲಾಖೆಯಿಂದಲೇ ವಸತಿ ಯೋಜನೆ ಜಾರಿ ಮಾಡಬೇಕು ಅನ್ನೋದು ಈ ಬೆಂಗಳೂರು ಹೋರಾಟದ ಪ್ರಮುಖ ಬೇಡಿಕೆಯಾಗಿತ್ತು.

ಹೆಸರಿಗೆ ಮಾತ್ರ ಕಾನೂನು..

ಮತ್ತೊಂದು ಕಡೆ ಅಕ್ಕಿ ಗಿರಣಿ, ಎಣ್ಣೆ, ಬೇಳೆ ಮಿಲ್‌ಗಳಲ್ಲಿ, ಎಫ್‌ಸಿಐ ಗೋಡಾನ್. ಸೆಂಟ್ರಲ್ ಮತ್ತು ಸ್ಟೇಟ್ ವೇರ್ ಹೌಸ್, ಆಹಾರ ನಿಗಮ ಮತ್ತು ಪಾನೀಯ ನಿಗಮ, ರೇಷ್ಮೇ ಮಾರುಕಟ್ಟೆ ಮತ್ತು ರೇಲ್ವೇ ಗೂಡ್ ಶೆಡ್ ಹಾಗೂ ಸರ್ಕಾರಿ/ಖಾಸಗಿ ಬಸ್ ನಿಲ್ದಾಣಗಳು ಮತ್ತು ನಗರ/ಗ್ರಾಮೀಣ ಮಾರುಕಟ್ಟೆ (ಬಜಾರ್) ಪ್ರದೇಶಗಳಲ್ಲಿ ಕೂಡ ಸಾವಿರಾರು ಹಮಾಲಿ ಕಾರ್ಮಿಕರು ಹತ್ತಾರು ವರ್ಷಗಳಿಂದ ಕೆಲಸ ಮಾಡ್ತಾ ಇದ್ದಾರೆ. ಈ ರೀತಿಯಲ್ಲಿ ಕೆಲಸ ಮಾಡೋ ಕಾರ್ಮಿಕರಿಗಾಗಿಯೇ ಕನಿಷ್ಟ ಕೂಲಿ, ರಜಾ ಸೌಲಭ್ಯ, ಬೋನಸ್, ಗ್ರಾಚುಟಿ, ವಿಮಾ ಸೌಲಭ್ಯಗಳನ್ನು ಒದಗಿಸಬೇಕು ಅನ್ನೋ ಕಾನೂನುಗಳಿವೆ. ಆದರೆ ಅವೆಲ್ಲಾ ಪುಸ್ತಕದ ಬದನೆ ಕಾಯಿಗಳಾಗಿವೆ. ಮಾಲೀಕರು, ಕಾರ್ಮಿಕ ಅಧಿಕಾರಿಗಳು ಒಂದಾಗಿ ಈ ಎಲ್ಲಾ ಸೌಲಭ್ಯಗಳು ಕಾರ್ಮಿಕರಿಗೆ ನಿರಾಕರಿಸುತ್ತಿದ್ದಾರೆ. ಹೀಗಾಗಿ ಕಾರ್ಮಿಕ ಕಾನೂನುಗಳು ಕಟ್ಟು ನಿಟ್ಟಾಗಿ ಮೇಲ್ಕಂಡ ಸ್ಥಳಗಳಲ್ಲಿ ಕೆಲಸ ಮಾಡುತ್ತಿರೋ ಕಾರ್ಮಿಕರಿಗೆ ಜಾರೀ ಮಾಡಬೇಕು ಅನ್ನೋದು ಮತ್ತೊಂದು ಪ್ರಮುಖ ಬೇಡಿಕೆಯಾಗಿತ್ತು.

ಮಂಡಳಿಯ ಲಾಭ ಅಧಿಕಾರಿಗಳಿಗೆ ಮಾತ್ರ !

ಇಂತಹ ಹಮಾಲರು ಸೇರಿದಂತೆ ಅಸಂಘಟಿತ ಕಾರ್ಮಿಕರಿಗಾಗಿಯೇ ಸರ್ಕಾರ 'ಸಾಮಾಜಿಕ ಮಂಡಳಿ'ಯನ್ನು ರಚಿಸಿದೆ. ಆದ್ರೆ ಅದು ಅನುದಾನ ಮತ್ತು ಸಂಪನ್ಮೂಲ ಕೊರತೆಯಿಂದಾಗಿ ಯಾವದೇ ಕಾರ್ಯಕ್ರಮಗಳನ್ನು ಘೋಷಿಸಿಲ್ಲ. ಇನ್ನೂ ಅನುದಾನ ಸಿಕ್ಕ ಹಣದಲ್ಲಿ ಅಧಿಕಾರಿಗಳು ಕಾರು, ಬಂಗಲೇ ಅಂತಾ ದುಂದು ವೆಚ್ಚ ಮಾಡುತ್ತಿದ್ದಾರೆ. ಕಾರ್ಮಿಕರಿಗೆ ಮಾತ್ರ ಒಂದು ರೂಪಾಯಿ

ಪುಟ 15 ಕ್ಕೆ

ಎಡಪಕ್ಷಗಳು ಪ್ರತಿಪಾದಿಸುವ ಪರ್ಯಾಯ ನೀತಿಗಳು

ಸಿಪಿಐ(ಎಂ) ಸಿಪಿಐ, ಫಾರ್ವರ್ಡ್ ಬ್ಲಾಕ್ ಮತ್ತು ಆರ್‌ಎಸ್‌ಪಿ ಈ ನಾಲ್ಕು ಎಡಪಕ್ಷಗಳು ಜುಲೈ 1, 2013 ರಂದು ದೆಹಲಿಯಲ್ಲಿ ಸಂಘಟಿಸಿದ್ದ ರಾಜಕೀಯ ಸಮಾವೇಶದಲ್ಲಿ ಚರ್ಚಿಸಿ ಅಂಗೀಕರಿಸಲಾದ ಪ್ರಮುಖ ಅಂಶಗಳು ಇವು. ಈ ಪ್ರಮುಖ ಪ್ರಶ್ನೆಗಳ ಆಧಾರದ ಮೇಲೆ ರಾಷ್ಟ್ರವ್ಯಾಪಿ ಅಂದೋಲನವನ್ನು ತೀವ್ರಗೊಳಿಸಲು ಮತ್ತು ಎಡ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸಲು ಎಡಪಕ್ಷಗಳು ಪ್ರಯತ್ನಿಸಲಿವೆ.

ಸ್ವಾತಂತ್ರ್ಯ ಪಡೆದ 66 ವರ್ಷಗಳ ಬಳಿಕವೂ ಸಮೃದ್ಧ ಭಾರತವನ್ನು ಕಟ್ಟುವುದು ಮತ್ತು ಪ್ರತಿ ಪ್ರಜೆಗೆ ಸಮಾನ ಹಕ್ಕುಗಳನ್ನು ನೀಡುವ ಕನಸು ಕನಸಾಗಿಯೇ ಉಳಿದಿದೆ. ದೇಶದ ಬಂಡವಾಳಶಾಹಿ ಪ್ರಕಾರದ ಅಭಿವೃದ್ಧಿ, ಆರ್ಥಿಕ ನೀತಿಗಳು ದೇಶದ ಈಗಿನ ಸಂಕಷ್ಟಗಳಿಗೆ ಕಾರಣ. ಈ ನೀತಿಗಳು ಶ್ರೀಮಂತರಿಗೆ ಮತ್ತಷ್ಟು ಸಂಪತ್ತು ಹೆಚ್ಚುವಂತೆ ಮಾಡಿದ್ದು, ಬಡವರು ಮತ್ತಷ್ಟು ಬಡವರಾಗಿಯೇ ಹೋಗುವಂತೆ ಮಾಡಿದೆ.

ಕೇಂದ್ರ ಸರ್ಕಾರದ ಕಾಳಜಿ ಬೃಹತ್ ಕೈಗಾರಿಕೆಗಳು, ಉದ್ಯಮಿಗಳಿಗೆ ಮತ್ತು ಶ್ರೀಮಂತರ ಪರ ಹಿತಾಸಕ್ತಿಯನ್ನು ಕಾಯುವುದಾಗಿದೆ. ಇದರ ಪರಿಣಾಮವಾಗಿ ದೊಡ್ಡ ಜನಸಮೂಹ ಇನ್ನೂ ಬಡತನದ ಬವಣೆಯಿಂದ ಬಿಡುಗಡೆಯಾಗಿಲ್ಲ. ಹಸಿವು, ರೋಗದ ಕಪಿಮುಷ್ಟಿಗೆ ಸಿಲುಕಿರುವ ಬಡ ಕುಟುಂಬಗಳಿಗೆ ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯ ಸೌಲಭ್ಯಗಳು ಇನ್ನೂ ಮರೀಚಿಕೆಯಾಗಿವೆ.

ಜಗತ್ತಿನ ಒಟ್ಟು ಬಡವರ ಸಂಖ್ಯೆಯಲ್ಲಿ ಮೂರನೇ ಒಂದರಷ್ಟು ಮಂದಿ ಭಾರತದಲ್ಲಿ ಇದ್ದಾರೆ. ದಲಿತರು, ಆದಿವಾಸಿಗಳು, ಮಹಿಳೆಯರು ಮತ್ತು ಅಲ್ಪಸಂಖ್ಯಾತರು ಇನ್ನೂ ಸಾಮಾಜಿಕ ದೌರ್ಜನ್ಯಕ್ಕೆ ಬಲಿಯಾಗುತ್ತಲೇ ಇದ್ದಾರೆ. ಅವರ ಸಾಮಾಜಿಕ, ಆರ್ಥಿಕ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತಿದೆ.

ದೇಶದ ರಾಜಕೀಯವನ್ನು ಹಣಬಲವೇ ನಿಯಂತ್ರಿಸುತ್ತಿದೆ. ಮತೀಯವಾದ ಮತ್ತು ವಿಭಜಕ ಶಕ್ತಿಗಳಿಗೆ ಮುಕ್ತ ವಾತಾವರಣವಿದೆ. ಯುವಜನರ ಕೈಗಳಿಗೆ ಉದ್ಯೋಗವಿಲ್ಲದೆ ಅವರು ಕಮರಿದ ಭವಿಷ್ಯದತ್ತ ಸಾಗುತ್ತಿದ್ದಾರೆ. ಒಂದು ಸ್ವತಂತ್ರ ವಿದೇಶಾಂಗ ನೀತಿ ಮತ್ತು ದೇಶದ ಸಾರ್ವಭೌಮತ್ವವನ್ನು ರಕ್ಷಿಸುವ ಕಾರ್ಯದಲ್ಲಿ ರಾಜಿ ಮಾಡಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಎಡಪಕ್ಷಗಳು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸ್ಥರಗಳಲ್ಲಿ ಸಮಗ್ರ ಪರ್ಯಾಯ ನೀತಿಗಳನ್ನು ರೂಪಿಸಿವೆ. ಅದರ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

1. ಭೂಸುಧಾರಣಾ ಕ್ರಮಗಳನ್ನು ಜಾರಿಗೊಳಿಸುವುದು. ಹೆಚ್ಚುವರಿ ಭೂಮಿಯನ್ನು ಭೂರಹಿತರಿಗೆ ಹಂಚುವುದು ಮತ್ತು ಪ್ರತಿ ಭೂರಹಿತರಿಗೆ ಸ್ವಂತ ಸೂರು ಇರುವಂತೆ ನೋಡಿಕೊಳ್ಳುವುದು. ಬಲವಂತದ ಭೂಸ್ವಾಧೀನಕ್ಕೆ ಅಂತ್ಯ ಹಾಡುವುದು. ಸ್ವಾಮಿನಾಥನ್ ಆಯೋಗದ ಪ್ರಕಾರ ಬಡ ರೈತರಿಗೆ ಕಡಿಮೆ ದರದಲ್ಲಿ ಸಾಲ ಸೌಲಭ್ಯವನ್ನು ಒದಗಿಸುವುದು

2. ಮೂಲಸೌಕರ್ಯ ಕ್ಷೇತ್ರಕ್ಕೆ ಸಾರ್ವಜನಿಕ ಕ್ಷೇತ್ರದಿಂದ ಬಂಡವಾಳ ಹೂಡುವುದು ಮತ್ತು ಉತ್ಪಾದನಾ ವಲಯ ಮತ್ತು ಇತರ ಕೈಗಾರಿಕೆಗಳನ್ನು ರೂಪಿಸಿ ಹೆಚ್ಚೆಚ್ಚು ಉದ್ಯೋಗಾವಕಾಶ ಸೃಷ್ಟಿಸುವುದು. ಜೊತೆಗೆ ಗಣಿಗಾರಿಕೆ ಮತ್ತು ತೈಲ ಸಂಪನ್ಮೂಲವನ್ನು ರಾಷ್ಟ್ರೀಕರಣಗೊಳಿಸುವುದು

3. ತೆರಿಗೆ ಸೋರಿಕೆ ತಡೆಯುವುದು, ನ್ಯಾಯಯುತ ತೆರಿಗೆ ಸಂಗ್ರಹವಾಗುವಂತೆ ನೋಡಿಕೊಳ್ಳುವುದು, ದೇಶದೊಳಗೆ ಜೂಜುಕೋರ ಹಣಕಾಸಿನ ಹರಿದಾಟವನ್ನು ನಿಯಂತ್ರಿಸುವುದು, ಹಣಕಾಸು ವಲಯವನ್ನು ಮುಕ್ತಗೊಳಿಸುವುದನ್ನು ತಡೆಯುವುದು, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಯನ್ನು ಸ್ಥಗಿತಗೊಳಿಸುವುದು

4. ಸಾರ್ವತ್ರಿಕ ವಿತರಣ ವ್ಯವಸ್ಥೆಯನ್ನು ಜಾರಿಗೆ ತರುವುದು. ದೇಶದ ಎಲ್ಲ ಕುಟುಂಗಳಿಗೆ ಒಂದು ಕೆ.ಜಿ.ಗೆ ಎರಡು ರೂಪಾಯಿ ದರಕ್ಕೆ 35 ಕೆ.ಜಿ. ಆಹಾರಧಾನ್ಯವನ್ನು ನೀಡುವುದು. ಆಹಾರ ಭದ್ರತಾ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳ್ಳುವಂತೆ ನೋಡಿಕೊಳ್ಳುವುದು

5. ಸಂವಿಧಾನದ ಜಾತ್ಯತೀತ ಆಶಯಗಳಿಗೆ ತಕ್ಕಂತೆ ಪ್ರಭುತ್ವ ಮತ್ತು ಧರ್ಮವನ್ನು ಪ್ರತ್ಯೇಕಿಸುವುದು. ಕೋಮುವಾದಿ ಶಕ್ತಿಗಳನ್ನು ಮಟ್ಟ ಹಾಕುವ ನಿಟ್ಟಿನಲ್ಲಿ ದಿಟ್ಟ ಹಾಗೂ ದೃಢ ನಿರ್ಧಾರಗಳನ್ನು ಕೈಗೊಳ್ಳುವುದು

6. ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಅನುದಾನವನ್ನು ನೀಡುವುದು. ಶಿಕ್ಷಣ ಮತ್ತು ಆಹಾರ ಸೇವೆಗಳನ್ನು ಖಾಸಗೀಕರಣಗೊಳಿಸುವುದಕ್ಕೆ ತಡೆ. ಕಡ್ಡಾಯ ಶಿಕ್ಷಣದ ಹಕ್ಕನ್ನು ಜಾರಿಗೊಳಿಸುವುದು.

7. ಎಲ್ಲ ಹಂತಗಳಲ್ಲಿ ಭ್ರಷ್ಟಾಚಾರವನ್ನು ತಡೆಯಲು ಕಠಿಣ ಕ್ರಮಗಳನ್ನು ಕೈಗೊಳ್ಳುವುದು. ಸ್ವತಂತ್ರ ತನಿಖೆಯ ಅಧಿಕಾರ ಹೊಂದಿರುವ ಲೋಕಾಪಾಲ ಮಸೂದೆಯನ್ನು ಜಾರಿಗೊಳಿಸುವುದು, ಚುನಾವಣಾ ಪ್ರಕ್ರಿಯೆಗೆ ಗಂಭೀರ ಸುಧಾರಣೆಗಳನ್ನು ತರುವುದು.

8. ಎಲ್ಲ ಸ್ಥರಗಳಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡುವುದು. ಸಂಸತ್ತು ಮತ್ತು ಚುನಾಯಿತ ಸಂಸ್ಥೆಗಳಲ್ಲಿ ಮೂರನೇ ಒಂದರಷ್ಟು ಸೀಟುಗಳನ್ನು ಮಹಿಳೆಯರಿಗೆ ಮೀಸಲಿಡುವುದು, ದಲಿತರ ಹಕ್ಕುಗಳನ್ನು ರಕ್ಷಿಸುವುದು ಮತ್ತು ಖಾಸಗಿ ವಲಯದಲ್ಲೂ ಪರಿಶಿಷ್ಟ ಜಾತಿ, ಪಂಗಡಕ್ಕೆ ಮೀಸಲಾತಿ ನೀಡುವುದು. ಅಲ್ಪಸಂಖ್ಯಾತರ ಮೀಸಲಾತಿ ಕುರಿತ ರಂಗನಾಥ ಮಿಶ್ರಾ ಆಯೋಗದ ವರದಿಯನ್ನು ಜಾರಿಗೊಳಿಸುವುದು, ಆದಿವಾಸಿಗಳ ಹಕ್ಕುಗಳನ್ನು ರಕ್ಷಿಸುವುದು

9. ಕಾರ್ಮಿಕ ವರ್ಗದ ಹಕ್ಕುಗಳನ್ನು ರಕ್ಷಿಸುವುದು. ಕನಿಷ್ಟ ಕೂಲಿಯನ್ನು ಜಾರಿಗೊಳಿಸುವುದು ಮತ್ತು ಸಾಮಾಜಿಕ ಭದ್ರತಾ ಕ್ರಮಗಳನ್ನು ಜಾರಿಗೊಳಿಸುವುದು. ಗುತ್ತಿಗೆ ಆಧಾರಿತ ಹಾಗೂ ತಾತ್ಕಾಲಿಕ ಕೂಲಿಯನ್ನು ಅಂತ್ಯಗೊಳಿಸುವುದು

10. ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವುದು.

ಈ ಎಲ್ಲ ಅಂಶಗಳನ್ನು ಹೊಂದಿರುವ ನೀತಿಗಳನ್ನು ರೂಪಿಸುವ ರಾಜಕೀಯ ವೇದಿಕೆಗೆ ಬೆಂಬಲ ನೀಡಬೇಕೆಂದು ಎಡಪಕ್ಷಗಳು ದೇಶದ ಎಲ್ಲ ಪ್ರಜಾಸತ್ತಾತ್ಮಕ ಪಕ್ಷಗಳು, ಸಾಮೂಹಿಕ ಸಂಘಟನೆಗಳಿಗೆ ಮನವಿ ಮಾಡಿವೆ. ಈ ಬಗ್ಗೆ ದೇಶವ್ಯಾಪಿ ರಾಜಕೀಯ ಜನಾಂದೋಲನವನ್ನು ಎಡಪಕ್ಷಗಳು ರೂಪಿಸಲಿವೆ. ಈ ಮೂಲಕ ಪರ್ಯಾಯ ರಾಜಕೀಯ ಶಕ್ತಿಯನ್ನು ರೂಪಿಸಲು ಮುಂದಿನ ಹೆಜ್ಜೆ ಇಡಲಿವೆ.

– ಸಿಮ್ಮಿಸಿ

ದಲಿತರ ಏಳಿಗೆಗೆ ರಾಜ್ಯ ಬಜೆಟ್‌ನಲ್ಲಿ ಹೆಚ್ಚಿನ ಹಣ ನೀಡಲು ಆಗ್ರಹಿಸಿ ಮಡೆ-ಎಡೆ ಸ್ನಾನ, ಉಡುಪಿಕೃಷ್ಣ ಮಠದಲ್ಲಿ ಪಂಕ್ತಿ ಭೇದ ವಿರೋಧಿಸಿ ರಾಜ್ಯವ್ಯಾಪ್ತಿ ಪ್ರತಿಭಟನೆಗಳು



ಮಂಗಳೂರಿನಲ್ಲಿ ಪ್ರತಿಭಟನೆ



ಮಳವಳ್ಳಿಯಲ್ಲಿ ಪ್ರತಿಭಟನೆ



ಮಂಡ್ಯ : ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ

ದಲಿತರ ಏಳಿಗೆಗೆ ರಾಜ್ಯ ಬಜೆಟ್‌ನಲ್ಲಿ ಹೆಚ್ಚಿನ ಹಣ ನೀಡಬೇಕೆಂದು ಮಡೆ-ಎಡೆ ಸ್ನಾನ,

ಉಡುಪಿಕೃಷ್ಣ ಮಠದಲ್ಲಿ ಪಂಕ್ತಿ ಭೇದ ವಿರೋಧಿಸಿ ರಾಜ್ಯದೆಲ್ಲೆಡೆ ಪ್ರತಿಭಟನೆ

ದಲಿತರ ಏಳಿಗೆಗೆ ರಾಜ್ಯ ಬಜೆಟ್‌ನಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಹಣ ನೀಡಬೇಕೆಂದು ಪಂಕ್ತಿಭೇಧ, ಮಡೆಸ್ನಾನ ಜಾತಿತಾರತಮ್ಯ ರದ್ದುಗೊಳಿಸಲು, ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಒತ್ತಾಯಿಸಿ ಜುಲೈ 9ರಂದು ರಾಜ್ಯದ ಅನೇಕ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಸಿಪಿಐ(ಎಂ) ದಲಿತ ಹಕ್ಕುಗಳ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ಈಗಾಗಲೇ ಜಾತಿತಾರತಮ್ಯ, ಮೂಡನಂಬಿಕೆಗಳ ವಿರುದ್ಧ ಹತ್ತು ಹಲವು ಹೋರಾಟಗಳು ನಡೆದು ಬೆತ್ತಲೆ ಸೇವೆ, ದೇವದಾಸಿಯಂತಹ ಅನಿಷ್ಠ ಪದ್ಧತಿಗಳನ್ನು ಹಿಂದಿನ ಸರ್ಕಾರಗಳು ರದ್ದುಗೊಳಿಸಿವೆ. ಅದೇ ರೀತಿಯಲ್ಲಿ ಮಡೆ ಸ್ನಾನ ಮತ್ತು ಪಂಕ್ತಿಭೇಧ ಆಚರಣೆಗಳನ್ನು ರದ್ದುಗೊಳಿಸಬೇಕು ಎಂದೂ ಆಗ್ರಹಿಸಲಾಯಿತು.

ದಲಿತರ ಜನ ಸಂಖ್ಯೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಮೀಸಲಿಡಿ :

ರಾಜದ್ಯ ಒಟ್ಟು ಜನ ಸಂಖ್ಯೆಯಲ್ಲಿ ದಲಿತರು 23.65 ರಷ್ಟಿದ್ದಾರೆ. ಮುಖ್ಯ ಮಂತ್ರಿಯವರು ಮಂಡಿಸಲಿರುವ ಯೋಜನಾ ಬಜೆಟ್‌ನಲ್ಲಿ ದಲಿತರ ಜನಸಂಖ್ಯೆ (ಶೇ. 23.65) ಗೆ ಅನುಗುಣವಾಗಿ 11,115 ಕೋಟಿ ರೂ. ಹಣವನ್ನು "ವಿಶೇಷ ಘಟಕ ಯೋಜನೆ"ಯಡಿ ಪ್ರತ್ಯೇಕವಾಗಿ ಮೀಸಲಿಡಬೇಕು. ಅಂದ-ರೆ ಉದ್ಯೋಗ ಶಿಕ್ಷಣ ಒದಗಿಸಲು ಲಿಂಗ ಬೇಧ ತಾರತಮ್ಯ ನಿವಾರಿಸಲು, ದಲಿತರ ಸರ್ವಾಂಗೀಣ ಏಳ್ಗೆಗಾಗಿ ಮಾತ್ರ ಈ ಹಣವನ್ನು ವಿನಿಯೋಗಿಸಬೇಕು. ನಮ್ಮ ರಾಜ್ಯದಲ್ಲಿನ ಮಾನವ ಅಭಿವೃದ್ಧಿ ಸೂಚ್ಯಂಕ 2005 ರಲ್ಲಿದಂತೆ ದಲಿತೇತರರ ಮಾನವ ಅಭಿವೃದ್ಧಿಯಲ್ಲಿ 0.650 ಇದ್ದರೆ ದಲಿತರ ಮಾನವ ಅಭಿವೃದ್ಧಿ ಸೂಚ್ಯಂಕ 0.575 ರಷ್ಟು ಕೆಳಗೆ ಇದೆ. ಹೀಗಾಗಿ ದಲಿತರ ಮಾನವ ಅಭಿವೃದ್ಧಿ ಹೆಚ್ಚಳಕ್ಕಾಗಿ ಈ ಹಣವನ್ನು ತೊಡಗಿಸಬೇಕು. ಉಪ ಯೋಜನೆಯಲ್ಲಿ 11.115 ಕೋಟಿ ರೂಗಳನ್ನು ನೀಡಬೇಕು,

ದಲಿತರ ವಿಶೇಷ ಘಟಕಯೋಜನೆಯಲ್ಲಿ ಮೀಸಲಿರಿಸಿದಹಣವನ್ನುರಾಜಕೀಯಪಟ್ಟಭದ್ರ ಹಿತಾಸಕ್ತಿಗಳು,ಅಧಿಕಾರಿಗಳು ದಲಿತೇತರ ಬೇರೆ ಬೇರೆ ಕೆಲಸಗಳಿಗೆ ಬಳಸಿಕೊಂಡು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಹೀಗಾಗಿ ವಿಶೇಷ ಘಟಕ ಯೋಜನೆಯ ಜಾರಿಗಾಗಿ, ಆಂಧ್ರಪ್ರದೇಶದ ಮಾದರಿಯಂತೆ ರಾಜ್ಯದಲ್ಲಿ ವಿಶೇಷ ಕಾನೂನ್ನು ರಚಿಸಬೇಕು. ಈ ಯೋಜನೆ ಜಾರಿ ಮಾಡದವರನ್ನು ಶಿಕ್ಷೆಗೆ ಒಳಪಡಿಸಬೇಕು. ಏಕಗವಾಕ್ಷಿ ಮೂಲಕ ಜಾರಿಗೊಳಿಸಬೇಕು.

ಹೊರಗುತ್ತಿಗೆ ನೇಮಕಾತಿಯಲ್ಲಿ ದಲಿತರಿಗೆ ವಂಚನೆ :

ನವ ಉದಾರೀಕರಣದ ನೀತಿಗಳನ್ನು ಜಾರಿಗೆ ತರುತ್ತಿರುವುದರಿಂದ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ 5 ಲಕ್ಷಕ್ಕೂ ಮೀರಿ ಗುತ್ತಿಗೆ ಆಧಾರದದಲ್ಲಿ ನೌಕರರು ನೇಮಕಗೊಂಡಿದ್ದಾರೆ. ಈ ನೇಮಕಾತಿಯಲ್ಲಿ 1ಲಕ್ಷ ಹುದ್ದೆಗಳನ್ನು ದಲಿತರಿಗೆ ಮೀಸಲಿಡದೆ ವಂಚಿಸಿದ್ದಾರೆ. ಹೊರಗುತ್ತಿಗೆ ನೇಮಕಾತಿಯಲ್ಲೂ ಮೀಸಲಾತಿ ಜಾರಿಗೊಳಿಸಬೇಕು.

ಖಾಸಗಿ ರಂಗದಲ್ಲಿ ಮೀಸಲಾತಿ ಒದಗಿಸಿ: ಖಾಸಗಿ ರಂಗದಲ್ಲಂತೂ ಬಹುತೇಕ ಗುತ್ತಿಗೆಯಲ್ಲಿಯೇ ದುಡಿಸಿಕೊಳ್ಳಲಾಗುತ್ತದೆ. ಇನ್ನೊಂದೆಡೆ ಸಂಪೂರ್ಣವಾಗಿ ಖಾಸಗೀಕರಣ ಮಾಡುತ್ತಿರುವುದರಿಂದ ಸಾರ್ವಜನಿಕ ಮತ್ತು ಸೇವಾ ವಲಯಗಳಲ್ಲಿ ಸರ್ಕಾರದ ಹುದ್ದೆಗಳು ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ದಲಿತರಿಗೆ ಉದ್ಯೋಗದ ಅವಕಾಶಗಳು ಮರಿಚೀಕೆಯಾಗಿವೆ. ಹೀಗಾಗಿ ಸೇವಾವಲಯಗಳಾದ ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಸಾರಿಗೆ ಮುಂತಾದ ಮೂಲ ಭೂತ ಸೌಲಭ್ಯಗಳನ್ನು ಸರ್ಕಾರ ಖಾಸಗಿಯವರಿಗೆ ನೀಡಬಾರದು. ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು. ಖಾಸಗಿ ರಂಗದಲ್ಲಿಯೂ ಮೀಸಲಾತಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ರಾಜ್ಯ ಸರ್ಕಾರ ತರುವಂತಾಗಬೇಕು. ಕೇಂದ್ರ ಸರ್ಕಾರ ಖಾಸಗಿರಂಗದಲ್ಲಿ ಮೀಸಲಾತಿಗಾಗಿ ಕೇಂದ್ರೀಯ ಶಾಸನವನ್ನು ಜಾರಿಗೆ ತರಬೇಕು.

ಸಾಮಾಜಿಕ ಅಸಮನತೆ, ಜಾತಿ ತಾರತಮ್ಯ ಇನ್ನು ಜೀವಂತ:

ಹಳ್ಳಿಗಳಲ್ಲಿ ಎರಡು ಲೋಟ ಪದ್ಧತಿ, ದೇವಸ್ಥಾನ ಪ್ರವೇಶ ನಿರಾಕರಣೆ, ಬಾರ್ಬರ್ ಅಂಗಡಿಗಳಲ್ಲಿ ನಿಷೇಧ, ಅಡುಗೆ ಸಮಾನುಗಳ ನಿರಾಕರಣೆ ಇತ್ಯಾದಿ ಜಾತಿ ತಾರತಮ್ಯಗಳು ಇಂದಿಗೂ ಜೀವಂತವಿದ್ದು ಭೂ ಹೀನ ದಲಿತರಿಗೆ ಹೆಣ ಹೂಳಲು ಜಾಗವಿಲ್ಲದ ದುಸ್ಥಿತಿ ಇದೆ. ನಗರ ಪ್ರದೇಶಗಳಲ್ಲಿ ಸುಳ್ಳು ಜಾತಿ ಹೇಳದೆ ಬಾಡಿಗೆ ಮನೆಯು ಸಿಗುವುದಿಲ್ಲ. ಅಂತರ ಜಾತಿ ವಿವಾಹ ಮಾಡಿಕೊಂಡಿದ್ದಕ್ಕಾಗಿ ಪಾಣವನ್ನೆ ಕಳೆದು ಕೊಂಡಿದ್ದಾರೆ. ಈ ಎಲ್ಲಾ ಕಾರಣಗಳಿಗಾಗಿ ಯೋಜನೆಯನ್ನು ರೂಪಿಸಿ ಸಮಗ್ರವಾಗಿ ಜಾರಿಗೊಳಿಸಬೇಕು. ಜಾತಿ ತಾರತಮ್ಯದ ವಿರುದ್ಧ ಹೋರಾಟ ತೀವ್ರಗೋಳಿಸಬೇಕು.

ದೇವಸ್ಥಾನಗಳಲ್ಲಿ ಮಡೆ ಮಡೆ ಸ್ನಾನ, ಪಂಕ್ತಿ ಬೇಧ ತಕ್ಷಣ ತಡೆಗಟ್ಟಿ : ಉಡುಪಿಯ ಪೇಜಾವರ ಶ್ರೀಗಳು ಒಂದೆಡೆ ದಲಿತರ ಕೇರಿಗಳಲ್ಲಿ ಪಾದಯಾತ್ರೆ ಮಾಡುತ್ತಾರೆ. ಇನ್ನೊಂದೆಡೆ ತಮ್ಮ ಕೃಷ್ಣ ಮಠದಲ್ಲೇ ಪಂಕ್ತಿ ಬೇಧವನ್ನಾಚರಿಸುತ್ತಾರೆ. ಹರಕೆ ಹೊತ್ತ ಭಕ್ತರಿಗೆಂದು ನೆಲ್ಲದಲ್ಲಿಯೇ ಊಟ ಹಾಕುವ ಅನಾಗರೀಕ ಮತ್ತು ಸಂವಿದಾನ ಅವೈಜ್ಞಾನಿಕ ಪದ್ಧತಿಯನ್ನು ಕೃಷ್ಣ ಮಠದಲ್ಲಿ ಆಚರಿಸಲಾಗುತ್ತಿದೆ. ಇದೇ ರೀತಿಯಲ್ಲಿ ರಾಜ್ಯ ಸರ್ಕಾರದ ಅಡಿಯಲ್ಲಿರುವ 168 ದೇವಸ್ಥಾನಗಳಲ್ಲಿ ಇಂತಹ ಅಮಾನವೀಯ ಪದ್ಧತಿಯನ್ನು ರಾಜಾದ್ಯಂತ ಆಚರಿಸಿಕೊಂಡು ಬರಲಾಗುತ್ತಿದೆ. ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ನಡೆಯುತ್ತಿರುವ ಮಡೆ ಮಡೆ



ಸ್ನಾನ ಎಂಬ ಅಮಾನುಷವಾದ ಬ್ರಾಹ್ಮಣರ ಎಂಜಲೆಯ ಮೇಲೆ ಉರುಳಾಡುವ ಅನಿಷ್ಠ ಪದ್ಧತಿಯನ್ನು ಆಚರಿಸಲಾಗುತ್ತಿದೆ. ಆದಿವಾಸಿ ಮಲೆಕುಡಿಯರನ್ನು ಬಳಸಿಕೊಂಡು ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದು ಅನಿಷ್ಠಗಳನ್ನು ಮುಂದುವರಿಸುವ ಹುನ್ನಾರ ನಡೆಸಲಾಗುತ್ತಿದೆ. ಈ ಎಲ್ಲಾ ಅನಿಷ್ಠ ಪದ್ಧತಿಗಳನ್ನು ನಿಲ್ಲಿಸಬೇಕು ಮುಂತಾದ ಬೇಡಿಕೆಗಳಿಗಾಗಿ ರಾಜ್ಯದಲ್ಲಿ ಚಿಕ್ಕಬಳ್ಳಾಪುರ, ಮಂಡ್ಯ, ದಕ್ಷಿಣಕನ್ನಡ, ರಾಯಚೂರು, ಬಳ್ಳಾರಿ, ಗುಲ್ಬರ್ಗ, ಗದಗ, ಬೆಳಗಾಂ, ಕೊಪ್ಪಳ, ಮೈಸೂರು, ಕೋಲಾರ, ಉಡುಪಿ, ಹುಬ್ಬಳ್ಳಿ ,ತುಮಕೂರು, ಶಿವಮೊಗ್ಗ ಬೆಂಗಳೂರು ಸೇರಿದಂತೆ 16 ಜಿಲ್ಲೆಗಳಲ್ಲಿ 31 ತಾಲೂಕುಗಳಲ್ಲಿ ಜುಲೈ 9 ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿ ಸರ್ಕಾರ-ಕ್ಕೆ ಮನವಿ ಸಲ್ಲಿಸಲಾಗಿದೆ. ಈ ಮೇಲಿನ ಬೇಡಿಕೆಗಳಲ್ಲದೇ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಲಾಗಿದೆ.

1. ಪೌರ ಕಾರ್ಮಿಕರಿಗೆ ಜೀವನ ಅವಶ್ಯಕ ಕನಿಷ್ಠ ವೇತನ 12 ಸಾವಿರ ನಿಗದಿಪಡಿಸಬೇಕು, ಪೌರ ಕಾರ್ಮಿಕರನ್ನು ಮ್ಯಾನ್‌ಹೋಲ್‌ಗಳಲ್ಲಿ ಇಳಿಸುವುದು ಅಪರಾಧ, ಅದನ್ನು ನಿಲ್ಲಿಸಬೇಕು. ಅವರ ಜೀವನ ಸುಧಾರಣೆಗೆ ಕ್ರಮ ಜರುಗಿಸಬೇಕು.

2. ಉನ್ನತ ಹುದ್ದೆಗಳಲ್ಲಿ ಬಡ್ತಿ ಮತ್ತು ಮೀಸಲಾತಿಯಲ್ಲಿ ಆಗುತ್ತಿರುವ ಅನ್ಯಾಯ ತಪ್ಪಿಸಬೇಕು. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕು. ದಲಿತರಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಲು ಸಮಾಜ ಕಲ್ಯಾಣ ಇಲಾಖೆಯನ್ನು ಇನ್ನಷ್ಟು ಬಲಪಡಿಸಬೇಕು.

3. ಖಾಸಗಿಕ್ಷೇತ್ರಕ್ಕೂಮೀಸಲಾತಿಯನ್ನು ವಿಸ್ತರಣೆ ಮಾಡಲು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು.

4. ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮಂಡಳಿಯಲ್ಲಿ ದಲಿತ ಅಧಿಕಾರಿಗಳಿಗೆ ಹಾಗೂ ನೌಕರರಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಲು ಸಮಾಜ ಕಲ್ಯಾಣ ಇಲಾಖೆಯ ವರದಿಯನ್ನು ಜಾರಿಮಾಡಬೇಕು.

5. ಮನೆಯಿಲ್ಲದವರಿಗೆ ಮಹಾನಗರ ಪಾಲಿಕೆ ರೂ.4 ಲಕ್ಷ, ನಗರ ಪ್ರದೇಶದಲ್ಲಿ ರೂ.3.5 ಲಕ್ಷ, ಗ್ರಾಮಾಂತರದಲ್ಲಿ ರೂ.3 ಲಕ್ಷ ನಿವೇಶನ ನೀಡಿ ಮನೆ ಕಟ್ಟಿಸಿಕೊಡಬೇಕು.

6. ಭೂರಹಿತ ದಲಿತ ಕುಟುಂಬಕ್ಕೆ 2 ಎಕರೆ ಭೂಮಿ ನೀಡಬೇಕು.

7. ಎಸ್.ಸಿ./ಎಸ್.ಟಿ. ವಿದ್ಯಾರ್ಥಿ ವೇತನ ರೂ.2000ಕ್ಕೆ ಹೆಚ್ಚಿಸಬೇಕು. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಆಹಾರ ಭತ್ಯೆ ಹೆಚ್ಚಿಸಬೇಕು. ಇತರೆ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು.

8. ದಲಿತರ ಮೇಲೆ ಹೆಚ್ಚುತ್ತಿರುವ ಜಾತಿ ದೌರ್ಜನ್ಯ ದಾಳಿ ದಬ್ಬಾಳಿಕೆ ತಡೆಗಟ್ಟಲು ಸರ್ಕಾರ ಕಟ್ಟುನಿಟ್ಟಾಗಿ ಕ್ರಮ ಜರುಗಿಸಬೇಕು.

9. ಉದಾರೀಕರಣ ನೀತಿ ಜಾರಿಯಿಂದಾಗಿ ದಲಿತರು ಮೀಸಲಾತಿಯಿಂದ ವಂಚಿತರಾಗಿದ್ದಾರೆ.ಹೊರಗುತ್ತಿಗೆವ್ಯವಸ್ಥೆಯಲ್ಲಿ ಕೂಡ ಎಸ್.ಸಿ./ಎಸ್.ಟಿ.ಯವರಿಗೆ ಮೀಸಲಾತಿ ಅನ್ವಯಿಸಬೇಕು.

10. ದೇವದಾಸಿ ಮಹಿಳೆಗೆ ಪರಿಹಾರದ ಪ್ಯಾಕೇಜ್ 25 ಸಾವಿರದ ಬದಲು 1ಲಕ್ಷಕ್ಕೆ ಹೆಚ್ಚಿಸಬೇಕು. 2ಲಕ್ಷರೂ. ವೆಚ್ಚದಲ್ಲಿ ಮನೆ ಕಟ್ಟಿಸಿ ಕೊಡಬೇಕು. ರೂ. 1500 ಮಾಸಾಶನ ನೀಡಬೇಕು. ದೇವದಾಸಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಬಳ ಹೆಚ್ಚಿಸಬೇಕು. ದೇವದಾಸಿ ಮಕ್ಕಳ ಅಭಿವೃದ್ಧಿಗೆ, ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಕ್ರಮ ಜರುಗಿಸಬೇಕು. 2ಎಕರೆ ಭೂಮಿ ಉಚಿತವಾಗಿ ನೀಡಬೇಕು. ದೇವದಾಸಿ ಮಹಿಳೆಯರು ದಲಿತರಾದ್ದರಿಂದ ಅವರ ಅಭಿವೃದ್ಧಿ ಕೆಲಸಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ವಹಿಸಬೇಕು.

11. ದಲಿತರ ಹೆಣ ಹೂಳಲು ಸ್ಮಶಾನಕ್ಕಾಗಿ ಜಾಗ ಗುರುತಿಸಿ ಸರ್ಕಾರವೇ ಖರೀದಿಸಿಕೊಡಬೇಕು.

ವರದಿ: ಗೋಪಾಲಕೃಷ್ಣ ಅರಳಹಳ್ಳಿ

ಅಪರಾಧಿ ಶಾಸಕ-ಸಂಸದರನ್ನು ಅನರ್ಹಗೊಳಿಸುವ ಆಶಯ ಅಭಿನಂದನಾರ್ಹ

ಪ್ರಜಾಸತ್ತಾತ್ಮಕ ಹಕ್ಕಗಳನ್ನು ಅತಿಕ್ರಮಿಸುವ ಸುಪ್ರಿಂ ಕೋರ್ಟ್ ತೀರ್ಪು ಸಂವಿಧಾನಕ್ಕೆ ವ್ಯತಿರಿಕ್ತ

ಸುಪ್ರಿಂ ಕೋರ್ಟ್‌ನ ದ್ವಿಸದಸ್ಯ ನ್ಯಾಯಪೀಠವು ಜೈಲಿನಲ್ಲಿರುವ ವ್ಯಕ್ತಿ ಅಥವಾ ಪೋಲಿಸ್ ಕಸ್ಟಡಿಯಲ್ಲಿರುವ ವ್ಯಕ್ತಿಗಳು ಶಾಸನ ಸಭೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುವಂತಿಲ್ಲ ಎಂಬ ತೀರ್ಪು ನೀಡಿದೆ. ಇದು ನಾಗರೀಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ತೀವ್ರವಾಗಿ ಅತಿಕ್ರಮಿಸುವ ಒಂದು ತೀರ್ಪಾಗಿದೆ. ಈ ತೀರ್ಪಿನಿಂದ ಅಪರಾಧ ಸಿದ್ಧವಾಗಿಲ್ಲದ-ಯಾವುದೇ ಅಪರಾಧಕ್ಕಾಗಿ ಶಿಕ್ಷೆಗೊಳಗಾಗಿಲ್ಲದ-ಪೋಲೀಸ್ ಕಸ್ಟಡಿಯಲ್ಲಿರುವ ಒಬ್ಬ ವಿಚಾರಣಾಧೀನ ವ್ಯಕ್ತಿ ವಿಚಾರಣೆಯೇ ಇಲ್ಲದೇ, ಶಿಕ್ಷೆಯೂ ಇಲ್ಲದೇ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕಿನಿಂದ ವಂಚಿಸಲ್ಪಡುತ್ತಾನೆ ಅಥವಾ ವಂಚಿಸಲ್ಪಡುತ್ತಾಳೆ.

ರಾಜಕೀಯ ಕಾರ್ಯಕರ್ತರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ಮೊಕದ್ದಮೆ ಹೂಡಲಾದ ಎಷ್ಟೋ ಪ್ರಕರಣಗಳಿವೆ. ನಮ್ಮ ಪೂರ್ವಾಗ್ರಹಪೀಡಿತ ಮತ್ತು ಅದಕ್ಷ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆಯ ಕಾರಣದಿಂದಾಗಿ ಲಕ್ಷಾಂತರ ವಿಚಾರಣಾಧೀನ ಖೈದಿಗಳು ಅನ್ಯಾಯಯುತ ರೀತಿಯಲ್ಲಿ ತಮ್ಮ ಮೂಲಭೂತ ಸ್ವಾತಂತ್ರ್ಯವನ್ನು ಕಳೆದುಕೊಂಡು ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಈ ತೀರ್ಪು ಭಾರಿ ಪ್ರಮಾಣದ ದುರುಪಯೋಗಕ್ಕೆ ಅವಕಾಶ ನೀಡುವ ಅಪಾಯವಿದೆ. ಅಧಿಕಾರಸ್ಥ ಪಕ್ಷಗಳು ಮತ್ತು ಅಧಿಕಾರಸ್ಥ ಸರ್ಕಾರಗಳು, ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ತಪ್ಪಿಸುವ ಉದ್ದೇಶದಿಂದಲೇ ವ್ಯಕ್ತಿಗಳನ್ನು ಜೈಲಿಗಟ್ಟಲು ಸಾಧ್ಯವಿದೆ. ಇದೊಂದು ನ್ಯಾಯಾಂಗವು ತನ್ನ ಹದ್ದು ಮೀರಿದ ತೀರ್ಪಾಗಿದ್ದು ಇದನ್ನು ರದ್ದುಗೊಳಿಸಬೇಕಾದ ಅಗತ್ಯವಿದೆ.(The judgment is a case of judicial overreach and requires to be overturned.)


ಸುಪ್ರಿಂ ಕೋರ್ಟ್‌ನ ಇದೇ ಪೀಠದ ಈ ಮುಂಚಿನ ತೀರ್ಪು ಯಾವುದೇ ಒಬ್ಬ ಸಂಸದರು ಅಥವಾ ಶಾಸಕರು ತಮ್ಮ ಸ್ಥಾನದಿಂದ ಅನರ್ಹರಾಗುವಂತಹ ಯಾವುದೇ ಅಪರಾಧ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದರೆ ತತ್‌ಕ್ಷಣದಿಂದಲೇ ಅವರ ಶಾಸನ ಸಭೆಯ ಸದಸ್ಯತ್ವ ಕಳೆದುಕೊಂಡು ಅನರ್ಹರಾಗುತ್ತಾರೆಂದು ತೀರ್ಪು ನೀಡಿದೆ. ಶಿಕ್ಷೆಗೆ ಗುರಿಯಾದ ಸದಸ್ಯರು ತೀರ್ಪಿನ ವಿರುದ್ಧ ಮೇಲಿನ ಹಂತದ ಕೋರ್ಟ್‌ಗಳಲ್ಲಿ ಮನವಿ ಸಲ್ಲಿಸುವ ಸಲುವಾಗಿ ಅಥವಾ ಶಿಕ್ಷೆಯ ಜಾರಿಗೆ ತಡೆಯಾಜ್ಞೆ ಪಡೆದುಕೊಳ್ಳುವ ಸಲುವಾಗಿ ಮೂರು ತಿಂಗಳ ಕಾಲ ಅವರ ಸದಸ್ಯತ್ವ ಮುಂದುವರಿಯುವ ಅವಕಾಶ ನೀಡುವ ಜನತಾ ಪ್ರಾತಿನಿಧಿಕ ಕಾಯ್ದೆ 8(4)ರ ಪರಿಚ್ಛೇಧವನ್ನು ಈ ತೀರ್ಪು ರದ್ದುಮಾಡಿದೆ.

ಗಂಭೀರ ಅಪರಾಧ ಪ್ರಕರಣಗಳಲ್ಲಿ ಅಥವಾ ಭ್ರಷ್ಟಾಚಾರದ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾದ ವ್ಯಕ್ತಿಗಳನ್ನು ಚುನಾಯಿತ ಸ್ಥಾನದಿಂದ ತೆಗೆಯುವ ಈ ತೀರ್ಪಿನ ಉದ್ದೇಶವು ಒಳ್ಳೆಯದು ಮತ್ತು ಅಭಿನಂದನಾರ್ಹವಾಗಿದೆ. ಆದರೆ ಪರಿಚ್ಛೇದ 8(4) ಅನ್ನು ರದ್ದುಪಡಿಸುವ ತೀರ್ಪು ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಮೀರಿದ ಸಂವಿಧಾನಕ್ಕೆ ವ್ಯತಿರಿಕ್ತವಾದ ಅಂಶವಾಗಿದೆ. ಅದು ಹಲವು ಸಮಸ್ಯೆಗಳನ್ನು ತಂದೊಡ್ಡಲಿದೆ. ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ವಿಚಾ[illegible] ನಡೆಸಿದ ನ್ಯಾಯಾಲಯದ ಶಿಕ್ಷೆಯ ತೀರ್ಪನ ಕುರಿತು ಮೇಲ್ಮನವಿ ಸಲ್ಲಿಸಿದಾಗ ಮೇಲಿನ ನ್ಯಾಯಾಲಯಗಳು ಶಿಕ್ಷೆಯನ್ನು ರದ್ದುಪಡಿಸಿರುವ ಉದಾಹರಣೆಗಳು ಹಲವಾರು ಇವೆ.

ಒಬ್ಬ ಸದಸ್ಯ ನ್ಯಾಯಾಲಯದ ತೀರ್ಪು ಬಂದ ಕೂಡಲೇ ತಾನು ಅನರ್ಹನಾಗಿಬಿಟ್ಟಿದ್ದರೆ, ನಂತರ ಆ ವ್ಯಕ್ತಿಯು ಮೇಲಿನ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ಅಲ್ಲಿ ಶಿಕ್ಷೆ ರದ್ದಾದರೆ ಆ ವ್ಯಕ್ತಿಯ ಸದಸ್ಯತ್ವ ಮುಂದುವರಿಕೆಗೆ ಅವಕಾಶವೇ ಇರುವುದಿಲ್ಲ. ತೀರ್ಪಿನಿಂದ ಮೇಲೆದ್ದು ಬಂದಿರುವ ಈ ಅಂಶದ ಕುರಿತು ಮತ್ತು ಇತರ ಅಂಶಗಳ ಕುರಿತು ಪರಿಶೀಲನೆ ನಡೆಸಬೇಕಾದ ಅವಶ್ಯಕತೆ ಇದೆ. ಆದ್ದರಿಂದ ಈ ತೀರ್ಪಿನ ಪರಾ[illegible] ಮತ್ತು ಸ್ಪಷ್ಟೀಕರಣಗಳು ಅಗತ್ಯವಾಗಿವೆ.

ಇದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವು ಇತ್ತೀಚಿನ ಈ ಸುಪ್ರಿಂ ಕೋರ್ಟ್ ತೀರ್ಪಿನ ಬಗೆಗೆ ನೀಡಿರುವ ಪ್ರತಿಕ್ರಿಯೆ.

ಶತಾಯುಷಿ ಸಂಗಾತಿ ಸಮರ್ ಮುಖರ್ಜಿ ಇನ್ನಿಲ್ಲ



ಪ.ಬಂಗಾಲದ ಶತಾಯುಷಿ ಕೆಂಪುತಾರೆಯೊಂದು ಇದೇ ಜುಲೈ 18 ರಂದು ಅಸ್ತಂಗತವಾಯಿತು. 1940 ರಲ್ಲಿಯೇ ಕಮ್ಯೂನಿಸ್ಟ್ ಚಳುವಳಿಗೆ ಸೇರಿ, ಪೂರ್ಣಕಾಲದ ಕಾರ್ಯಕರ್ತರಾಗಿ ದುಡಿದ ಕಾಂ ಸಮರ್ ದಾ (ಸಮರ್ ಮುಖರ್ಜಿ) ಇನ್ನಿಲ್ಲ. ತನ್ನ 100 ನೇ ವಯಸ್ಸಿನಲ್ಲಿ ಕಾಮ್ರೇಡ್ ಸಮರ್ ಮುಖರ್ಜಿ ಕೋಲ್ಕತ್ತಾದಲ್ಲಿ ಕೊನೆಯುಸಿರೆಳೆದರು.

ವಿದ್ಯಾರ್ಥಿ ದೆಸೆಯಲ್ಲಿಯೇ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಕಾಂ.ಸಮರ್ ಮಾರ್ಕ್ಸ್‌ವಾದೀ ತತ್ವದತ್ತ ಆಕರ್ಷಿತರಾದರು. 1940 ರಲ್ಲಿ ಪಕ್ಷದ ಸದಸ್ಯತ್ವ ಪಡೆದ ಕೂಡಲೇ ಪೂರ್ಣಕಾಲದ ಕಾರ್ಯಕರ್ತರಾಗಿ ಸೇರ್ಪಡೆಗೊಂಡ ಅವರು ಹೌರಾ ಜಿಲ್ಲೆಯ ಕಮ್ಯೂನಿಸ್ಟ ಪಕ್ಷದ ಸ್ಥಾಪಕ ಸದಸ್ಯರಲ್ಲೊಬ್ಬರಾದರು. 1942 ರಲ್ಲಿ ಅವರು ಹೌರಾ ಜಿಲ್ಲೆಯ ಅವಿಭಜಿತ ಕಮ್ಯೂನಿಸ್ಟ ಪಕ್ಷದ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು. 1953ರಲ್ಲಿ ಅವರು ಪ.ಬಂಗಾಲದ ರಾಜ್ಯ ಮಂಡಲಿಯ ಸದಸ್ಯರಾಗಿ ಆಯ್ಕೆಯಾದರು. ಬಂಗಾಲದಲ್ಲಿ ಕಮ್ಯೂನಿಸ್ಟ ಚಳುವಳಿಯ ಪ್ರಭಾವವನ್ನು ವಿಸ್ತರಿಸಲು ನೆರವಾದ ಅಂದಿನ ಪೂರ್ವ ಬಂಗಾಲದ ನಿರಾಶ್ರಿತರ ಹಕ್ಕುಗಳ ರಕ್ಷಣೆಯ ಹೋರಾಟ ಅವರ ನೇತೃತ್ವದಲ್ಲಿಯೇ ನಡೆದಿತ್ತು.

1957 ರಲ್ಲಿ ಉತ್ತರ ಹೌರಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಗೊಂಡ ಅವರು ಉತ್ತಮ ಸಂಸದೀಯ ಪಟುತ್ವವನ್ನು ಮೆರೆದಿದ್ದರು. 1964 ರಲ್ಲಿ ಸಿಪಿಐ(ಎಂ) ಸ್ಥಾಪನೆಯಾದಾಗ ಅವರು ಸಿಪಿಐ(ಎಂ) ಸದಸ್ಯರಾದರು. 1940 ರಲ್ಲೇ ಅವರು ತಮ್ಮ ಮನೆಯನ್ನು ತ್ಯಜಿಸಿ ಪಕ್ಷದ 'ಕಮ್ಯೂನ್'ನಲ್ಲಿ ವಾಸವಾಡತೊಡಗಿದರು. 1965 ರಿಂದ ಅವರು ಕೊನೆಯವರೆಗೂ ದಿಲ್‌ಖುಷಾ ಬೀದಿಯಲ್ಲಿರುವ ಪಕ್ಷದ ಕಮ್ಯೂನ್‌ನಲ್ಲಿ ಇದ್ದರು. 1971 ರಿಂದ ನಿರಂತರವಾಗಿ ಮೂರು ಬಾರಿ ಹೌರಾ ಕ್ಷೇತ್ರವನ್ನು ಪ್ರತಿನಿಧಿಸಿ ಅವರು ಲೋಕಸಭೆಗೆ ಆಯ್ಕೆಯಾಗಿದ್ದರು. ಎರಡು ಬಾರಿ ರಾಜ್ಯಸಭಾ ಸದಸ್ಯರಾಗಿ ಚುನಾಯಿತಗೊಂಡಿದ್ದರು. ಸಿಪಿಐ(ಎಂ) ಪಕ್ಷದ ಸಂಸದೀಯ ಮಂಡಲಿಯ ನಾಯಕರಾಗಿ ಅವರು ಸಂಸತ್ತಿನಲ್ಲಿ ದುಡಿಯುವ ವರ್ಗದ ಪ್ರಶ್ನೆಗಳನ್ನೆತ್ತಿಕೊಂಡು ಪಕ್ಷದ ಲೈನಿನಲ್ಲಿ ಚರ್ಚೆ ನಡೆಸುತ್ತಿದ್ದ ರೀತಿ ಮತ್ತು ವಾಕ್ಪೈಖರಿಯನ್ನು ಮೆಚ್ಚದವರಿರಲಿಲ್ಲ.

1983 ರಿಂದ 1991 ರ ವರೆಗೆ ಅವರು ಸಿಐಟಿಯುವಿನ ಪ್ರಧಾನ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದರು. 1966ರಿಂದ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರಾಗಿದ್ದ ಅವರು1978ರಲ್ಲಿ ಪೊಲಿಟ್ ಬ್ಯುರೋ ಸದಸ್ಯರಾಗಿ ಆಯ್ಕೆಯಾದರು. 1992ರಲ್ಲಿ ಪಕ್ಷದ 14 ನೇ ಮಹಾಧಿವೇಶನದಲ್ಲಿ ಪಕ್ಷದ ಸೆಂಟ್ರಲ್ ಕಂಟ್ರೋಲ್ ಕಮಿಷನ್‌ನ ಚೇರಮನ್ ಆಗಿ ಆಯ್ಕೆಯಾಗುವವರೆಗೂ ಅವರು ಆ ಸ್ಥಾನದಲ್ಲಿ ಮುಂದುವರೆದಿದ್ದರು.

1974 ರ ಚಾರಿತ್ರಿಕ ರೈಲ್ವೇ ನೌಕರರ ಮುಷ್ಕರ ಮತ್ತು ನಂತರದ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ದುಡಿಯುವ ವರ್ಗದ ಮೇಲಿನ ಧಾಳಿಗಳ ವಿರುದ್ಧದ ಹೋರಾ[illegible] ಸಮರ್ ದಾ ಪ್ರಧಾನ ಪಾತ್ರ ವಹಿಸಿದ್ದರು.

ಸರಳ ಸಜ್ಜನಿಕೆಯ ಮೃದು ಹೃದಯದ,ಪಕ್ಷದಬಗ್ಗೆ ಅಪಾರನಿಷ್ಠೆಅಭಿಮಾನ ಹೊಂದಿದ್ದ ಪಕ್ಷದ ಎಲ್ಲ ಗುಣಧರ್ಮಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡು ಪಾಲಿಸುತ್ತಿದ್ದ ಎಲ್ಲರ ಪ್ರೀತಿ ಪಾತ್ರರಾಗಿದ್ದ ಸದಾ ಅನುಕರಣೀಯರಾದ ಕಾಂ.ಸಮರ್ ಮುಖರ್ಜಿಯವರಿಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದೆ. ಸಮರ್ ದಾ ಲಾಲ್ ಸಲಾಂ.ಲಾಲ್ ಸಲಾಂ

ಜುಲೈ 18 ರಂದು ಸಿಪಿಐ(ಎಂ) ಮತ್ತು ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಗಳು ಜಂಟಿಯಾಗಿ ಕಾಂ.ಸೂರಿ ಭವನದಲ್ಲಿ ಸಭೆ ನಡೆಸಿ ಕಾಂ. ಸಮರ್ ಮುಖರ್ಜಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿವೆ ಮತ್ತು ಎರಡೂ ಕಚೇರಿಗಳಲ್ಲಿ ಬಾವುಟ[illegible] ಅರ್ಧಮಟ್ಟಕ್ಕೆ ಇಳಿಸಲಾಗಿತ್ತು.

ಜನಶಕ್ತಿ
ಕನ್ನಡ ವಾರಪತ್ರಿಕೆ

ದೇಶದ ಆರ್ಥಿಕವನ್ನು ವಿದೇಶಿ ಬಂಡವಾಳಕ್ಕೆ ಒತ್ತೆ ಇಡುವ ಯುಪಿಎ-2 ಸರಕಾರದ ಎಫ್‌ಡಿಐ ಗೀಳು

ಯುಪಿಎ-2 ಸರಕಾರದ ಎಫ್‌ಡಿಐ ಗೀಳು ಮತ್ತೆ ಪ್ರಕಟಗೊಂಡಿದೆ. ಹದಗೆಡುತ್ತಿರುವ ರೂಪಾಯಿ ಮೌಲ್ಯದ ಇಳಿಕೆ ಮತ್ತು 'ಚಾಲ್ತಿ ಖಾತೆ ಕೊರತೆ'ಯನ್ನು ಸಂಭಾಳಿಸಲು ಇನ್ನಷ್ಟು ವಿದೇಶಿ ಹೂಡಿಕೆಗಳನ್ನು ಆಕರ್ಷಿಸಬೇಕಾಗಿದೆ ಎಂಬ ನೆಪದಲ್ಲಿ ಅದು ಈ ಗೀಳನ್ನು ತೀರಿಸಿಕೊಳ್ಳಲು ಹೊರಟಿದೆ. ಜುಲೈ 16ರಂದು ಪ್ರಧಾನ ಮಂತ್ರಿಗಳು ಕರೆದ ಒಂದು ಸಭೆಯಲ್ಲಿ ಹಲವು ಪ್ರಮುಖ ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಗಳನ್ನು ಕುರಿತ ನಿಯಮಗಳನ್ನು ಮತ್ತಷ್ಟು ಸಡಿಲಗೊಳಿಸಲು ಸರಕಾರ ನಿರ್ಧರಿಸಿರುವುದಾಗಿ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ಪ್ರಕಟಿಸಿದ್ದಾರೆ. ಆದರೆ ಇದು ಪರಿಸ್ಥಿತಿಯನ್ನು ಸಂಭಾಳಿಸುವ ಬದಲು ದೇಶದ ಆರ್ಥಿಕವನ್ನು ವಿದೇಶಿ ಬಂಡವಾಳಕ್ಕೆ ಒತ್ತೆಯಿಡುವ ಕ್ರಮ ಎಂದು ಎಡ ಪಕ್ಷಗಳು, ಕಾರ್ಮಿಕ ಸಂಘಟನೆಗಳು ಬಲವಾಗಿ ಖಂಡಿಸಿವೆ.

ರಕ್ಷಣಾ ಉತ್ಪಾದನಾ ವಲಯದಲ್ಲಿ ಈಗ ಎಫ್‌ಡಿಐ ಮೇಲೆ 26ಶೇ. ಮಿತಿಯಿದೆ. ಇದಕ್ಕಿಂತ ಹೆಚ್ಚಿನ ಎಫ್‌ಡಿಐಗೆ ಇನ್ನುಮುಂದೆ 'ಭದ್ರತೆ ಕುರಿತ ಸಂಪುಟ ಸಮಿತಿ'ಯ ಮೂಲಕ ಅನುಮತಿ ಕೊಡಲು ಸರಕಾರ ನಿರ್ಧರಿಸಿದೆ. ಅಂದರೆ ಇನ್ನು ಮುಂದೆ ಈ ಸಂಪುಟ ಸಮಿತಿ ಬಯಸಿದರೆ ಯಾವುದೇ ಮಿತಿಯಿರುವುದಿಲ್ಲ.

ದೂರಸಂಪರ್ಕ ವಲಯದಲ್ಲಿ ಇನ್ನು ಮುಂದೆ ಎಫ್‌ಡಿಐ ಮಿತಿಯನ್ನು 49ಶೇ.ದ ವರೆಗೆ ಏರಿಸಲಾಗುವುದು, ಮತ್ತು 'ವಿದೇಶಿ ಹೂಡಿಕೆ ಉತ್ತೇಜನಾ ಮಂಡಳಿ'(ಎಫ್‌ಐಪಿಬಿ) ಮೂಲಕ 100ಶೇ.ದ ವರೆಗೂ ಅವಕಾಶ ಕಲ್ಪಿಸಬಹುದಂತೆ. ಅದೇ ರೀತಿ 'ಆಸ್ತಿ ಪುನರ್‌ರಚನೆ' ಎಂಬ ವ್ಯವಹಾರ ನಡೆಸುವ ಕಂಪನಿಗಳಲ್ಲೂ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಶುದ್ಧೀಕರಣ, ಸರಕು ವಿನಿಮಯ, ವಿ[illegible] ವಿನಿಮಯ, ಶೇರು ವಿನಿಮಯ ಹಾಗೂ ಡಿಪಾಸಿಟರಿಗಳಲ್ಲಿಯೂ ಎಫ್‌ಡಿಐ ಮಿತಿಯನ್ನು 49 ಶೇ.ಕ್ಕೆ ಏರಿಸಲಾಗಿದೆ.

ವಿಮಾ ವಲಯದಲ್ಲೂ ಈಗಿರುವ ಎಫ್‌ಡಿಐ ಮಿತಿಯನ್ನು 49ಶೇ.ಕ್ಕೆ ಏರಿಸಲು ನಿರ್ಧರಿಸಲಾಗಿದೆ. ಆದರೆ ಇದಕ್ಕೆ ಸಂಸತ್ತಿನ ಅನುಮತಿ ಅನಿವಾರ್ಯ. ಸಂಸತ್ತಿನ ಸ್ಥಾಯೀ ಸಮಿತಿ ಈಗಾಗಲೇ ಸರ್ವಸಮ್ಮತಿಯಿಂದ ಸರಕಾರದ ಈ ಏರಿಕೆಯ ಪ್ರಸ್ತಾಪವನ್ನು ತಿರಸ್ಕರಿಸಿದೆ ಎಂಬುದು ಗಮನಾರ್ಹ.

ಪ್ರಧಾನ ಮಂತ್ರಿಗಳು ಮತ್ತು ವಾಣಿಜ್ಯ ಮಂತ್ರಿಗಳಲ್ಲದೆ, ಯುಪಿಎ-2 ಸರಕಾರದ ರಕ್ಷಣಾ ಮಂತ್ರಿಗಳು, ಪೆಟ್ರೋಲಿಯಂ ಮಂತ್ರಿಗಳು ಮತ್ತು ವಿದ್ಯುತ್ ಮಂತ್ರಿಗಳೂ ಈ ಸಭೆಯಲ್ಲಿ ಹಾಜರಿದ್ದರು.

ಇದು ಸರಕಾರದ ದಿವಾಳಿಕೋರ ಧೋರಣೆಗಳ ಫಲ, ಈಗಾಗಲೇ ವೊ[illegible]ಫೋನ್ ತೆರಬೇಕಾಗಿದ್ದ ಅಪಾರ ತೆ[illegible] ಹಣವನ್ನು ಬಿಟ್ಟು ಕೊಟ್ಟಿರುವ ಸರಕಾರ ದೇಶದಿಂದ ಇನ್ನಷ್ಟು ಲಾಭಗಳು, ಸಂಪನ್ಮೂಲಗಳು ವಿದೇಶಗಳಿಗೆ ಹರಿದು ಹೋಗಲು ಅವಕಾಶ ಕಲಿಸುತ್ತಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

ಸಂಬಂಧಪಟ್ಟ ಉದ್ದಿಮೆಗಳು ಅಥವ ಸೇವೆಗಳ ಮೇಲೆ, ಒಟ್ಟು ಆರ್ಥಿಕದ ಮೇಲೆ ಮತ್ತು ರಾಷ್ಟ್ರೀಯ ಭದ್ರತೆಯ ಮೇಲೂ ಎಂತಹ ದುಷ್ಪರಿಣಾಮ ಬೀರಬಹುದು ಎಂಬ ಪರಿವೆಯೂ ಇಲ್ಲದ ಮತಿಹೀನ ಉದಾರೀಕರಣ ಇದು ಎಂದು ಸಿಐಟಿಯು ಖಂಡಿಸಿದೆ. ರೂಪಾಯಿ ಸತತವಾಗಿ ಮೌಲ್ಯ ಕಳೆದುಕೊಳ್ಳುವುದಕ್ಕೆ, ಚಾಲ್ತಿ ಖಾತೆ ಕೊರತೆ ವಿಪರೀತವಾಗಿ ಹೆಚ್ಚಿರುವುದಕ್ಕೆ ಮೂಲಕಾರಣವಾದ ನವ-ಉದಾರವಾದಿ ಧೋರಣೆಗಳ ವಿಮರ್ಶೆ ನಡೆಸುವ ದಾರಿಯನ್ನು ಹಿಡಿಯುವ ಬದಲು, ಈ ಸಮಸ್ಯೆಗಳನ್ನೇ ನೆವವಾಗಿಟ್ಟುಕೊಂಡು ದೇಶದ ಸಂಪತ್ತು, ಸಂಪನ್ಮೂಲಗಳು ವಿದೇಶಗಳಿಗೆ ಹರಿದು ಹೋಗಲು ಅನುಕೂಲ ಮಾಡಿ ಕೊಡುತ್ತಿದೆ, ಆಮೂಲಕ ದೇಶದ ಆರ್ಥಿಕವನ್ನು ವಿಷ ವರ್ತುಲದೊಳಕ್ಕೆ ತಳ್ಳುತ್ತಿದೆ ಎಂದು ಸಿಐಟಿಯು ಹೇಳಿದೆ.

ಸಾಮ್ರಾಜ್ಯಶಾಹಿಗಳು ಇಲೆಕ್ಟ್ರಾನಿಕ್ ಮಾಧ್ಯಮಗಳನ್ನು ಬಳಸಿ ಹೇಗೆ ಬೇಹುಗಾರಿಕೆ ನಡೆಸುತ್ತಿದ್ದಾರೆ ಎಂದು ಬಹಿರಂಗವಾದ ಮೇಲೂ ನಮ್ಮ ದೂರಸಂಪರ್ಕ ವಲಯವನ್ನು ಪೂರ್ಣವಾಗಿ ಅವರಿಗೆ ತೆರೆದು ಕೊಡಲು ಸರಕಾರ ಮುಂದಾಗಿದೆ. ರಕ್ಷಣಾ ಉತ್ಪಾದನೆಯ ವಲಯದಲ್ಲಿ ಎಫ್‌ಡಿಐ ಮೇಲಿನ ಮಿತಿಯನ್ನು ಸಂಪೂರ್ಣವಾಗಿ ತೆಗೆದು ಹಾಕುವ ಕ್ರಮ ಕೈಗೊಂಡರೆ ಈಗಾಗಲೇ ಸರಕಾರದ ತಪ್ಪು ಖರೀದಿ ಧೋರಣೆಯಿಂದಾಗಿ ಸಂಕಟದಲ್ಲಿರುವ ಸಾರ್ವಜನಿಕ ವಲಯದ ರಕ್ಷಣಾ ಉತ್ಪಾದನಾ ಮತ್ತು ಶಸ್ತ್ರಾಸ್ತ್ರ ಉತ್ಪಾದನಾ ಉದ್ದಿಮೆಗಳು ಇನ್ನಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅವು ವಿದೇಶಿ ಕಂಪನಿಗಳ ಕಿರಿಯ ಪಾಲುದಾರರಾಗಿ ಕೆಲಸ ಮಾಡುವ ಪರಿಸ್ಥಿತಿ ದೇಶದ ಭದ್ರತೆಯ ದೃಷ್ಟಿಯಿಂದಲೂ ಅಪಾಯಕಾರಿ. ಆದ್ದರಿಂದ ದೇಶದ ಕಾರ್ಮಿಕ ವರ್ಗ ಮತ್ತು ಕಾರ್ಮಿಕ ಆಂದೋಲನ ಯುಪಿಎ-2 ಸರಕಾರದ ಈ ಎಲ್ಲ ಆತ್ಮಹತ್ಯಾಕಾರಿ ಕ್ರಮಗಳನ್ನು ದೃಢವಾಗಿ ವಿರೋಧಿಸಬೇಕು ಎಂದು ಸಿಐಟಿಯು ಕರೆ ನೀಡಿದೆ.



ಹಾಸಿಗೆ ಹಿಡಿದ 'ಆರ್ಥಿಕ'ಕ್ಕೆ ಎಫ್‌ಡಿಐ ಚಿಕಿತ್ಸೆ-'ಡೆಕ್ಕನ್ ಕ್ರಾನಿಕಲ್' ನಲ್ಲಿ ಸುಧೀರ್ ತೈಲಾಂಗ್ ವ್ಯಂಗ್ಯ

ನೈಸರ್ಗಿಕ ಅನಿಲ ದರ ಏರಿಕೆಗೆ ರಂಗರಾಜನ್ ಸೂತ್ರವೋ, ಅಂಬಾನಿ ಸೂತ್ರವೋ?


ಶ್ರೀಮಂತ ವರ್ಗಗಳ ಹಿತಕಾಯುವ ಕ್ರಮಗಳನ್ನು ಕೈಗೊಂಡರೂ, ಅವು ಬಡವರ ಪರವಾದವುಗಳು ಎಂದು ಬಿಂಬಿಸುವಾಗ ಆಭಾಸಗಳು, ಗೊಂದಲಗಳು ಸಹಜ. ಯುಪಿಎ-2 ಸರಕಾರಕ್ಕೆ ಇದರ ಅನುಭವ ಚೆನ್ನಾಗಿಯೇ ಇದೆ. ಇದರಲ್ಲಿ ಇತ್ತೀಚಿನದ್ದು ನೈಸರ್ಗಿಕ ಅನಿಲ ಬೆಲೆಯೇರಿಕೆ ಕುರಿತದ್ದು.

ನೈಸರ್ಗಿಕ ಅನಿಲದ ಬೆಲೆಗಳನ್ನು ಎಪ್ರಿಲ್ 2014ರಿಂದ ದ್ವಿಗುಣಗೊಳಿಸಲಾಗುವುದು, ಇದು ಉತ್ಪಾದಕರಿಗೆ ಪ್ರೋತ್ಸಾಹ ನೀಡುವ ಕ್ರಮ, ಹೀಗೆ ಮಾಡದಿದ್ದರೆ, ಆಮದು ಅನಿಲಕ್ಕೆ ದುಪ್ಪಟ್ಟು ಬೆಲೆ ತೆರಬೇಕಾಗುತ್ತದೆ ಎಂದು ಜೂನ್ 27ರಂದು ಪೆಟ್ರೋಲಿಯಂ ಮಂತ್ರಿಗಳು ಸಾರಿದರು.

ಯುಪಿಎ-2 ಸರಕಾರದ ಈ ಕ್ರಮಕ್ಕೆ ದೇಶಾದ್ಯಂತ ವ್ಯಕ್ತವಾದ ವಿರೋಧದ ಬಗ್ಗೆ ಈ ಅಂಕಣದಲ್ಲಿ ಈಗಾಗಲೇ ಪರಿಶೀಲಿಸಿದ್ದೇವೆ. ಮುಖ್ಯವಾಗಿ, ಇದು ಮುಕೇಶ್ ಅಂಬಾನಿಯ ರಿಲಯೆಂಸ್ ಕಂಪನಿಗಾಗಿ ಕೈಗೊಂಡ ಕ್ರಮ ಎಂಬ ಟೀಕೆ ಹಣಕಾಸು ಇಲಾಖೆ ಕೂಡ ಪ್ರತಿಕ್ರಿಯಿಸುವಂತೆ ಮಾಡಿದೆ.

ಈ ಕಂಪನಿ ಸರಕಾರದೊಂದಿಗೆ ಮಾಡಿಕೊಂಡಿರುವ ಕರಾರಿನ ಪ್ರಕಾರ ತನಗೆ ವಹಿಸಿಕೊಟ್ಟ ಕೆಜಿ-ಡಿ6 ಬೇಸಿನ್‌ನಲ್ಲಿ ಈ ವರ್ಷ ಪ್ರತಿದಿನ 80 ಮಿಲಿಯ ಸ್ಟಾಂಡರ್ಡ್ ಘನಮೀಟರ್ ಅನಿಲವನ್ನು ಉತ್ಪಾದಿಸಬೇಕು. ಆದರೆ ಅದು ಉತ್ಪಾದಿಸುತ್ತಿರುವುದು ಕೇವಲ 14 ಮಿಲಿಯ. ಕಳೆದ ವರ್ಷವೂ ಇದೇ ಕತೆ. ಕರಾರಿನ ಪ್ರಕಾರ ತನಗೆ ಕೊಡುವ ಬೆಲೆಯನ್ನು ಹೆಚ್ಚಿಸಲು ಒತ್ತಡ ಹಾಕಲೆಂದೇ ಅದು ಹೀಗೆ ಮಾಡುತ್ತಿದೆ, 'ತಾಂತ್ರಿಕ ತೊಂದರೆ'ಗಳ ನೆವವೊಡ್ಡುತ್ತಿದೆ, ಯುಪಿಎ-2 ಸರಕಾರ ನೈಸರ್ಗಿಕ ಅನಿಲದ ಬೆಲೆಯನ್ನು

ಪುಟ 15 ಕ್ಕೆ



500 ಕೋಟಿ ರೂ.ಗಳ ಭರ್ಜರಿ ಪ್ರಚಾರ ಯೋಜನೆ

ಯುಪಿಎ ಸರಕಾರದ ನೇತೃತ್ವ ವಹಿಸಿರುವ ಕಾಂಗ್ರೆಸ್ ಪಕ್ಷ ತನ್ನ ವಿರುದ್ಧ 'ಅಪಪ್ರಚಾರ'ವನ್ನು ಎದುರಿಸಲು ಮತ್ತು ತನ್ನ 'ಸಾಧನೆಗಳ' ಪ್ರಚಾರಕ್ಕೆ ಒಂದು ಭಾರೀ ಯೋಜನೆಯನ್ನು ರೂಪಿಸಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಮುಂದಿನ ಸಪ್ಟಂಬರ್‌ನಿಂದ ಆರಂಭವಾಗುವ ಈ 500 ಕೋಟಿ ರೂ.ಗಳ ಜಾಹೀರಾತು ಪ್ರಚಾರ ಯೋಜನೆ, ನವಂಬರ್‌ನಲ್ಲಿ ಕೆಲವು ರಾಜ್ಯ ವಿಧಾನ ಸಭೆಗಳ ಚುನಾವಣೆಗಳ ಮೊದಲು ಎರಡನೇ ಹಂತ ಪ್ರವೇಶಿಸುತ್ತದೆ, ಮತ್ತು 2014 ರ ಸಾರ್ವತ್ರಿಕ ಚುನಾವಣೆಗಳ ವೇಳೆಗೆ ಮೂರನೆ ಮತ್ತು ಅಂತಿಮ ಹಂತ ತಲುಪುತ್ತದೆ ಎನ್ನಲಾಗಿದೆ. ಇದು ಈಗಾಗಲೇ ಟೀಕೆ-ಟಿಪ್ಪಣಿಗಳಿಗೆ ಗುರಿಯಾಗಿರುವ 'ಭಾರತ್ ನಿರ್ಮಾಣ' ಜಾಹೀರಾತು ಯೋಜನೆಗಿಂತ ಭಿನ್ನವಾಗಿರುತ್ತದೆಯಂತೆ.

ಈಗಾಗಲೇ ಪಕ್ಷದ ಪ್ರಚಾರ ಕೇಂದ್ರದಲ್ಲಿ ಈ 500 ಕೋಟಿ ರೂ.ಗಳ ಪ್ರಚಾರದ ಕಾಂಟ್ರ್ಯಾಕ್ಟ್ ಯಾರಿಗೆ ವಹಿಸಬೇಕು ಎಂಬುದಕ್ಕೆ 'ಪ್ರತಿಷ್ಠಿತ' ಜಾಹೀರಾತು ಕಂಪನಿಗಳ 'ಬ್ಯೂಟಿ ಪರೇಡ್' ಆರಂಭವಾಗಿದೆಯಂತೆ. ಹನ್ನೊಂದು ಕಂಪನಿಗಳು ಇದರಲ್ಲಿ ಭಾಗವಹಿಸುತ್ತಿವೆ.

ದೇಶದ ಜನಮಾನಸದಲ್ಲಿ ಈಗ ಗಟ್ಟಿಯಾಗಿ ಕೂತಿರುವ ಯುಪಿಎ-2 ಸರಕಾರದ ಭ್ರಷ್ಟಾಚಾರದ ಪ್ರತಿಮೆಯನ್ನು ಹಿಂದಕ್ಕೆ ತಳ್ಳಿ, ಅದರ ಸ್ಥಾನದಲ್ಲಿ 'ಕಲ್ಯಾಣ ಸಾಧನೆಗಳ'ನ್ನು ಪ್ರತಿಷ್ಠಾಪಿಸಬೇಕು ಎಂಬುದು ಈ ಕಂಪನಿಗಳಿಗೆ ವಹಿಸಿರುವ ಕಾರ್ಯಭಾರ. ಅಲ್ಲದೆ ಈಗ ಯುವಜನರ ಮಧ್ಯೆ ಜನಪ್ರಿಯವಾಗಿರುವ 'ಫೇಸ್‌ಬುಕ್', 'ಟ್ವಿಟರ್' ಇತ್ಯಾದಿ ಸಾಮಾಜಿಕ ಮಾಧ್ಯಮಗಳಿಗೂ ಒಂದು ಪ್ರತ್ಯೇಕ ಯೋಜನೆಯನ್ನು ಸಲ್ಲಿಸುವಂತೆ ಈ ಕಂಪನಿಗಳಿಗೆ ಹೇಳಲಾಗಿದೆಯಂತೆ. ಅಂತಿಮವಾಗಿ, ಕಾಂಗ್ರೆಸ್ ಉಪಾಧ್ಯಕ್ಷರು ಈ ಯೋಜನೆಗಳಿಗೆ ಮಂಜೂರಾತಿ ನೀಡಿದ ಮೇಲೆ ಪ್ರಚಾರಕಾರ್ಯ ಆರಂಭವಾಗುತ್ತದೆ ಎನ್ನಲಾಗುತ್ತಿದೆ.

ಈ 'ಬ್ಯೂಟಿ ಪರೇಡ್'ನಲ್ಲಿ ಭಾಗವಹಿಸುತ್ತಿರುವ ಜಾಹೀರಾತು ಕಂಪನಿಗಳಲ್ಲಿ ಹತ್ತು ವರ್ಷಗಳ ಹಿಂದೆ ಎನ್‌ಡಿಎ ಸರಕಾರದ 'ಇಂಡಿಯಾ ಶೈನಿಂಗ್' ಪ್ರಚಾರ ಕಾರ್ಯವನ್ನು ನಿರ್ವಹಿಸಿದ ಜಾಹೀರಾತು ಕಂಪನಿಯೂ ಇದೆ ಎಂಬುದು ಮತ್ತೊಂದು ವ್ಯಂಗ್ಯ

ಜಗದಗಲ

▪ ಶರತ್‌ಚಂದ್ರ

ಯುರೋ–ಪ್ರದೇಶ ಬಿಕ್ಕಟ್ಟು ಮುಗಿಯಿತಂತೆ !!

'ಯುರೋ–ಪ್ರದೇಶ ಬಿಕ್ಕಟ್ಟು ಮುಗಿಯಿತು' ಅಂತ ಫ್ರೆಂಚ್ ಅಧ್ಯಕ್ಷ ಫ್ರಾಂಕೊ ಹಾಲಂಡ್ ಅವರ ಜಪಾನಿ ಭೇಟಿ ಸಂದರ್ಭದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಅವರ ರಾಗಕ್ಕೆ ಯುರೋಪಿಯನ್ ಕಮಿಶನ್ ಮತ್ತು ಕೌನ್ಸಿಲುಗಳ ಮುಖ್ಯಸ್ಥರು ತಾಳ ಹಾಕಿದ್ದರು. ಆದರೆ ಅವರು ಹೀಗೆ ಹೇಳಿದ ಕೆಲವೇ ದಿನಗಳಲ್ಲಿ ಯುರೋಪಿನ ಎರಡನೇ ದೊಡ್ಡ ಆರ್ಥಿಕ ಫ್ರಾನ್ಸಿನ ಆರ್ಥಿಕ ಈ ವರ್ಷದ ಮೊದಲ ಕ್ವಾರ್ಟರಿನಲ್ಲಿ 0.2% ರಷ್ಟು ಹಿಂಜರಿತ ಕಂಡಿತು ಎಂದು ಪ್ರಕಟಿಸಲಾಗಿದೆ. ಕ್ವಾರ್ಟರಿನಲ್ಲಿ ಎಂದರೆ ಮೂರು ತಿಂಗಳ ಅವಧಿಯಲ್ಲಿ ಅಂತ ಅರ್ಥ. ಅಂದರೆ ವರ್ಷವನ್ನು 4 ಮೂರು ತಿಂಗಳ ಅವಧಿಗಳಾಗಿ ವಿಂಗಡಿಸಿ ಪ್ರತಿ ಅವಧಿಗೆ ಆರ್ಥಿಕ ಅಂಕೆ–ಸಂಖ್ಯೆಗಳನ್ನು ಕಲೆ ಹಾಕಲಾಗುತ್ತದೆ. ಕಳೆದ 4 ವರ್ಷಗಳ ನಂತರ ಫ್ರಾನ್ಸಿನಲ್ಲಿ ಇದು ಮೊದಲ 'ಹಿಂಜರಿತ'. ಅನುಕ್ರಮವಾಗಿ ಎರಡು ಕ್ವಾರ್ಟರುಗಳಲ್ಲಿ ಆರ್ಥಿಕ ಗಾತ್ರ ಕುಗ್ಗಿದರೆ ಅದನ್ನು ಅಧಿಕೃತವಾಗಿ 'ಹಿಂಜರಿತ' ಎಂದು ಕರೆಯಲಾಗುತ್ತದೆ.

'ಯುರೋ– ಪ್ರದೇಶ' ಎಂದು ಕರೆಯಲಾಗುವ 'ಯುರೋ' ನಾಣ್ಯ ಬಳಸುವ ಯುರೋಪಿನ 17 ದೇಶಗಳ ಇಡೀ ಪ್ರದೇಶದಲ್ಲಿ ಒಟ್ಟಾರೆಯಾಗಿ ಈಗಾಗಲೇ ಹಿಂಜರಿತ ಮುಂದುವರೆಯುತ್ತಿದೆ. ಅದೂ ಇಂತಹ ಅಂಕೆ–ಸಂಖ್ಯೆ 1995ರಲ್ಲಿ ಇಡಲಾರಂಭಿಸಿದ ನಂತರ ಇದು ಅತ್ಯಂತ ದೀರ್ಘ 'ಹಿಂಜರಿತ' ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಕಳೆದ ಆರು ಕ್ವಾರ್ಟರುಗಳಲ್ಲಿ ಯುರೋ ಪ್ರದೇಶ ಸತತವಾಗಿ ಹಿಂಜರಿತ ಕಂಡಿದೆ. ಈವರೆಗೆ ಅತ್ಯಂತ ಎರಡು ದೊಡ್ಡ ಆರ್ಥಿಕಗಳಾದ ಜರ್ಮನಿ ಮತ್ತು ಫ್ರಾನ್ಸ್ ಬಿಟ್ಟರೆ ಇತರ ಎಲ್ಲಾ ದೇಶಗಳೂ ವಿವಿಧ ಸಂಖ್ಯೆಯ ಹಲವು



ಕ್ವಾರ್ಟರುಗಳ ಹಿಂಜರಿತ ಕಂಡಿವೆ. ಈಗ ಜರ್ಮನಿ ಮಾತ್ರ ಇದಕ್ಕೆ ಅಪವಾದವಾಗಿದ್ದು, ಅದರ ಆರ್ಥಿಕ ಬೆಳವಣಿಗೆ ಒಟ್ಟಾರೆ ಯುರೋ ಪ್ರದೇಶದ ಆರ್ಥಿಕ ಹಿಂಜರಿತವನ್ನು ಮರೆಮಾಚುತ್ತಿತ್ತು. ಅದರ ಆರ್ಥಿಕ ಬೆಳವಣಿಗೆ ಈಗ (ಕ್ವಾರ್ಟರಿನಿಂದ ಕ್ವಾರ್ಟರಿಗೆ) ಕೇವಲ ಶೇ.0.2 ಆಗಿದೆ.

ಜರ್ಮನಿಯ ಬೆಳವಣಿಗೆ ಸಹ ಮುಖ್ಯವಾಗಿ ರಫ್ತು ಮೇಲೆ ಆಧಾರಿತವಾಗಿದ್ದು, ಅದರ ಆಂತರಿಕ ಬೇಡಿಕೆ ಕುಸಿದಿದೆ. ಈಗಾಗಲೇ ಸರ್ವವಿಧಿತವಾಗಿರುವಂತೆ ಯುರೋ ಪ್ರದೇಶದ ಬಿಕ್ಕಟ್ಟಿಗೆ ಮೂಲ ಕಾರಣ ಕುಸಿದಿದ್ದ ಯುರೋ ಬ್ಯಾಂಕುಗಳಿಗೆ ಕೊಡಲಾದ ಅಗಾಧ 'ಬೇಲ್–ಔಟ್'. ಯುರೋ ಬ್ಯಾಂಕುಗಳ ಕುಸಿತಕ್ಕೆ ಬಹುಮಟ್ಟಿಗೆ ಅಮೆರಿಕದ 'ಸಬ್–ಪ್ರೈಮ್ ಸಾಲದ' ಜೂಜಾಟ ಉಂಟು ಮಾಡಿದ ಕೃತಕ ಗುಳ್ಳೆ ಒಡೆದದ್ದು ಕಾರಣವಾಗಿತ್ತು. ಏಕೆಂದರೆ ಯುರೋ ಬ್ಯಾಂಕುಗಳು ಅಮೆರಿಕನ್ ಮತ್ತಿತರ ಬ್ಯಾಂಕುಗಳ ಅಂತರ್ರಾಷ್ಟ್ರೀಯ ಬ್ಯಾಂಕಿಂಗ್ ವ್ಯವಸ್ಥೆಯ ಭಾಗವಾಗಿದ್ದು ಇಂತಹ 'ಕೃತಕ ಗುಳ್ಳೆ' ಸೃಷ್ಟಿಸುವ ಜೂಜಾಟಗಳಲ್ಲಿ ತೊಡಗಿದ್ದರು. ಇಂತಹ ಅಪರಾಧಗಳಿಗೆ ಈ ಬ್ಯಾಂಕುಗಳನ್ನು ಶಿಕ್ಷಿಸುವ ಬದಲು ಅಗಾಧ 'ಬೇಲ್–ಔಟ್' ಕೊಡಲಾಯಿತು. ಅದನ್ನು ಸರಿತೂಗಿಸಲು 'ಮಿತ ವ್ಯಯ'ದ ಹೆಸರಲ್ಲಿ ಈ ದೇಶಗಳ ಜನತೆಯನ್ನು ಸಾರ್ವಜನಿಕ ಹೂಡಿಕೆ, ಉದ್ಯೋಗ, ಆರೋಗ್ಯ ಶಿಕ್ಷಣ ಪೆಂಶನ್ ಮತ್ತಿತರ ಕಲ್ಯಾಣ ಯೋಜನೆಗಳ ಅಗಾಧ ಕಡಿತಗಳಿಂದ ಶಿಕ್ಷಿಸಲಾಯಿತು. ಇದರಿಂದ ವಸ್ತು–ಸೇವೆಗಳಿಗೆ ಬೇಡಿಕೆ ತೀವ್ರವಾಗಿ ಕುಸಿದಿದೆ. ಇದರಿಂದಾಗಿ ಇಡೀ ಪ್ರದೇಶದ ಆರ್ಥಿಕ ಒಟ್ಟಾರೆಯಾಗಿ ಹಿಂಜರಿತ ಕಂಡಿರುವುದು.

ಇಡೀ ಪ್ರದೇಶದಾದ್ಯಂತ ಅದರಲ್ಲೂ ವಿಶೇಷವಾಗಿ ಸ್ಪೈನ್, ಗ್ರೀಸ್, ಪೋರ್ಚುಗಲ್, ಐರ್ಲೆಂಡುಗಳಲ್ಲಿ ಅದರ ತೀವ್ರ ಪರಿಣಾಮಗಳನ್ನು ಕಂಡ ಮೇಲೂ ಈ 'ಮೂಲಭೂತವಾದಿ' ನೀತಿಗಳನ್ನು ಮುಂದುವರೆಸಲಾಗುತ್ತಿದೆ. ನಿರುದ್ಯೋ[ಗ] ಪ್ರಮಾಣ ಅಗಾಧವಾಗಿ ಹೆಚ್ಚಿದ್ದು, ಸಾಮಾಜಿ[ಕ] ಅತೃಪ್ತಿ ತಾರಕಕ್ಕೇರಿದೆ. ಯುರೋಪಿನ ಎಲ[್ಲಾ] ದೇಶಗಳಲ್ಲಿ ಜನತೆ ಬೀದಿಗಿಳಿದು ಇದನ[್ನು] ಪ್ರತಿಭಟಿಸುತ್ತಿದ್ದಾರೆ. ಗ್ರೀಸ್, ಪೋರ್ಚುಗಲ[್] ಸ್ಪೈನುಗಳಲ್ಲಿ ಸಾರ್ವತ್ರಿಕ ಮುಷ್ಕರಗಳು ಸಾಲ[ು] ಸಾಲಾಗಿ ನಡೆದಿವೆ. ಕಳೆದ ವಾರವೇ ಗ್ರೀಸಿನ[ಲ್ಲಿ] ಇನ್ನೊಂದು ಸಾರ್ವತ್ರಿಕ ಮುಷ್ಕರ ನಡೆಯಿತು. ಪೋರ್ಚುಗಲ್‌ಗಳಲ್ಲಿ ರಾಜಕೀಯ, ಸರ್ಕಾ[ರಿ] ಬಿಕ್ಕಟ್ಟು ಮುಂದುವರೆದಿದೆ. ಇದಕ್ಕೆ ಮೂಲ ಕಾರಣ ಮುಖ್ಯವಾಗಿ ಹೆಚ್ಚುತ್ತಿರುವ ನಿರುದ್ಯೋಗ, ಅದರಲ್ಲೂ ಯುವ ನಿರುದ್ಯೋಗದ ಪ್ರಮಾಣ.

ಇಡೀ ಯುರೋ ಪ್ರದೇಶದ ನಿರುದ್ಯೋಗದ ಪ್ರಮಾಣ 2008ರ ಬಿಕ್ಕಟ್ಟಿನ ಮೊದಲು ಶೇ 7.5 ಕ್ಕಿಂತಲೂ ಕಡಿಮೆ ಇದ್ದು, ಈಗ ಶೇ.12 ದಾಟಿದೆ. ಅಂದರೆ ನಿರುದ್ಯೋಗದ ಪ್ರಮಾಣ ಶೇ.50ಕ್ಕಿಂತಲೂ ಹೆಚ್ಚಾಗಿದೆ. ನಿರುದ್ಯೋಗಿಗಳ ಸಂಖ್ಯೆ 2 ಕೋಟಿ (ಈ ಪ್ರದೇಶದ ಜನಸಂಖ್ಯೆ 33 ಕೋಟಿ) ದಾಟಿದೆ. ಈ ಪ್ರದೇಶದೊಳಗಿನ ತೀವ್ರ ಅಸಮಾನತೆ ಇನ್ನೂ ದಂಗುಬಡಿಸುವಂತಹುದು. ಜರ್ಮನಿಯ ನಿರುದ್ಯೋಗದ ಪ್ರಮಾಣ ಶೇ. 5.4 ಇದ್ದರೆ, ಗ್ರೀಸ್ ಮತ್ತು ಸ್ಪೈನುಗಳದ್ದು ಶೇ.25 ಇನ್ನೂ ಭೀಕರವಾದ್ದು ಯುವ (16–2[4] ವಯಸ್ಸಿನವರಲ್ಲಿ) ನಿರುದ್ಯೋಗದ ಪ್ರಮಾಣ. ಜರ್ಮನಿಯಲ್ಲಿ ಯುವ ನಿರುದ್ಯೋಗ ಶೇ.7.[.] ಇದ್ದರೆ, ಇಟಲಿಯದ್ದು ಶೇ.40. ಗ್ರೀಸ್ ಮತ್ತು ಸ್ಪೈನುಗಳಲ್ಲಿ ಶೇ.50 !


ಆದರೆ, ಫ್ರೆಂಚ್ ಸೋಶಲಿಸ್ಟ್ ಅಧ್ಯಕ್ಷ ಫ್ರಾಂಕೊ ಹಾಲಂಡ್ ಪ್ರಕಾರ, ಯುರೋ ಪ್ರದೇಶದ ಬಿಕ್ಕಟ್ಟು ಮುಗಿಯಿತಂತೆ!!

ಅಮೆರಿಕದ 'ವರ್ಣಮಯ' ಚಿತ್ರದ 'ಕಪ್ಪು–ಬಿಳುಪು' !

ಅಮೆರಿಕನ್ ಮಾಧ್ಯಮಗಳು ಅವುಗಳ ಜೂನಿಯರ್ ಪಾರ್ಟನರ್‌ಗಳಾದ ನಮ್ಮ ಮಾಧ್ಯಮಗಳ ಮೂಲಕ ಅಮೆರಿಕದಲ್ಲಿ ಬದುಕಿನ 'ವರ್ಣಮಯ' ಚಿತ್ರ ಉಣಬಡಿಸುತ್ತಿರುವಾಗ, ಅದರ 'ಕಪ್ಪು–ಬಿಳುಪು' ಇನ್ನೊಮ್ಮೆ ಬಯಲಾಗಿದೆ. ಆದರೆ ಈ ಕಪ್ಪು–ಬಿಳುಪು ಅಮೆರಿನ್ ಮಾಧ್ಯಮಗಳಲ್ಲಿ ಕಂಡಷ್ಟು ನಮ್ಮ ಮಾಧ್ಯಮಗಳಲ್ಲಿ ಕಾಣಲಿಲ್ಲ. ಇದು ಅಮೆರಿಕದ ಫ್ಲಾರಿಡಾ ಪ್ರಾಂತ್ಯದಲ್ಲಿ ಕಳೆದ ವರ್ಷ ಸಶಸ್ತ್ರ ಬಿಳಿಯನೊಬ್ಬ ನಿಶ್ಶಸ್ತ್ರ ಕರಿಯ ಹದಿಹರೆಯದ ಹುಡುಗನೊಬ್ಬನ ಕೊಲೆ ಮಾಡಿದ ಪ್ರಕರಣದಲ್ಲಿ ಬಂದ ತೀರ್ಪು ವರ್ಣಭೇಧ ಆ ದೇಶದಲ್ಲಿ ಇನ್ನೂ ಎಷ್ಟು ಜೀವಂತವಾಗಿದೆ ಎಂದು ಬಯಲು ಮಾಡಿತು.

ಕೊಲೆಗಡುಕ ಸಶಸ್ತ್ರ ಬಿಳಿಯನ ಹೆಸರು ಜಾರ್ಜ್ ಜಿಮ್ಮರ್‌ಮನ್. ಕೊಲೆಯಾದ ನಿಶ್ಶಸ್ತ್ರ ಹದಿಹರೆಯದ ಕರಿಯ ಹುಡುಗನ ಹೆಸರು ಟ್ರಾಯ್ವನ್ ಮಾರ್ಟಿನ್. ಆದರೆ ತೀರ್ಪು ಜಾರ್ಜ್ ಮಾರ್ಟಿನ್ ಗುಂಡು ಹಾರಿಸಿದ್ದು 'ಸ್ವ–ರಕ್ಷಣೆ'ಗಾಗಿ. ಆದ್ದರಿಂದ ಆತ ಅಪರಾಧಿಯಲ್ಲ ಎಂದು ಕೋರ್ಟು ತೀರ್ಪು ನೀಡಿದೆ. ಮೊದಲ 'ದಾಳಿ' ಮಾಡಿದ್ದು ಮಾರ್ಟಿನ್ ಅಂತ ಸಹ ಕೋರ್ಟು ತೀರ್ಮಾನಿಸಿದೆ.

ನಡೆದದ್ದು ಇಷ್ಟು. ಜಾರ್ಜನ ಎಸ್ಟೇಟಿನಲ್ಲಿ ಇತ್ತೀಚೆಗೆ ಹಲವು ಕಳ್ಳತನ



ನಡೆದಿತ್ತಂತೆ. ಆದ್ದರಿಂದ ಆತ ಸಶಸ್ತ್ರನಾಗಿ ತನ್ನ ಎಸ್ಟೇಟಿನ ಸುತ್ತ ತಿರುಗಾಡುತ್ತಿದ್ದ. ಸಂಶಯ ಬಂದವರ ಬೆನ್ನಟ್ಟುತ್ತಿದ್ದ. ತನ್ನ ಪಾಡಿಗೆ ಸಾರ್ವಜನಿಕ ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಮಾರ್ಟಿನನ ಮೇಲೆ 'ಸಂಶಯ' ಬಂದು ಅವನನ್ನು ಕೆಣಕಿದ್ದಾನೆ. ಆ ಮೇಲೆ ನಡೆದ ಘರ್ಷಣೆಯಲ್ಲಿ ಆತ 'ಸ್ವ–ರಕ್ಷಣೆ'ಗೆ ಗುಂಡು ಹಾರಿಸಿದ್ದಾನೆ. ಅಥವಾ ಹಾಗಂತ ಕೋರ್ಟಿಗೆ ಹೇಳಿದ್ದಾನೆ. ನಿಶ್ಶಸ್ತ್ರ ಮಾರ್ಟಿನ್ ಯಾರು ಮೊದಲು ದಾಳಿ ಮಾಡಿದ್ದು ಎಂದು ತನ್ನ ಹೇಳಿಕೆಯನ್ನು ಕೋರ್ಟಿಗೆ ನೀಡಲು ಬದುಕಿರಲಿಲ್ಲ. ಆದ್ದರಿಂದ ಅಥವಾ ಜಾರ್ಜನ 'ವರ್ಣ'ದಿಂದಲೋ ಏನೋ ಕೋರ್ಟು ಜಾರ್ಜನ ಹೇಳಿಕೆ ಒಪ್ಪಿಕೊಂಡಿತು. ಜಾರ್ಜ್‌ಗೆ ಬರೇ 'ಸಂಶಯ'ದ ಆಧಾರದ ಮೇಲೆ ಕರಿಯರ ಮೇಲೆ ದಾಳಿ ಮಾಡುವ ಪ್ರವೃತ್ತಿ ಇರುವುದನ್ನು ಕೋರ್ಟು ಗಣ[ನೆ]

ಶದ ಆರ್ಥಿಕವನ್ನು ......

3 13 ರಿಂದ

ರ್ಪಟ್ಟು ಮಾಡಿರುವುದೂ ಅದರ ಈ ರಿಕೆಗೆ ತಲೆಬಾಗಿಯೇ ಎಂಬುದು ಮಾನ್ಯವಾಗಿರುವ ಅಭಿಪ್ರಾಯ.

ಇದನ್ನು ಹೋಗಲಾಡಿಸಲು ಹಣಕಾಸು ಾಖೆ ಆ ಕಂಪನಿ ಮಾತು ಕೊಟ್ಟಂತೆ ್ಪಾದನೆ ಮಾಡುವ ವರೆಗೆ ಈ ಏರಿಸಿದ ಅದಕ್ಕೆ ಸಿಗಬಾರದು ಎಂದು ್ರೋಲಿಯಂ ಇಲಾಖೆಗೆ ಟಿಪ್ಪಣಿ ಕಳಿಸಿತು ದು ವರದಿಯಾಗಿದೆ.

ಈ ನಡುವೆ ಆರ್ಥಿಕ ವ್ಯವಹಾರಗಳ ಮುಟ ಸಮಿತಿ ನೈಸರ್ಗಿಕ ಅನಿಲದ ಯನ್ನು 4.2 ಡಾಲರುಗಳಿಂದ 8.4 ಲರುಗಳಿಗೆ ಏರಿಸಬೇಕೆಂದೇನೂ ರ್ಧರಿಸಿಲ್ಲ ಎಂದೂ ವರದಿ ಬಂತು. ಈಗ ್ರೋಲಿಯಂ ಮಂತ್ರಿಗಳೂ ಅದನ್ನು ಕಪಡಿಸಿದ್ದಾರೆ. ಜುಲೈ 12 ರಂದು ಅವರು ತಿದ ಹೇಳಿಕೆಯಲ್ಲಿ ಎಪ್ರಿಲ್ 2014ರಿಂದ ತೀ ಅನಿಲ ಉತ್ಪಾದಕರಿಗೆ ರಂಗರಾಜನ್ ರ ಪ್ರಕಾರ ಬೆಲೆ ಸಿಗುತ್ತದೆ ಎಂದಷ್ಟೇ ಮುಟ ಸಮಿತಿ ನಿರ್ಧರಿಸಿರುವುದಾಗಿಯೂ ಕೊಂಡರು. ಆದರೆ ಕರಾರಿನ ಪ್ರಕಾರ ್ಪಾದನೆ ಮಾಡಿದೆಯೋ ಇಲ್ಲವೋ ಎಂಬ ಾರದ ಮೇಲೆ ಹಿಂದಿನ ಬೆಲೆಯನ್ನೆ ಡಬೇಕೆಂಬ ಪ್ರಶ್ನೆ ತಮ್ಮ ಇಲಾಖೆಯ ಂದಿಲ್ಲ" ಎಂದೂ ಹೇಳಿ ತಮ್ಮದೇ ಕಾರದ ಹಣಕಾಸು ಇಲಾಖೆಯ ್ಪಣಿಯನ್ನು ತಿರಸ್ಕರಿಸಿದರು ಎಂದೂ ದಿಯಾಗಿದೆ.

ಹಾಗಿದ್ದರೆ ಈ ಹಿಂದೆ 8.4 ಡಾಲರಿನ ್ನ ಏಕೆ ಬಂತು, ಹಣಕಾಸು ಇಲಾಖೆ -ಡಿ6 ಉತ್ಪಾದನೆಯ ಪ್ರಶ್ನೆಯನ್ನು ಏಕೆ ್ತಿದೆ, ಮತ್ತು ಅದನ್ನು ಪೆಟ್ರೋಲಿಯಂ ಇಲಾಖೆ ಏಕೆ ಸಾರಾಸಗಟು ತಳ್ಳಿ ಹಾಕಿದೆ ಎಂಬ ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ಇದರಲ್ಲಿ ಗೊಂದಲ ಏನೂ ಇಲ್ಲ ಎಂಬ ಪೆಟ್ರೋಲಿಯಂ ಮಂತ್ರಿಗಳ ಮಾತು ಬಹುಶಃ ಬೇರೊಂದು ಅರ್ಥದಲ್ಲಿ ನಿಜ. ಸಿಪಿಐ ಸಂಸತ್ ಸದಸ್ಯರಾದ ಗುರುದಾಸ್ ದಾಸ್‌ಗುಪ್ತ ಪ್ರಧಾನ ಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಹೇಳಿರುವಂತೆ, ಪೆಟ್ರೋಲಿಯಂ ಮಂತ್ರಿಗಳ ಈ ಪರಸ್ಪರ ವಿರುದ್ಧವಾಗಿ ಕಾಣುವ ಹೇಳಿಕೆಗಳು ಅಜ್ಞಾನದ ಹೇಳಿಕೆಗಳಂತೂ ಅಲ್ಲ, ಬದಲಿಗೆ ಬೇಕೆಂದೇ ಗೊಂದಲಗಳನ್ನು ಸೃಷ್ಟಿಸಿ ಈ ಕುರಿತ ಚರ್ಚೆಯನ್ನು ದಾರಿ ತಪ್ಪಿಸುವ ತಂತ್ರ ಇರಬಹುದೇ?

ಮತ್ತೆ ಪೆಟ್ರೋಲ್ ಬೆಲೆಯೇರಿಕೆ ಮತ್ತೆ ಹಣದುಬ್ಬರ ದರ ಏರಿಕೆ

ಈ ವಾರ ಮತ್ತೆ ಪೆಟ್ರೋಲ್ ದರ 2ರೂ.ಗಳಷ್ಟು ಏರಿದೆ. ಇದು ಜೂನ್ 1ರ ನಂತರ ಆರು ವಾರಗಳಲ್ಲಿ ನಾಲ್ಕನೇ ಏರಿಕೆ. ಈ ಆರು ವಾರಗಳಲ್ಲಿ 10ಶೇ.ದಷ್ಟು ಏರಿಕೆಯಾಗಿದೆ. ಇದಕ್ಕೆ ಮೊದಲೇ ಬಳಕೆದಾರ ಬೆಲೆ ಸೂಚ್ಯಂಕವೂ ಏರಿಕೆ ದಾಖಲಿಸಿದೆ. ಏರಿಕೆಯ ದರ ಈಗ ಮತ್ತೆ ಎರಡಂಕಿ ಸಮೀಪಿಸುತ್ತಿದೆ. ಸರಕಾರದ ಅಂಕಿ-ಅಂಶಗಳ ಪ್ರಕಾರವೇ ಜೂನ್ ತಿಂಗಳಲ್ಲಿ 9.87ಶೇ. ಏರಿಕೆ ದಾಖಲಿಸಿತು ಮೇತಿಂಗಳಲ್ಲಿ ಅದು 9.17ಶೇ. ಇತ್ತು. ಜೂನ್ ತಿಂಗಳಲ್ಲಿ ಆಹಾರ ಧಾನ್ಯಗಳ ಬೆಲೆಗಳಲ್ಲಿ 17.59ಶೇ. ಏರಿಕೆಯಾಗಿದೆ. ಒಟ್ಟಾರೆಯಾಗಿ ಆಹಾರ ಸಾಮಗ್ರಿಗಳ ಬೆಲೆಗಳಲ್ಲಿ 11.84ಶೇ. ಏರಿಕೆಯಾಗಿದೆ. ಸಗಟು ಬೆಲೆ ಸೂಚ್ಯಂಕದ ಆಧಾರದಲ್ಲಿ ಕಳೆದ ನಾಲ್ಕು ತಿಂಗಳಲ್ಲಿ ಹಣದುಬ್ಬರ ದರ ಇಳಿಮುಖವಾಗುತ್ತಿದೆ ಎನ್ನಲಾಗಿತ್ತು. ಈಗ ಅದೂ ಏರಿದೆ.

ದುಕೊಂಡಿಲ್ಲ. ಜಾರ್ಜ್ ಪೋಲೀಸರಿಗೆ ಮಾಡಿದಾಗ ಕರಿಯರು 'ದ-ಡೆಕೋರರು', 'ಕಳ್ಳರು' ಮುಂತಾಗಿ ತನ್ನ ವರ್ಣಬೇಧದ ಪೂರ್ವಗ್ರಹ ೇರಿಸಿದ್ದನ್ನೂ ಗಮನಕ್ಕೆ ತೆಗೆದುಕೊಂಡಿಲ್ಲ. ಸ್ವಾಭಾವಿಕವಾಗಿಯೇ ಈ ತೀರ್ಪಿಗೆ ಶದಾದ್ಯಂತ ತೀವ್ರ ಪ್ರತಿಭಟನೆ ಕ್ತವಾಗಿದೆ. ಆದರೆ ಸರ್ಕಾರ ಮತ್ತು ೋಲಿಸ್ 'ನಿರೀಕ್ಷಿಸಿದಂತೆ' ದಂಗೆಗಳು ಗಲಿಲ್ಲ. ಮಿಯಾಮಿ, ನ್ಯೂಯಾರ್ಕ್, ಶಿಂಗ್ಟನ್, ಸಾನ್ ಫ್ರಾನ್ಸಿಸ್ಕೊ, ಲಾಸ್ ಂಜೆಲಿಸ್, ಶಿಕಾಗೊ ಮುಂತಾದ ಮುಖ ನಗರಗಳಲ್ಲದೆ ಹಲವಾರು ಸಣ್ಣ ಟ್ಟಣಗಳಲ್ಲೂ ನೂರಾರು ಸಾವಿರಾರು ಂತಿಯುತ ಪ್ರತಿಭಟನಾ ಪ್ರದರ್ಶನಗಳು ಡೆದಿವೆ. ಕೆಲವು ಕಡೆ ಪೋಲೀಸರ ದಮನ ರೋಧಿಸಿ ಸಣ್ಣ ಗಲಭೆಗಳಾಗಿವೆ. ಇದು ರಿಯ ಕೊಲೆ ಮೊಕದ್ದಮೆ ಅಲ್ಲ. ಕೊಲೆ ೊಕದ್ದಮೆಯಾಗಿಯೂ ಇದು ತಪ್ಪು . ಆದರೆ ಇನ್ನೂ ಗಂಭೀರವಾದ ್ನ ಇದೆ. ಇಲ್ಲಿ ಪೋಲಿಸರ ಮತ್ತು ್ಯಾಯ ವ್ಯವಸ್ಥೆಯಲ್ಲಿ ತಾಂಡವವಾಡುತ್ತಿರುವ ವರ್ಣಬೇಧದ ಪ್ರಶ್ನೆ ಇದೆ - ಎಂದು ಕ-ರಿಯರ, ವರ್ಣಬೇಧ-ವಿರೋಧಿ ಮತ್ತು ಇತರ ಪ್ರಜಾಸತ್ತಾತ್ಮಕ, ಪ್ರಗತಿಪರ ಸಾಮೂಹಿಕ ಸಂಘಟನೆಗಳು ಹೇಳಿವೆ.

ಈ ಪ್ರಕರಣದಲ್ಲಿ ಎದ್ದು ಕಾಣುತ್ತಿರುವ ವರ್ಣಬೇಧದ ಪ್ರಶ್ನೆಯ ಆಧಾರದ ಮೇಲೆ ಫೆಡರಲ್ ತನಿಖೆ ಆಗಬೇಕು. ನಾಗರಿಕ ಹಕ್ಕುಗಳ ಉಲ್ಲಂಘನೆ ಆಧಾರದ ಮೇಲೆ ಫೆಡರಲ್ ಪ್ರಕರಣ ದಾಖಲೆ ಆಗಬೇಕು ಎಂದು ಒತ್ತಾಯಿಸಿವೆ. ಫೆಡರಲ್ ತನಿಖಾ ಇಲಾಖೆ ಇಂತಹ ಪ್ರಕರಣ ದಾಖಲು ಮಾಡಲು ಆಧಾರ ಇದೆಯೇ ಎಂದು ಪೂರ್ವಭಾವಿ ತನಿಖೆ ನಡೆಸಿದೆಯಂತೆ. ಆದರೆ ಅಧ್ಯಕ್ಷ ಒಬಾಮಾ ಕೋರ್ಟಿನ ತೀರ್ಪು ಮನ್ನಿಸಬೇಕು. ಶಾಂತಿ ಕಾಪಾಡಬೇಕು ಎಂದು ಮನವಿ ಮಾಡಿದ್ದಾರೆ. ನಾಗರಿಕ ಹಕ್ಕುಗಳ ಮೇಲೆ ಇಂತಹ ನಗ್ನ ದಾಳಿ ಮತ್ತು ವರ್ಣಬೇಧದ ನಗ್ನ ಪ್ರದರ್ಶನ ನಡೆದಾಗಲೂ, ಅದರ ವಿರುದ್ಧ ಬಾಯಿ ಬಿಡಲು ತಯಾರಿಲ್ಲ. ಅದರ ವಿರುದ್ಧ ಬಿಗಿ ಕ್ರಮ ತೆಗೆದುಕೊಳ್ಳಲು ತಯಾರಿಲ್ಲ. ಪಾಪ! ಅಧ್ಯಕ್ಷರಾಗಿ 'ವರ್ಣಮಯ' ಅಮೆರಿಕದ 'ಕಪ್ಪು-ಬಿಳುಪು' ಒಪ್ಪಿಕೊಳ್ಳುವುದಾದರೂ ಹೇಗೆ ?

ಅಭಿವೃದ್ಧಿಗೆ ಪೂರಕವಲ್ಲದ

ಪುಟ 05 ರಿಂದ

ಸರಕಾಗುವುದನ್ನು ತಡೆಯದಿದ್ದರೆ ಬಡವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡಲು ಸಾಧ್ಯವಿಲ್ಲ.

ಇನ್ನು ಅನ್ನಭಾಗ್ಯದ ಹೆಸರಿನಲ್ಲಿ ಬಾರಿ ಪ್ರಚಾರ ಗಿಟ್ಟಿಸುತ್ತಿರುವ ಸಿದ್ದರಾಮಯ್ಯನವರು ಪಡಿತರ ಚೀಟಿಯಲ್ಲಿನ ಗೊಂದಲ ಮತ್ತು ಸಮಸ್ಯೆಯನ್ನು ಸರಿಪಡಿಸದೆ ಇರುವುದರಿಂದ ಯೋಜನೆ ನಿರುಪಯುಕ್ತವಾಗುತ್ತದೆ. ಪಡಿತರ ಚೀಟಿಯನ್ನು ಪಡೆಯುವುದು ಒಂದು ಸಾಹಸದ ಕೆಲಸವಾಗಿದೆ ಆಹಾರ ಇಲಾಖೆಯ ಅಧಿಕಾರಿಗಳ ಹೇಳಿಕೆಯ ಪ್ರಕಾರ ಎಲ್ಲರಿಗೂ ಸರಿಯಾದ ರೀತಿಯಲ್ಲಿ ಪಡಿತರ ಚೀಟಿಯನ್ನು ವಿತರಿಸಬೇಕಾದರೆ ಕನಿಷ್ಠ 6. ತಿಂಗಳು ಸಮಯಬೇಕೆಂದು ಹೇಳುತ್ತಿದ್ದಾರೆ. ಹಾಗಾದರೆ ಬಡವರಿಗೆ 1 ರೂಗೆ ಕೆ.ಜಿ. ಅಕ್ಕಿ ಸಿಗುವುದು ಯಾವಾಗ?

ಇನ್ನು ಸಿದ್ದರಾಮಯ್ಯನವರು ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ, ಕಾಂಗ್ರೆಸ್ಸಿನ ಆರ್ಥಿಕ ನೀತಿಗಳು ಜಾರಿಮಾಡಲೇಬೇಕು. ಅದರ ನೆರಳು ಸಿದ್ದರಾಮಯ್ಯನವರ ಬಜೆಟ್‌ನ ಮೇಲೆ ಬಿದ್ದಿದೆ. ಬಂಡವಾಳ ಹೂಡಿಕೆದಾರರ ಸಮಾವೇಶ ಮತ್ತು ಕೈಗಾರಿಕಾ ಸ್ನೇಹಿ ಎಂಬ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದಾರೆ. ವಿಶ್ವಬ್ಯಾಂಕ್ ಮತ್ತು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕುಗಳಿಂದ ಭಾರಿ ಪ್ರಮಾಣದಲ್ಲಿ ಸಾಲಗಳನ್ನು ಪಡೆಯಲು ಬಜೆಟ್‌ನಲ್ಲಿ ಸೂಚಿಸಲಾಗಿದೆ. ಈ ಸಾಲಗಳಿಗೆ ಕಳೆದ ವರ್ಷ ಬಡ್ಡಿ ಪಾವತಿ 6,852 ಕೋಟಿ ಇದ್ದರೆ ಈ ಬಾರಿ 8,500 ಕೋಟಿಗಳಾಗುವ ಸಾಧ್ಯತೆ ಇದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯದ ಅಭಿವೃದ್ಧಿ ಯಾವ ರೀತಿ ಸಾಧ್ಯವಾಗುತ್ತದೆ ಎಂಬುವುದನ್ನು ನೇರನುಡಿಗೆ ಹೆಸರಾದ ಸಿದ್ದರಾಮಯ್ಯನವರು ರಾಜ್ಯದ ಜನತೆಗೆ ಹೇಳಬೇಕಾಗಿದೆ.

ಅದುದರಿಂದ ಈ ಬಜೆಟ್ ಅಭಿವೃದ್ಧಿ ಪರವೂ ಅಲ್ಲ. ಜನರ ಕಲ್ಯಾಣದ ಪರವೂ ಅಲ್ಲ. ಬದಲಿಗೆ ಲೋಕಸಭಾ ಚುಣಾವಣೆಗಾಗಿ ಜನರನ್ನು ಮರಳುಗೊಳಿಸಲು ಮಾಡಿರುವ ಘೋಷಣೆಗಳಷ್ಟೇ ಆಗಿದೆ. ರಾಜ್ಯದ ಅಭಿವೃದ್ಧಿಗೆ ಪೂರಕವಲ್ಲದ ಈ ಬಜೆಟ್‌ನ ವಿರುದ್ದ ಪ್ರತಿಭಟನೆ ಹೋರಾಟಗಳನ್ನು ನಡೆಸಬೇಕಾಗಿದೆ.

ಶ್ರಮಜೀವಿಗಳಿಗೆ ಬಜೆಟ್‌ನಲ್ಲಿ ಅನ್ಯಾಯ.....

ಪುಟ 09 ರಿಂದ

ಖರ್ಚು ಮಾಡಿಲ್ಲ.

ಶ್ರಮಿಕರತ್ತ ತಿರುಗಬೇಕು ಸರ್ಕಾರದ ಮುಖ

ಈ ಹಿನ್ನೆಲೆಯಲ್ಲಿ ದುಡಿಯುವ ಜನರ ಸಾಮಾನ್ಯ ಬೇಡಿಕೆಗಳಾದ ಬೆಲೆ ಏರಿಕೆ ತಡೆಗಟ್ಟುವದು, ಗುತ್ತಿಗೆ ಪದ್ಧತಿ ನಿಷೇಧ, ಎಲ್ಲಾ ಕಾರ್ಮಿಕರಿಗೂ ಖಾತ್ರಿ ಯಾದ ಪಿಂಚಣಿ ನೀಡಬೇಕು, ಕಾರ್ಮಿಕ ಕಾನೂನುಗಳನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸುವುದು ಸೇರಿದಂತೆ ಪ್ರಮುಖ ಬೇಡಿಕೆಗಳಿಗಾಗಿ ಆಗ್ರಹಿಸಿ ರಾಜ್ಯದ ಎಪಿಎಂಸಿ ಮಾರುಕಟ್ಟೆಗಳಲ್ಲಿ, ಅಕ್ಕಿ ಗಿರಣಿ, ಎಣ್ಣೆ, ಬೇಳೆ ಮಿಲ್‌ಗಳಲ್ಲಿ, ಎಫ್‌ಸಿಐ ಗೋಡಾನ್, ಸೆಂಟ್ರಲ್ ಮತ್ತು ಸ್ಟೇಟ್ ವೇರ್ ಹೌಸ್, ಆಹಾರ ನಿಗಮ ಮತ್ತು ಪಾನೀಯ ನಿಗಮ, ರೇಷ್ಮೇ ಮಾರುಕಟ್ಟೆ ಮತ್ತು ರೇಲ್ವೇ ಗೂಡ್ ಶೆಡ್ ಹಾಗೂ ಸರ್ಕಾರಿ/ಖಾಸಗಿ ಬಸ್ ನಿಲ್ದಾಣಗಳು ಮತ್ತು ನಗರ/ಗ್ರಾಮೀಣ ಮಾರುಕಟ್ಟೆ ಪ್ರದೇಶದ ಹಮಾಲಿ ಕಾರ್ಮಿಕರು ಬೆಂಗಳೂರಿನಲ್ಲಿ ಜುಲೈ 18 ರಂದು ಸಾವಿರಾರು ಸಂಖ್ಯೆಯಲ್ಲಿ ಬೃಹತ್ ರ್‍ಯಾಲಿನ್ನು ನಡೆಸಿ ಸರ್ಕಾರದ ಗಮನ ಸೆಳೆಯಲು ಸಿಟಿ ರೈಲ್ವೆ ನಿಲ್ದಾಣದಿಂದ ಫ್ರೀಡಂಪಾರ್ಕವರೆಗೆ ಮೆರವಣಿಗೆ ನಡೆಸಿದರು.

ಫ್ರೀಡಂ ಪಾರ್ಕನಲ್ಲಿ ಪ್ರತಿಭಟನಾ ನಡೆದ ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್, ಹಮಾಲಿ ಕಾರ್ಮಿಕರ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ, ಅಧ್ಯಕ್ಷರಾದ ಮಹೇಶ ಪತ್ತಾರ್ ಮಾತನಾಡಿ ರಾಜ್ಯ ಸರ್ಕಾರ ಬಜೆಟ್ ಮಂಡನೆಯಲ್ಲಿ ಹಮಾಲಿ ಕಾರ್ಮಿಕರು ಸೇರಿದಂತೆ ಒಟ್ಟಾರೆ ಕಾರ್ಮಿಕ ವರ್ಗವನ್ನು ಕಡೆಗಣಿಸಿರುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು.

ನಂತರದಲ್ಲಿ ಸರ್ಕಾರದ ಕಾರ್ಮಿಕ ಸಚಿವರ ಪರವಾಗಿ ಉಪ ಕಾರ್ಮಿಕ ಆಯುಕ್ತರಾದ ಡಾ/ ಮಂಜುನಾಥ್, ಕೃಷಿ ಮಾರುಕಟ್ಟೆ ಸಚಿವರ ಪರವಾಗಿ ಕೃಷಿ ಮಾರಾಟ ಇಲಾಖೆ ನಿರ್ದೇಶಕರಾದ ಪಿ.ಎಸ್ ವಸ್ತದ್, ಹೆಚ್ಚುವರಿ ನಿರ್ದೇಶಕರಾದ ಡಾ/ ಸೋಮಶೇಖರ್ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿ ಮಂಡಿಸಿರುವ ಬೇಡಿಕೆಗಳನ್ನು ಈಡೇರಿಸುವ ಸಂಬಂಧ ಕೂಡಲೇ ಕ್ರಮ ಕೈಗೊಳ್ಳುವ ಭರವಸೆಯನ್ನು ಸಭೆಗೆ ನೀಡಿದರು. ಆದರೆ ಅಧಿಕಾರಿಗಳು ಭರವಸೆ ಪ್ರಕಾರ ನಡೆಯದೇ ಹೋದ್ರೆ ಮುಂದಿನ ದಿನಗಳಲ್ಲಿ ಎಪಿಎಂಸಿ ಮಾರುಕಟ್ಟೆಗಳನ್ನು ಮಿಲ್-ಗೋಡೌನ್‌ಗಳನ್ನು ಬಂದ್ ಮಾಡುವ ಎಚ್ಚರಿಕೆಯೊಂದಿಗೆ ಹೋರಾಟವನ್ನು ಕೊನೆಗೊಳಿಸಲಾಯಿತು.

ಪ್ರತಿಭಟನೆ ನೇತೃತ್ವವನ್ನು ರಾಜ್ಯ ಹಮಾಲಿ ಸಂಘದ ಪದಾಧಿಕಾರಿಗಳಾದ ಹೆಚ್. ತಿಪ್ಪಯ್ಯ, ನಾಗಪ್ಪನಾಯ್ಕ, ಸೈಯದ್ ಮುಜೀಬ್, ನಾರಾಯಣ ಕಾಳೆ, ಮಾಗುಂಡಪ್ಪ ಅಂಗಡಿ, ಈ. ನಾಗರಾಜ, ತಿಮ್ಮಣ್ಣ. ಎ.ಎಲ್.ಲಕ್ಷಣ್ ಹಂದ್ರಾಳ, ಗುರುಸಿದ್ದಪ್ಪ ಅಂಬಿಗೇರಾ, ತಿಪ್ಪೇಸ್ವಾಮಿ, ಹನುಮಂತಪ್ಪ ಜಾಲಗಾರ, ತಿಮ್ಮೇಗೌಡ, ಮಹಾದೇವ, ಲಾಲಸಾಬ್, ಸಾಬುಗೊಗಗಡ್ಡಿ, ನಾಗಮ್ಮ, ಗೀತಾ ಚಕ್ರಸಾಲಿ, ಪಿ.ಆರ್ ಭರತ್, ಎನ್. ಕೆ ಸುಬ್ರಮಣ್ಯ, ಬಾಗೆಪಲ್ಲಿಯ ಆಂಜನೇಯ ರೆಡ್ಡಿ ಹಾಗೂ ಮುಷ್ತಾಪ್ ಮೊದಲಾದವರು ವಹಿಸಿದ್ದರು.

JANASHAKTHI KANNADA VARA PATRIKE JUL 28, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP



'ತಾಳ್ಮೆಯ ಕಟ್ಟೆ ಒಡೆಯಲು ಅವಕಾಶ ಮಾಡಿಕೊಡದಿರಿ – ಸೇವೆ ಖಾಯಂ ಮಾಡಿರಿ'–

ಪೌರ ಕಾರ್ಮಿಕರ ಎಚ್ಚರಿಕೆ

ಹರೀಶ್ ನಾಯ್ಕ್

15-20 ವರ್ಷಗಳಿಂದ ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಸಾವಿರಾರು ಪೌರ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಿ 'ಕರ್ನಾಟಕ ರಾಜ್ಯ ಮುನಿಸಿಪಾಲಿಟಿ ಪೌರಕಾರ್ಮಿಕರ ಸಂಘ (ರಿ)' ಜುಲೈ 11, 2013 ರಂದು 'ವಿಧಾನ ಸೌಧ ಚಲೋ' ಚಳುವಳಿಯನ್ನು ನಡೆಸಿತು.

ಅಂದು ಬೆಂಗಳೂರಿನ ಕೇಂದ್ರ ರೈಲ್ವೆ ನಿಲ್ದಾಣದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಸ್ವಾತಂತ್ರ್ಯ ಉದ್ಯಾನದ ಕಡೆ ಹೆಜ್ಜೆ ಹಾಕಿತು. ಅಲ್ಲಿ ಪ್ರತಿಭಟನಾ ಸಭೆ ನಡೆಯಿತು. ಹಲವು ವರ್ಷಗಳಿಂದ 'ಖಾಯಂ ಆಗುತ್ತದೆ' ಎಂಬ ಆಸೆ, ನಂಬಿಕೆಗಳೊಂದಿಗೆ ದುಡಿಯುತ್ತಿರುವ ಪೌರಕಾರ್ಮಿಕರು ಕಾರ್ಮಿಕರ ತಾಳ್ಮೆಯ ಕಟ್ಟೆ ಒಡೆಯಲು ಅವಕಾಶ ಕೊಡಬೇಡಿ ಎಂದು ಸರ್ಕಾರವನ್ನು ಆಗ್ರಹಿಸಿದರು.

ರಾಜ್ಯದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ನಗರಪಾಲಿಕೆ, ಮಹಾನಗರ ಪಾಲಿಕೆಗಳಲ್ಲಿ ಯುಜಿಡಿಗಳಲ್ಲಿ ಸ್ವಚ್ಛತೆಗಾಗಿ ಕೆಲಸ ಮಾಡುವ ಜಾಡಮಾಲಿಗಳು, ಕಸತುಂಬುವರು, ಚರಂಡಿ ಸ್ವಚ್ಛಗೊಳಿಸುವರು, ನೀರಗಂಟಿಗಳು, ವಾಹನ ಚಾಲಕರುಗಳು, ಕಛೇರಿ ಸಹಾಯಕರು, ಕಂಪ್ಯೂಟರ್ ಆಪರೇಟರ್‌ಗಳು ಮತ್ತಿತರೆ ಹುದ್ದೆಗಳಲ್ಲಿ ಸಾವಿರಾರು ಕಾರ್ಮಿಕರು ನೌಕರರು ಹಲವಾರು ವರ್ಷಗಳಿಂದ ದುಡಿಯುತ್ತಿದ್ದಾರೆ.

ಕೆಲಸದ ಭದ್ರತೆ, ಸಾಮಾಜಿಕ ಭದ್ರತೆ ಒದಗಿಸದೇ ಕಾರ್ಮಿಕ ಕಾನೂನುಗಳಡಿ ಸೂಕ್ತ ಸೌಲಭ್ಯ ನೀಡದೆ ಸ್ವಚ್ಛತೆಯ ಕೆಲಸ ಮಾಡುವ ಕಾರ್ಮಿಕರು ಸೇರಿದಂತೆ ಹಲವು ಕೆಲಸಗಾರರಿಗೆ ಅಗತ್ಯವಾದ ಕನಿಷ್ಠ ರಕ್ಷಣಾ ಸಾಮಗ್ರಿಗಳನ್ನು ನೀಡದೆ ಬಹುತೇಕ ಕಡೆಗಳಲ್ಲಿ 2,000 ರೂಪಾಯಿಗಳ ತಿಂಗಳ ಸಂಬಳ ನೀಡಿ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿ ಹೆಸರಿನಲ್ಲಿ ಜೀತದಾಳುಗಳಂತೆ ಈ ಕಾರ್ಮಿಕರನ್ನು ದುಡಿಸಲಾಗುತ್ತಿದೆ ಎಂದು ಈ ಸಂದಭದಲ್ಲಿ ಮಾತನಾಡಿದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್ ಅವರು ಸರ್ಕಾರದ ಅನ್ಯಾಯಯುತ ಧೋರಣೆಯನ್ನು ತೀವ್ರವಾಗಿ ಖಂಡಿಸಿದರು.

'ಗುತ್ತಿಗೆ (ನಿಯಂತ್ರಣ) ನಿಷೇಧ ಕಾಯ್ದೆ' ಅಡಿಯ ನಿಯಮಾವಳಿಗಳ ಪ್ರಕಾರ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂಬುದನ್ನು ಉಲ್ಲಂಘಿಸಲಾಗುತ್ತಿದೆ ಎಂದು ಸಂಘಟನೆಯ ಮುಖಂಡರು ಈ ಸಂದರ್ಭದಲ್ಲಿ ಸರ್ಕಾರವನ್ನು ಕಟುವಾಗಿ ಟೀಕಿಸಿದರು.

ಇದು ಶೋಷಣೆ ಮತ್ತು ಅಸಂವಿಧಾನಿಕ

ಕಾನೂನಿನ ಅನ್ವಯವೂ ಹಾಗೂ ದೇಶದ ಸುಪ್ರಿಂ ಕೋರ್ಟ್ ತನ್ನ ತೀರ್ಪುಗಳ ಮೂಲಕ ನೀಡಿರುವ ನಿರ್ದೇಶನದ ಅನ್ವಯವೂ ಖಾಯಂ ಸ್ವರೂಪದ ಕೆಲಸಗಳಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿ ಅಸಂವಿಧಾನಿಕ ಎಂಬುದು ಸ್ಪಷ್ಟವಾಗಿದೆ. ಆದರೂ ಈ ಕಾನೂನು ಮತ್ತು ತೀರ್ಪುಗಳ ನಗ್ನ ಉಲ್ಲಂಘನೆ ಸರ್ಕಾರದ ಕಡೆಯಿಂದಲೇ ನಿರಂತರವಾಗಿ ನಡೆಯುತ್ತಿರುವುದಕ್ಕೆ ಸಂಘಟನೆಯ ಮುಖಂಡರು ಇಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ಪ್ರತಿಭಟನೆಯಲ್ಲಿ ತುಮಕೂರು, ಹಾಸನ, ಬೆಳಗಾಂ, ಬಾಗಲಕೋಟೆ, ಕೊಪ್ಪಳ, ಚಿಕ್ಕಬಳ್ಳಾಪುರ, ಕೋಲಾರ, ದಾವಣಗೆರೆ, ಬಳ್ಳಾರಿ, ಬಿಜಾಪುರ, ಗದಗ, ಹಾವೇರಿ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಚಿಕ್ಕಬಳ್ಳಾಪುರ ಜಿಲ್ಲೆಗಳ ಸಾವಿರಾರು ಪೌರಕಾರ್ಮಿಕರು ಭಾಗವಹಿಸಿದ್ದರು.

ಈ ಪ್ರತಿಭಟನೆಯಲ್ಲಿ ಸಂಘದ ಗೌರವಾಧ್ಯಕ್ಷರಾದ ಕಾಂ. ಎಸ್.ಪ್ರಸನ್ನಕುಮಾರ್, ಕಾರ್ಯಾಧ್ಯಕ್ಷ ಹರೀಶ್ ನಾಯಕ್, ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್, ರಾಜ್ಯ ಉಪಾಧ್ಯಕ್ಷ ಧರ್ಮೇಶ್, ಸಿಐಟಿಯುನ ರಾಜ್ಯ ಕಾರ್ಯದರ್ಶಿ ಕೆ. ಮಹಂತೇಶ್ ಮುಂತಾದವರು ಮಾತನಾಡಿ ನೊಂದು ಬೆಂದ ಈ ಕಾರ್ಮಿಕರ ಹೋರಾಟಕ್ಕೆ ತಮ್ಮ ಹೃತ್ಪೂರ್ವಕ ಬೆಂಬಲ ಘೋಷಿಸಿದರು.

ಸಂಘಟನೆಯ ಕೆ.ಮಂಜುನಾಥ್, ರಾಜ್ಯ ಖಜಾಂಚಿ ವೆಂಕಟೇಶ್, ಚಂದ್ರಪ್ಪ, ಉಮೇಶ್ ಪಡಸಲಗಿ, ಶಾನೂರ ಕಾಶಪ್ಪ ಗುಡ್ಲಾರ, ಪ್ರಕಾಶ್, ಎನ್. ಕೆ. ಸುಬ್ರಮಣ್ಯಂ, ಹುಲಗಪ್ಪ, ಲಕ್ಷ್ಮಣ ಹಂದ್ರಾಳ ಮತ್ತಿತರ ಮುಖಂಡರುಗಳು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಪ್ರಶ್ನೆಗಳ ಸುರಿಮಳೆ

ಮನವಿಪತ್ರ ಸ್ವೀಕರಿಸಿದ ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇ[illegible] ಅಕ್ರಂ ಪಾಷರವರ ಎದುರು ಕಾ[illegible] ಪ್ರಶ್ನೆಗಳ ಸುರಿಮಳೆಗೈದು ತಮ್ಮ [illegible] ವ್ಯಕ್ತಪಡಿಸಿದರು. ನಂತರ ಜಂಟಿ ನಿದೇ[illegible] ಮರುದಿನ ಪೌರಾಡಳಿತ ಸಚಿವರು [illegible] ಸಂಘಟನೆಯ ಪ್ರತಿನಿಧಿಗಳ [illegible] ಸಭೆ ಏರ್ಪಡಿಸುವ ಭರವಸೆ [illegible]ರಿಂದ ಅಂದಿನ ಪ್ರತಿಭಟ[illegible] ಮುಕ್ತಾಯಗೊಳಿಸಲಾಯಿತು.

ಇವರ ಕತೆ ಏನು ?

ಸರ್ಕಾರವು ಇತ್ತೀಚೆಗೆ ಮೈಸೂರು[illegible] ಸಂಬಂಧಿಸಿದಂತೆ ಪೌರ ಕಾರ್ಮಿಕರ[illegible] ಗುತ್ತಿಗೆ ಟೆಂಡರ್ ರದ್ದು ಮಾಡಿ ತೀ[illegible] ಕೈಗೊಂಡಿದೆಯೆಂದು, ಹಂತಹ[illegible] ಎಲ್ಲ ಕಡೆಗಳಲ್ಲೂ ಸರ್ಕಾರ ಇಂತ[illegible] ಅನುಸರಿಸುವುದಾಗಿ ಹೇಳಿದೆ ಎಂದೂ[illegible] ವರದಿಯಾಗಿದೆ.

ಇದೇ ಸಂದರ್ಭದಲ್ಲಿ ಸ[illegible] ಈ ಪೌರ ಕಾರ್ಮಿಕರ ಹು[illegible] ಹೊಸ ನೇಮಕಾತಿ ಮಾಡಿಕೋ[illegible] ಎಂದು ಕೂಡ ಸರ್ಕಾರ ಪ್ರಕಟಿಸಿ[illegible] ವರದಿಯಾಗಿದೆ. ಸ್ಥಳೀಯ ಸಂ[illegible] ಕಾಯಂ ಕಾರ್ಮಿಕರು ಬೇಕು ಎ[illegible] ನಿರ್ವಿವಾದಿತ ವಿಚಾರ. ಆದರೆ [illegible] ನೇಮಕಾತಿ ಆದರೆ ಈ ಸಂದ[illegible] ಈಗಾಗಲೇ ಹಲವಾರು ವರ್ಷ[illegible] ಗುತ್ತಿಗೆ, ಹೊರ ಗುತ್ತಿಗೆ, ದಿ[illegible] ಹೆಸರಿನಲ್ಲಿ ಹತ್ತಾರು ವರ್ಷ ಕೆಲಸ [illegible] ಬದುಕನ್ನು ಅರೆಬರೆ ಸವೆಸಿಕೊಂ[illegible] ಕಾರ್ಮಿಕರು ಏನು ಮಾಡಬೇಕು [illegible] ಭವಿಷ್ಯ ಏನು ಎಂದು ಮಾತ್ರ ಸ[illegible] ಹೇಳಿಲ್ಲ. ಸರ್ಕಾರಕ್ಕೆ ನ್ಯಾಯಾನ್ಯಾ[illegible] ವಿವೇಚನೆ ಇದ್ದಿದ್ದರೆ ಈಗಾಗಲೇ ಹ[illegible] ವರ್ಷ ಸೇವೆ ಸಲ್ಲಿಸಿರುವ ಕಾರ್ಮಿ[illegible] ಕಾಯಂ ಮಾಡುವ ನಿಟ್ಟಿನಲ್ಲಿ [illegible] ಮುಂದಾಗುತ್ತಿತ್ತು. ಮತ್ತು ಈ ಪ್ರಶ್ನೆ [illegible] ಆಗುವವರೆಗೆ ಸಮಾನ ಕೆಲಸಕ್ಕೆ ಸ[illegible] ವೇತನ ನೀತಿಯ ಅಡಿಯಲ್ಲಿ ದಿನ[illegible] ಗುತ್ತಿಗೆ ಕಾರ್ಮಿಕರಿಗೂ ಕ[illegible] ಕಾರ್ಮಿಕರಿಗೆ ನೀಡುವ ವೇತನ [illegible] ಮುಂದಾಗುತ್ತಿತ್ತು.

ಮತ್ತೆ ಪ್ರತಿಭಟನೆ

ರಾಜ್ಯ ಸರ್ಕಾರದ ಇತ್ತೀಚಿನ ಬಜೆ[illegible] ಪೌರ ಕಾರ್ಮಿಕರ ಹೊಸ ನೇಮಕ[illegible] ವಿಷಯ ಮಾತ್ರ ಪ್ರಸ್ತಾಪವಾಗಿದೆ. [illegible]ರೆ ಈಗಾಗಲೇ ಕೆಲಸ ಮಾಡಿರುವ [illegible] ಕಾರ್ಮಿಕರ ಭವಿಷ್ಯದ ಕುರಿತು [illegible] ಹೇಳಿಲ್ಲ. ಅವರ ಆತಂಕಗಳ [illegible] ಯಾವ ಕ್ರಮವನ್ನು ಕೈಗೊಂಡಿಲ್ಲ[illegible] ಸಂಘಟನೆಯು ರಾಜ್ಯವ್ಯಾಪಿ ಪ್ರತಿ[illegible] ನಡೆಸಲು ಕರೆ ನೀಡಿತ್ತು. ಈ [illegible] ಅನ್ವಯ ತುಮಕೂರು, ಹಾಸನ, [illegible]ಗೂಡು, ಮಧುಗಿರಿ ಮತ್ತು ರಾಜ್ಯದ [illegible] ಭಾಗಗಳಲ್ಲಿ ಪ್ರತಿಭಟನೆ ನಡೆದ ವರ[illegible] ಬರುತ್ತಿವೆ.

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout,
BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout,
560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12,
18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross,
Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout,
BANGALORE-560086 Editor : NITHYANANDASWAMI